**ಸಂಪುಟ:** 05 **ಸಂಚಿಕೆ:** 124 **ಪುಟಗಳು:** 08 **ಗುರುವಾರ** 17 **ಜುಲೈ** 2025 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**
ನೀವು ಇನ್ನೊಬ್ಬರಿಗೆ ಮಾಡಬಹುದಾದ ದೊಡ್ಡ ಒಳ್ಳೆಯದು ನಿಮ್ಮ ಸಂಪತ್ತನ್ನು ಹಂಚಿಕೊಳ್ಳುವುದಲ್ಲ, ಆದರೆ ಅವರಿಗೆ ತಮ್ಮದೇ ಆದದ್ದನ್ನು ಬಹಿರಂಗಪಡಿಸುವುದು.

# ಸಿದ್ದರಾಮಯ್ಯ 5 ವರ್ಷ ಸಿಎಂ ಆಗಿರ್ತಾರಾ?

## ಈ ಪ್ರಶ್ನೆಗೆ ಒಬಿಸಿ ರಾಷ್ಟ್ರೀಯ ಅಧ್ಯಕ್ಷ ಅನಿಲ್ ಜೈಹಿಂದ್ ಕಕ್ಕಾಬಿಕ್ಕಿ!

• **ಉದಯವಾಹಿನಿ, ಬೆಂಗಳೂರು**

ಅಖಿಲ ಭಾರತ ಹಿಂದುಳಿದ ವರ್ಗಗಳ ಸಲಹಾ ಸಮಿತಿಯ ಮೊದಲ ಸಭೆಯ ಬಳಿಕ ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಸಿಎಂ ಬದಲಾವಣೆ ವಿಚಾರವಾಗಿ ಎದುರಾದ ಪ್ರಶ್ನೆಗೆ ಹಿಂದುಳಿದ ವರ್ಗಗಳ ಸಲಹಾ ಸಮಿತಿಯ ರಾಷ್ಟ್ರೀಯ ಅಧ್ಯಕ್ಷ ಅನಿಲ್ ಜೈ ಹಿಂದ್ ಕಕ್ಕಾಬಿಕ್ಕಿಯಾದರು. ದಿಢೀರಾಗಿ ಎದುರಾದ ಪ್ರಶ್ನೆಗೆ ಸ್ಪಷ್ಟವಾಗಿ ಉತ್ತರಿಸಲು ಅವರಿಂದ ಸಾಧ್ಯವಾಗಿಲ್ಲ. ಇದೇ ಸಂದರ್ಭದಲ್ಲಿ ಹಿರಿಯ ಕಾಂಗ್ರೆಸ್ ಮುಖಂಡ ಬಿ.ಕೆ ಹರಿಪ್ರಸಾದ್ ಅವರು ಸಹಾಯಕ್ಕೆ ಧಾವಿಸಿದ ಪ್ರಸಂಗ ನಡೆಯಿತು.

ಬೆಂಗಳೂರು ನಗರದ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳ ಬಗ್ಗೆ ಅನಿಲ್ ಜೈಹಿಂದ್ ಮಾತನಾಡುತ್ತಿದ್ದರು. ಇದೇ ಸಂದರ್ಭದಲ್ಲಿ ರಾಜ್ಯದಲ್ಲಿ ನಡೆಯುತ್ತಿರುವ ನಾಯಕತ್ವ ಬದಲಾವಣೆ ಬಗ್ಗೆ ಪ್ರಶ್ನೆ ತೂರಿಬಂತು. ಹಿಂದುಳಿದ ವರ್ಗಕ್ಕೆ ಸೇರಿದ ಮುಖ್ಯಮಂತ್ರಿಯನ್ನು ಬದಲಾವಣೆ ಮಾಡಲಾಗುತ್ತಿದೆ ಎಂಬ ಚರ್ಚೆ ಇದೆ, ಇದಕ್ಕೆ ಏನು



ಪ್ರತಿಕ್ರಿಯೆ ಎಂದು ಕೇಳಲಾಯ್ತು. ಕಾಂಗ್ರೆಸ್ ಪಕ್ಷದ ನೀತಿ ಎಲ್ಲರಿಗೂ ತಿಳಿದಿದೆ. ಒಬಿಸಿ ಪರವಾಗಿ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಇದ್ದಾರೆ. ಇದೇ ಸಂದರ್ಭದಲ್ಲಿ ಮಧ್ಯಪ್ರವೇಶ ಮಾಡಿದ ಸಿದ್ದರಾಮಯ್ಯ ಈ ಬಗ್ಗೆ ಹೈಕಮಾಂಡ್ ನಿರ್ಧಾರ ಕೈಗೊಳ್ಳಲಿದೆ ಎಂದು ಹೇಳಿ ಎಂಬ ಸಲಹೆ ನೀಡಿದರು.

ಬಳಿಕ ಸಿದ್ದರಾಮಯ್ಯ ಮಾತನಾಡಿ, ಹೈಕಮಾಂಡ್ ನಿರ್ಧಾರವನ್ನು ನಾನು ಮತ್ತು ಡಿಕೆ ಶಿವಕುಮಾರ್ ಪಾಲನೆ ಮಾಡುತ್ತೇವೆ ಎಂದರು. ಬಳಿಕ ಬಿಕೆ ಹರಿಪ್ರಸಾದ್ ಮಾತನಾಡಿ, ನಾಯಕತ್ವ ಬದಲಾವಣೆ ಎಂಬುವುದು ಬಿಜೆಪಿ ಸೃಷ್ಟಿಸುತ್ತಿರುವ ಗೊಂದಲ. ಇದೆಲ್ಲದಕ್ಕೆ ಇದೀಗ ಪೂರ್ಣ ವಿರಾಮ ಬಿದ್ದಿದೆ. ಈ ಬಗ್ಗೆ ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ್

**ಮುಂದಿನ ಮೂರು ತಿಂಗಳಲ್ಲಿ ತೀರ್ಮಾನ**

ಈಗಾಗಲೇ ಸ್ಪಷ್ಟನೆ ನೀಡಿದ್ದಾರೆ. ಸಿದ್ದರಾಮಯ್ಯ ನಾನೇ 5 ವರ್ಷ ಸಿಎಂ ಎಂದು ಹೇಳಿದ್ದಾರೆ.

ಇದಕ್ಕೆ ಡಿಕೆಶಿ ಅವರು ತಮ್ಮದೇ ಆದ ರೀತಿಯಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ. ಅದೆಲ್ಲವೂ ಮುಕ್ತಾಯಗೊಂಡಿದೆ. ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್ ಪಕ್ಷ ಹಿಂದುಳಿದ ವರ್ಗಗಳ ನಾಯಕರಿಗೆ ಸದಾ ಬೆಂಬಲ ನೀಡುತ್ತಿದೆ ಎಂದರು.

ನಂತರ ಬಿಜೆಪಿ ಕೂಡಾ ವರದಿ ಸ್ವೀಕಾರ ಮಾಡಿಲ್ಲ. ಸಮೀಕ್ಷೆ ನಡೆಸಿ ಹತ್ತು ವರ್ಷ ಆಗಿದ್ದರಿಂದ ಮರು ಸಮೀಕ್ಷೆಗೆ ತೀರ್ಮಾನ ಮಾಡಲಾಗಿದೆ. ಮೂರು ತಿಂಗಳಲ್ಲಿ ವರದಿ ನೀಡಲು ಸೂಚನೆ ನೀಡಲಾಗಿದೆ ಎಂದರು. ತೆಲಂಗಾಣ ಸರ್ಕಾರ ಈಗಾಗಲೇ ಜಾತಿ ಸಮೀಕ್ಷೆಯನ್ನು ಜಾರಿಗೊಳಿಸಿದ ಹಿನ್ನಲೆಯಲ್ಲಿ ನಿರ್ಣಯದಲ್ಲಿ ತೆಲಂಗಾಣ ಮಾದರಿ ಎಂದು ಉಲ್ಲೇಖಿಸಲಾಗಿದೆ ಎಂದು ಸವಿವರವಾಗಿ ಸುದ್ದಿಗೋಷ್ಠಿಯಲ್ಲಿ ಮಂಡಿಸಿದರು.

### ಜಾತಿ ಗಣತಿಗೆ ತೆಲಂಗಾಣ ಮಾದರಿ

**ಜಾತಿ ಗಣತಿ ಮರು ಸಮೀಕ್ಷೆಯ ಬಗ್ಗೆ ಸಿದ್ದರಾಮಯ್ಯ ಮಾತನಾಡಿ, 2013 ರಲ್ಲಿ ನಮ್ಮ ಸರ್ಕಾರದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಲು ನಿರ್ಧಾರ ಕೈಗೊಂಡಿತ್ತು. ನಮ್ಮ ಸರ್ಕಾರದ ಅವಧಿಯಲ್ಲಿ ಸಮೀಕ್ಷಾ ವರದಿಯನ್ನು ನೀಡಿರಲಿಲ್ಲ. ಸಮ್ಮಿಶ್ರ ಸರ್ಕಾರದಲ್ಲಿ ವರದಿ ಕೊಡಲು ಕಾಂತರಾಜು ಅವರು ಸಮಯ ಕೇಳಿದರೂ ಎಚ್ ಡಿ ಕೆ ಕೊಡಲಿಲ್ಲ. ಪುಟ್ಟರಂಗ ಶೆಟ್ಟಿ ಅವರಿಗೆ ವರದಿ ಪಡೆದುಕೊಳ್ಳಬಾರದು ಎಂದು ಕುಮಾರಸ್ವಾಮಿ ಸೂಚನೆ ನೀಡಿದರು ಎಂದರು.**

## ಮತ್ತೆ ಸ್ಮಾರ್ಟ್ ಮೀಟರ್ ಹಗರಣ ಕೆದಕಿದ ಬಿಜೆಪಿ ಸಚಿವ ಜಾರ್ಜ್

• **ಉದಯವಾಹಿನಿ, ಬೆಂಗಳೂರು**

ಇಂಧನ ಇಲಾಖೆಯಲ್ಲಿ ಕೇಳಿಬಂದಿರೋ ಸ್ಮಾರ್ಟ್ ಮೀಟರ್ ಹಗರಣ ಈಗ ಹೊಸ ರೂಪ ಪಡೆದುಕೊಂಡಿದೆ. ಈ ಹಿಂದೆ ಲೋಕಾಯುಕ್ತಕ್ಕೆ ದೂರು ನೀಡಿದ್ದರೂ ಯಾವುದೇ ತನಿಖಾ ಪ್ರಗತಿ ಕಾಣದೇ ಇರೋದ್ರಿಂದ ಮೂವರು ಬಿಜೆಪಿ ಶಾಸಕರು ಕೋರ್ಟ್ ಮೊರೆ ಹೋಗಿದ್ದಾರೆ. ಸಚಿವ ಕೆ.ಜೆ ಜಾರ್ಜ್ ಹಾಗೂ ಬೆಸ್ಕಾಂನ ಹಿರಿಯ ಅಧಿಕಾರಿಗಳ ವಿರುದ್ಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದಾರೆ.

ಬಿಜೆಪಿ ಶಾಸಕ ಅಶ್ವಥ್‌ನಾರಾಯಣ, ಎಸ್.ಆರ್ ವಿಶ್ವನಾಥ್ ಹಾಗೂ ಧೀರಜ್ ಮುನಿರಾಜು ಈ ದೂರು ದಾಖಲಿಸಿದ್ದಾರೆ, ಅರ್ಜಿದಾರರ ಪರವಾಗಿ ವಕೀಲೆ ಲಕ್ಷ್ಮಿ ಅಯ್ಯಂಗಾರ್ ಅವರು ವಾದ ಮಂಡಿಸಿದ್ದಾರೆ. ಬ್ಲ್ಯಾಕ್ ಲಿಸ್ಟ್‌ನಲ್ಲಿರೋ ಕಂಪನಿ ಜೊತೆ ಒಡಂಬಡಿಕೆ ಮಾಡಿಕೊಂಡು ದುಬಾರಿ ದರ ವಿಧಿಸಲಾಗಿದೆ ಅಂತ ವಾದಿಸಿದ್ರು. ವಾದ ಪ್ರತಿವಾದಗಳನ್ನು ಆಲಿಸಿ ಕೋರ್ಟ್ ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಿತು. ಇನ್ನೂ ಖಾಸಗಿ ದೂರಿನ ಬಗ್ಗೆ ಪ್ರತಿಕ್ರಿಯೆ ನೀಡಿದ ಸಚಿವರಾದ ಕೆ.ಜೆ. ಜಾರ್ಜ್, ದೂರುದಾರರು ಕೋರ್ಟ್ ಮೊರೆ ಹೋಗಿದ್ದಾರೆ. ನಾವು ಕೂಡ ವಿವರಣೆ ನೀಡುತ್ತೇವೆ. ಅಂತಿಮವಾಗಿ ಕೋರ್ಟ್ ಈ ಬಗ್ಗೆ ನಿರ್ಧಾರ ಮಾಡಲಿದೆ ಅಂದ್ರು. ಸ್ಮಾರ್ಟ್ ಮೀಟರ್ ಟೆಂಡರ್‌ನಲ್ಲಿ ಕೇವಲ ಮೂರು ಕಂಪನಿ ಮಾತ್ರ ಟೆಂಡರ್‌ನಲ್ಲಿದ್ದವು.

## 50% ಮೀಸಲಾತಿ ಮಿತಿ ತೆಗೆದು, 75%ಗೆ ಹೆಚ್ಚಿಸಬೇಕು: ಸಿದ್ದರಾಮಯ್ಯ

• **ಉದಯವಾಹಿನಿ, ಬೆಂಗಳೂರು**

ಎಐಸಿಸಿ ಒಬಿಸಿ ಸಲಹಾ ಮಂಡಳಿ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಮಂಡಿಸಿದ ಮೊದಲ ನಿರ್ಣಯದಲ್ಲೇ ಮೀಸಲಾತಿ ಹೆಚ್ಚಳ ಪ್ರಸ್ತಾಪ ಮಾಡಿದ್ದಾರೆ. ಬೆಂಗಳೂರು ಡಿಕ್ಲರೇಶನ್ ಹೆಸರಿನ ನಿರ್ಣಯದಲ್ಲಿ ಪ್ರಸ್ತುತ ಇರುವ ಒಟ್ಟಾರೆ ಮೀಸಲಾತಿ ಮಿತಿ 50% ತೆಗೆದು, 75%ಗೆ ಹೆಚ್ಚಳ ಮಾಡುವ ಹೋರಾಟಕ್ಕೆ ನಿರ್ಣಯ ಕೈಗೊಂಡಿದ್ದಾರೆ.

ಈ ಮೂಲಕ ಒಬಿಸಿ ವರ್ಗಕ್ಕೂ ಅದರ ಸೌಲಭ್ಯ ಸಿಗಬೇಕು ತೆಲಂಗಾಣ ಮಾದರಿಯಲ್ಲಿ ರಾಷ್ಟ್ರೀಯ ಜಾತಿಗಣತಿ ಆಗಬೇಕು. ಖಾಸಗಿ ಶೈಕ್ಷಣಿಕ ಸಂಸ್ಥೆಗಳಲ್ಲಿಯೂ ಮೀಸಲಾತಿ ಕಲ್ಪಿಸಬೇಕೆಂದು ಸಿದ್ದರಾಮಯ್ಯ ಅವರು ಮಂಡಿಸಿದ ಬೆಂಗಳೂರು ಡಿಕ್ಲರೇಶನ್ ನಿರ್ಣಯಕ್ಕೆ ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದ್ದಾರೆ. ಇದೇ ವೇಳೆ ಎಐಸಿಸಿ ಒಬಿಸಿ ಸಲಹಾ ಮಂಡಳಿಯ ಸಭೆಯಲ್ಲಿ ರಾಹುಲ್ ಗಾಂಧಿಗೆ ನ್ಯಾಯಯೋಧ ಬಿರುದು ನೀಡಿ, ಜಾತಿಗಣತಿ ರಾಹುಲ್ ಹೋರಾಟದ ಫಲ ಎಂದು ಅಭಿನಂದಿಸಿದ್ದಾರೆ. ಒಟ್ಟು 3 ನಿರ್ಣಯಗಳನ್ನ ಅಂಗೀಕರಿಸಲಾಗಿದೆ.

## ಕರಾವಳಿ ಭಾಗದ ಜಿಲ್ಲೆಗಳಲ್ಲಿ ಶಾಲಾ-ಕಾಲೇಜುಗಳಿಗೆ ರಜೆ ಘೋಷಣೆ

• **ಉದಯವಾಹಿನಿ, ಬೆಂಗಳೂರು**

ಕರಾವಳಿ ಭಾಗದ ಜಿಲ್ಲೆಗಳಲ್ಲಿ ವರುಣನ ಅರ್ಭಟ ಮುಂದುವರೆದಿದೆ. ಹೀಗಾಗಿ ಉಡುಪಿ, ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗಳಲ್ಲಿ ಶಾಲಾ-ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಗಿದೆ. ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಜೂನ್ ಆರಂಭದಲ್ಲಿ ಅಬ್ಬರಿಸಿದ್ದ ವರುಣ ಇದೀಗ ಏಕಾಏಕಿ ಸೈಲೆಂಟ್ ಆಗಿದ್ದು, ಮಳೆಗಾಗಿ ಜನರು ಆಕಾಶದತ್ತ ನೋಡುವಂತಾಗಿದೆ. ಆದ್ರೆ, ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿ ಮಳೆಯಾರ್ಭಟ ಸ್ವಲ್ಪವೂ ಕಡಿಮೆಯಾಗಿಲ್ಲ. ಇದರಿಂದ ಶಾಲೆ-ಕಾಲೇಜುಗಳಿಗೆ ರಜೆ ನೀಡಲಾಗಿದೆ. ಉಡುಪಿ ಜಿಲ್ಲೆಯಲ್ಲಿ ಮಳೆಯಾರ್ಭಟ ಮುಂದುವರಿದ ಹಿನ್ನೆಲೆಯಲ್ಲಿ ಅಂಗನವಾಡಿ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ರಜೆ ನೀಡಲಾಗಿದ್ದು, ಪದವಿ ಪೂರ್ವ, ಪದವಿ ಕಾಲೇಜುಗಳು ಎಂದಿನಂತೆ ತೆರೆದಿರುತ್ತವೆ ಎಂದು ಉಡುಪಿ ಜಿಲ್ಲಾಧಿಕಾರಿ ಟಿ.ಕೆ.ಸ್ವರೂಪ್ ಹೊರಡಿಸಿದ ಆದೇಶದಲ್ಲಿ ತಿಳಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ನಿರಂತರ ಮಳೆಯಾಗುತ್ತಿರುವುದರಿಂದ ಮಂಗಳೂರು, ಮುಲ್ಕಿ, ಮೂಡಬಿದಿರೆ, ಉಳ್ಳಾಲ, ಬಂಟ್ವಾಳ ತಾಲ್ಲೂಕು ವ್ಯಾಪ್ತಿಯಲ್ಲೂ ಶಾಲೆಗಳಿಗೆ ಮಾತ್ರ ರಜೆ ಘೋಷಣೆ ಮಾಡಲಾಗಿದೆ.

## ದೇವನಹಳ್ಳಿ ಭೂಸ್ವಾಧೀನ ಪ್ರಕ್ರಿಯೆ ರದ್ದು ರಾಜಕೀಯ ಸಮರ...ಅಂಧ್ರ ಸಿಎಂ ಪುತ್ರನಿಗೆ ಸವಾಲು



**ನಾವೇ ನಂ.1**
ನಾರಾ ಲೋಕೇಶ್‌ಗೆ ದಿಟ್ಟ ತಿರುಗೇಟು





**ಏರೋಸ್ಪೇಸ್ ಹೈಜಾಕ್‌ಗೆ ಆಂಧ್ರ ಪ್ಲಾನ್...!**

ಕೈಗಾರಿಕೆಗಳಿಗೆ ಭೂಮಿ ಕೊಡುತ್ತೇವೆ, ಉದ್ಯಮಿಗಳೇ ಆತಂಕ ಬೇಡ

• **ಉದಯವಾಹಿನಿ, ಬೆಂಗಳೂರು**

ರಾಜ್ಯದಲ್ಲಿ ಉದ್ಯಮಿಗಳಿಗೆ ನಾವು ಕೇವಲ ಭೂಮಿ ನೀಡುವುದಿಲ್ಲ. ಭಾರತದ ನಂ.1 ಏರೋಸ್ಪೇಸ್, ರಕ್ಷಣಾ ಪರಿಸರ ವ್ಯವಸ್ಥೆಯನ್ನು ನೀಡುತ್ತೇವೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂಬಿ ಪಾಟೀಲ್ ಅವರು ಬುಧವಾರ ಆಂಧ್ರ ಪ್ರದೇಶ ಸಚಿವ ನಾರಾ ಲೋಕೇಶ್ ಅವರಿಗೆ ತಿರುಗೇಟು ನೀಡಿದ್ದಾರೆ.ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ ಸ್ಥಾಪನೆಗೆ ದೇವನಹಳ್ಳಿಯಲ್ಲಿ ನಡೆಯಬೇಕಾಗಿದ್ದ ಭೂಸ್ವಾಧೀನವನ್ನು ರಾಜ್ಯ ಸರ್ಕಾರ ಕೈಬಿಟ್ಟ ನಂತರ ನಾರಾ ಲೋಕೇಶ್ ಅವರು, ಡಿಯರ್ ಏರೋಸ್ಪೇಸ್ ಇಂಡಸ್ಟ್ರಿ, ಸುದ್ದಿ ತಿಳಿದು ಬೇಸರವಾಯ್ತು. ನನ್ನ ಬಳಿ ಉತ್ತಮ ಐಡಿಯಾ ಇದೆ. ನೀವು ಯಾಕೆ ಆಂಧ್ರಪ್ರದೇಶದತ್ತ ನೋಡಬಾರದು.ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ನಾರಾ ಲೋಕೇಶ್ ಪೋಸ್ಟ್ ಬಗ್ಗೆ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದ ಎಂಬಿ ಪಾಟೀಲ್ ಅವರು, ರೈತರ ಹಿತದೃಷ್ಟಿಯಿಂದ ಭೂಸ್ವಾಧೀನ ಕೈಬಿಡಬೇಕಾಯಿತು. ಆದರೆ ಈ ಉದ್ಯಮಿಗಳು ಕೇಳಿದ ಕಡೆ ಜಮೀನು ಕೊಡಲಾಗುವುದು. ಆಂಧ್ರ ಪ್ರದೇಶ ಸಚಿವ ನಾರಾ ಲೋಕೇಶ್ ಕರೆದಾಕ್ಷಣ ಯಾವ ಉದ್ಯಮಿಯೂ ಇಲ್ಲಿಂದ ಅಲ್ಲಿಗೆ ಹೋಗಿಬಿಡುವುದಿಲ್ಲ ಎಂದರು.

ರಾಜ್ಯವು ಏರೋಸ್ಪೇಸ್ ವಲಯದಲ್ಲಿ ದೇಶದ ಶೇ.65ರಷ್ಟು ಪಾಲು ಹೊಂದಿದೆ. ಜಾಗತಿಕ ಮಟ್ಟದಲ್ಲಿ ನಮ್ಮದು ಮೂರನೇ ಅತ್ಯುತ್ತಮ ಕಾರ್ಯ ಪರಿಸರವಾಗಿದೆ. ಉದ್ಯಮಗಳಿಗೆ ಭೂಮಿ ಕೊಟ್ಟ ಮಾತ್ರಕ್ಕೆ ಅವರು ಅಲ್ಲಿಗೆ ಹೋಗುವುದಿಲ್ಲ, ಕಾರ್ಯ ಪರಿಸರ ಕೂಡ ಮಹತ್ವದ ಪಾತ್ರ ವಹಿಸುತ್ತದೆ ಎಂದು ಎಂಬಿ ಪಾಟೀಲ್ ತಿರುಗೇಟು ನೀಡಿದರು. ನಾರಾ ಲೋಕೇಶ್ ಅವರ ಟ್ವೀಟ್ ಅನ್ನು ನಾನೂ ನೋಡಿದ್ದೇನೆ. ನಾನೂ ಅಲ್ಲೇ ಉತ್ತರ ಕೊಟ್ಟಿದ್ದೇನೆ. ಎಂ ಬಿ ಪಾಟೀಲನಿಗೂ ಸಾಮರ್ಥ್ಯವಿದೆ. ಕರ್ನಾಟಕ ರಾಜ್ಯವೂ ಸಮರ್ಥವಾಗಿದೆ. ರಾಜ್ಯದ ಅನೇಕ ಕಡೆಗಳಲ್ಲಿ ಏರೋಸ್ಪೇಸ್ ಮಾತ್ರವಲ್ಲ, ಎಐ, ಡೀಪ್-ಟೆಕ್, ಐಟಿ ಹೀಗೆ ಎಲ್ಲಾ ತರಹದ ಉದ್ಯಮಗಳಿಗೂ ಭೂಮಿ ಇದೆ. ಒಬ್ಬೇ ಒಬ್ಬ ಉದ್ಯಮಿಯೂ ಕರ್ನಾಟಕದಿಂದ ಹೊರಹೋಗಲು ನಾನು ಬಿಡುವುದಿಲ್ಲ ಎಂದು ಹೇಳಿದರು. ಏರೋಸ್ಪೇಸ್ ಉದ್ಯಮಿಗಳಿಗೆ ಬರೀ ಭೂಮಿಯಲ್ಲ, ಅದರ ಜತೆಗೆ ನೀರು, ವಿದ್ಯುತ್ ಎಲ್ಲವನ್ನೂ ಕೊಡುತ್ತೇವೆ. ರಾಜ್ಯದಲ್ಲಿ ಕೈಗಾರಿಕಾ ಪ್ರದೇಶಗಳಿಗೆ ನಮ್ಮ ಪಾಲಿನ ನೀರು ಬಳಸಿಕೊಳ್ಳಲು 3,600 ಕೋಟಿ ರೂಪಾಯಿ ವೆಚ್ಚದಲ್ಲಿ ಸಮಗ್ರ ಯೋಜನೆಯನ್ನೇ ರೂಪಿಸಲಾಗಿದೆ ಎಂದು ಪಾಟೀಲ್ ತಿಳಿಸಿದ್ದಾರೆ.

**1** ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ ಸ್ಥಾಪನೆಗೆ ಉದ್ದೇಶಿಸಿದ್ದ ದೇವನಹಳ್ಳಿಯ ಭೂಸ್ವಾಧೀನವನ್ನು ಕೈಬಿಟ್ಟ ರಾಜ್ಯ ಸರಕಾರ

**2** ರಾಜ್ಯದ ಏರೋಸ್ಪೇಸ್ ಉದ್ಯಮಿಗಳಿಗೆ ಬೇರೆಡೆ ಭೂಮಿ, ಭೂಮಿಯೊಂದಿಗೆ ನೀರು ಮತ್ತು ವಿದ್ಯುತ್ ನೀಡುವ ಭರವಸೆ

**3** ಆಂಧ್ರ ಸಚಿವ ನಾರಾ ಲೋಕೇಶ್ ಕರೆದಾಕ್ಷಣ ಯಾವ ಉದ್ಯಮಿಯೂ ಇಲ್ಲಿಂದ ಓಡಿ ಹೋಗಲ್ಲ ಎಂದ ಸಚಿವರು



# ಎಂ.ಬಿ.ಪಾಟೀಲ್ ಆಂಧ್ರಗೆ ಸವಾಲ್!

**ಹೊಸ ವಿವಾದ**

**ಕರ್ನಾಟಕ ಹಾಗೂ ಆಂಧ್ರ ಪ್ರದೇಶದ ನಡುವೆ ಉತ್ತಮ ಸಂಬಂಧವಿದೆ. ಆದರೆ, ಆಂಧ್ರ ಪ್ರದೇಶದ ಸಚಿವ ನಾರಾ ಲೋಕೇಶ್ ಅವರು ಕೊಟ್ಟಿರುವ ಹೇಳಿಕೆಯು ಹೊಸ ವಿವಾದಕ್ಕೆ ಕಾರಣವಾಗಿದೆ. ಎರಡೂ ರಾಜ್ಯಗಳ ನಡುವೆ ಐಟಿ -ಬಿಟಿಗೆ ಭಾರೀ ಪೈಪೋಟಿ ಇದೆ. ಈ ಹಿಂದೆ ಅಖಂಡ ಆಂಧ್ರಪ್ರದೇಶವಿದ್ದಾಗ ಹೈದರಾಬಾದ್ ನಗರವನ್ನು ಬೆಂಗಳೂರಿಗೆ ಪೈಪೋಟಿ ಕೊಡುವಂತೆ ಆಂಧ್ರಪ್ರದೇಶದ ಸಿಎಂ ಆಗಿರುವ ಚಂದ್ರಬಾಬು ನಾಯ್ಡು ಅವರು ಅಭಿವೃದ್ಧಿಪಡಿಸಿದ್ದರು. ಇದೀಗ ಅಮರಾವತಿ ಪ್ರದೇಶವನ್ನು ಆಂಧ್ರ ರಾಜಧಾನಿ ಹಾಗೂ ಅಭಿವೃದ್ಧಿ ಮಾಡುವುದಕ್ಕೆ ಮುಂದಾಗಿದ್ದಾರೆ.**

ರಾಜ್ಯ ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಅವರು ಈಗ ಉದ್ಯಮಿಗಳ ಪರವಾಗಿ ಮಾತನಾಡುತ್ತಿದ್ದಾರೆ. ಸರಕಾರವೇನಾದರೂ ದೇವನಹಳ್ಳಿ ತಾಲ್ಲೂಕಿನಲ್ಲಿ ರೈತರ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಮುಂದಾಗಿದ್ದರೆ, ಆಗ ಅವರು ರೈತರ ಪರವಾಗಿ ಮಾತನಾಡುತ್ತಿದ್ದರು. ವಿರೋಧ ಪಕ್ಷಗಳು ಏನಾದರೂ ಮಾಡಿಕೊಳ್ಳಲಿ, ನನಗೆ ರಾಜ್ಯದ ಹಿತಾಸಕ್ತಿ ಮಾತ್ರ ಮುಖ್ಯ ಎಂದು ಸಚಿವರು ಪ್ರತಿಪಾದಿಸಿದರು.ಕೈಗಾರಿಕಾ ಇಲಾಖೆಯಲ್ಲಿ ಸಾಧಿಸಿರುವ ಪ್ರಗತಿ ಮತ್ತು ದೇವನಹಳ್ಳಿ ವಿದ್ಯಮಾನವನ್ನೆಲ್ಲ ಪಕ್ಷದ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರಿಗೆ ಹೇಳಿದ್ದೇನೆ. ಇಲಾಖೆಯ ಪ್ರಗತಿ ಬಗ್ಗೆ ಅವರು ತೃಪ್ತಿ ವ್ಯಕ್ತಪಡಿಸಿದ್ದಾರೆ ಎಂದು ಎಂಬಿ ಪಾಟೀಲ್ ತಿಳಿಸಿದರು.

### ರಾಜ್ಯದಲ್ಲಿ ಹೂಡಿಕೆ: ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಜೊತೆ ರೋಲ್ಸ್ ರಾಯ್ಸ್ ಕಂಪನಿ ಮಾತುಕತೆ



**1 ಟ್ರಿಲಿಯನ್ ಆರ್ಥಿಕತೆಯನ್ನು ತಲುಪುವ ಮೊದಲ ರಾಜ್ಯ**

**ಕರ್ನಾಟಕ 1 ಟ್ರಿಲಿಯನ್ ಆರ್ಥಿಕತೆಯನ್ನು ತಲುಪುವ ಮೊಟ್ಟಮೊದಲ ರಾಜ್ಯವಾಗಲಿದೆ. ಏರೋಸ್ಪೇಸ್ ಅಷ್ಟೇ ಅಲ್ಲಾ ಹಲವು ಹೊಸ ಉದ್ಯಮ ಕರ್ನಾಟಕ್ಕೆ ಬರುತ್ತಿವೆ. ಈಗಿರುವ ಉದ್ಯಮ ಇನ್ನಷ್ಟು ವಿಸ್ತಾರಗೊಳ್ಳುತ್ತಿದೆ. ಹೊಸ ಹೂಡಿಕೆಯನ್ನು ಬೆಂಬಲಿಸಲು ನಾವು ಭೂಮಿ ಮತ್ತು ಪರಿಸರವನ್ನ ಒದಗಿಸುತ್ತೇವೆ. ನಿಮ್ಮ ರಾಜ್ಯಕ್ಕೂ ಶುಭವಾಗಲಿ ಎಂದು ಎಕ್ಸ್ ಪೋಸ್ಟ್ ಮೂಲಕ ಆಂಧ್ರದ ಸಚಿವರಿಗೆ ಖಡಕ್ ತಿರುಗೇಟನ್ನು ಸಚಿವ ಎಂಬಿ ಪಾಟೀಲ್ ನೀಡುವುದರ ಮೂಲಕ ಆಂಧ್ರವಾಲಗಳಿಗೆ ಮುಟ್ಟಿ ನೋಡಿಕೊಳ್ಳುವಂತೆ ಮಾಡಿದ್ದಾರೆ.**

**ಭಾರತದ ನಂ.1 ಏರೋಸ್ಪೇಸ್ ನಾವು ಹೊಂದಿದ್ದೇವೆ**

**ಎಕ್ಸ್ ಮೂಲಕ ಪೋಸ್ಟ್ ಹಂಚಿಕೊಂಡಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂಬಿ ಪಾಟೀಲ್, ಏರೋಸ್ಪೇಸ್ ಉದ್ಯಮಿಗಳಿಗೆ ಕರ್ನಾಟಕದ ಬದಲು ಆಂಧ್ರಕ್ಕೆ ಆಹ್ವಾನಿಸಿದ್ದ ಸಚಿವ ನಾರಾ ಲೋಕೇಶ್ ಅವರಿಗೆ ಖಡಕ್ ತಿರುಗೇಟು ನೀಡಿದ್ದಾರೆ. ಕರ್ನಾಟಕವು ಕೇವಲ ಭೂಮಿಯನ್ನಷ್ಟೇ ನೀಡುವುದಿಲ್ಲ. ಭಾರತದ ನಂ.1 ಏರೋಸ್ಪೇಸ್ ಮತ್ತು ರಕ್ಷಣಾ ಪರಿಸರ ವ್ಯವಸ್ಥೆಯನ್ನು ಒದಗಿಸುತ್ತದೆ. ದಶಕಗಳಿಂದ ನಾವು ದೇಶದ ಅತ್ಯುತ್ತಮ ಏರೋಸ್ಪೇಸ್ ತಂತ್ರಜ್ಞಾನವನ್ನು ನಿರ್ಮಿಸಿದ್ದೇವೆ ಎಂದಿದ್ದಾರೆ. ಭಾರತದ ಏರೋಸ್ಪೇಸ್ ಉತ್ಪಾದನೆಯ 65% ಕರ್ನಾಟಕ ಕೊಡುಗೆ ನೀಡುತ್ತಿದೆ. ಕರ್ನಾಟಕ ರಾಷ್ಟ್ರಮಟ್ಟದಲ್ಲಿ ಮೊದಲ ಸ್ಥಾನದಲ್ಲಿ, ಜಾಗತಿಕ ಮಟ್ಟದಲ್ಲಿ ಮೂರನೇ ಸ್ಥಾನದಲ್ಲಿದೆ. ಕೇವಲ ಭೂಮಿಯಿಂದ ಮಾತ್ರವಲ್ಲ, ಪ್ರತಿಭೆ, ನಾವೀನ್ಯತೆ ಮತ್ತು ಸಾಬೀತಾದ ಪರಿಸರ ವ್ಯವಸ್ಥೆಯಿಂದ ಇದಾಗಿದೆ. ನಮಗೆ ಏನು ಮಾಡ್ಬೇಕು, ಯಾವಾಗ ಮಾಡಬೇಕು ಮತ್ತು ಹೇಗೆ ಮಾಡಬೇಕೆನ್ನುವುದು ಗೊತ್ತಿದೆ ಎಂದು ತಕ್ಕರ್ ನೀಡಿದರು.**

**ರಾಜ್ಯದಲ್ಲಿ ಹೂಡಿಕೆ:** ಜಾಗತಿಕ ಮಟ್ಟದ ಅಗ್ರಗಣ್ಯ ಕಂಪನಿಗಳಲ್ಲಿ ಒಂದಾಗಿರುವ, ರಕ್ಷಣೆ ಹಾಗೂ ವೈಮಾಂತರಿಕ್ಷ ವಲಯದಲ್ಲಿ ಹೆಸರು ಮಾಡಿರುವ ರೋಲ್ಸ್ ರಾಯ್ಸ್ ಕಂಪನಿಯು ರಾಜ್ಯದಲ್ಲಿ ಮಾಡಲು ಉದ್ದೇಶಿಸಿರುವ ಬಂಡವಾಳ ಹೂಡಿಕೆ-ವಿಸ್ತರಣೆ, ಅದರ ಭವಿಷ್ಯದ ಯೋಜನೆಗಳು ಮತ್ತು ತಂತ್ರಜ್ಞಾನ ಸೌಲಭ್ಯ ಕುರಿತು ಸಚಿವ ಎಂ.ಬಿ.ಪಾಟೀಲ್ ಅವರು ಆ ಕಂಪನಿಯ ಉನ್ನತ ಮಟ್ಟದ ನಿಯೋಗದ ಜೊತೆ ಬುಧವಾರ ಮಹತ್ವದ ಮಾತುಕತೆ ನಡೆಸಿದ್ದಾರೆ. ರೋಲ್ಸ್ ರಾಯ್ಸ್ ನಿಯೋಗದಲ್ಲಿ ಅದರ ಜಾಗತಿಕ ಮಟ್ಟದ ನಿರ್ದೇಶಕ ಫಿಲ್ ಪ್ರೀಸ್ಟ್, ಭಾರತದಲ್ಲಿನ ಬಿಝಿನೆಸ್ ಸರ್ವಿಸ್ ವಿಭಾಗದ ಮುಖ್ಯಸ್ಥ ಟಾಮ್ ಕ್ಯಾಂಡ್ರಿಕಾಲ್, ಡಿಫೆನ್ಸ್ ವಿಭಾಗದ ಭಾರತದ ಮುಖ್ಯಸ್ಥೆ ಗಾಯತ್ರಿ ಶರ್ಮ ಸಚಿವರನ್ನು ಭೇಟಿಯಾಗಿದ್ದರು. ವೈಮಾಂತರಿಕ್ಷ ಪಾರ್ಕ್ ಸ್ಥಾಪನೆಗೆ ದೇವನಹಳ್ಳಿ ಪ್ರಸ್ತಾವಿತ ಭೂಸ್ವಾಧೀನವನ್ನು ಸರ್ಕಾರ ಕೈಬಿಟ್ಟ ಮರುದಿನವೇ ಈ ಮಾತುಕತೆ ನಡೆದಿರುವುದು ಗಮನಾರ್ಹವಾಗಿದೆ.

# ಸಚಿವರ ಜೊತೆಗೆ ಸುರ್ಜೇವಾಲ ಒನ್ ಟು ಒನ್: ಶಾಸಕರ ಆರೋಪಗಳಿಗೆ ಪಿನ್ ಟು ಪಿನ್ ಸ್ಪಷ್ಟನೆ

## ● ಉಸ್ತುವಾರಿ ರಣದೀಪ್ ಸಿಂಗ್ ಸಚಿವರ ಮುಂದಿಟ್ಟು ಬಗೆಹರಿಸುವಂತೆ ಕಿವಿ ಹಿಂಡುವ ಪ್ರಯತ್ನ

• **ಉದಯವಾಹಿನಿ, ಬೆಂಗಳೂರು**

ಶಾಸಕರ ಜೊತೆಗಿನ ಸಭೆಯ ಬೆನ್ನಲ್ಲೇ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಬುಧವಾರ ಸಚಿವರ ಜೊತೆಗಿನ ಸಭೆಯನ್ನು ಮುಂದುವರಿಸಿದ್ದಾರೆ. ಮೂರನೇ ದಿನವೂ ಸತತವಾಗಿ ಸಚಿವರ ಜೊತೆಗೆ ಒನ್ ಟು ಒನ್ ಸಭೆಯನ್ನು ನಡೆಸುತ್ತಿದ್ದು, ಶಾಸಕರು ಮಾಡಿರುವ ಆರೋಪಗಳಿಗೆ ಉಸ್ತುವಾರಿ ಅವರು ಸ್ಪಷ್ಟನೆ ಕೇಳುತ್ತಿದ್ದಾರೆ.

ಜು.14 ರಂದು ಮೂವರು ಸಚಿವರ ಜೊತೆ ಒನ್ ಟು ಒನ್ ಚರ್ಚೆ ನಡೆಸಿದ್ದ ಸುರ್ಜೇವಾಲಾ, ಮಂಗಳವಾರ ಹನ್ನೊಂದು ಮಂದಿ ಸಚಿವರ ಜೊತೆ ಸುದೀರ್ಘ ಸಮಾಲೋಚನೆ ನಡೆಸಿದ್ದರು. ಇಂದು ಎಂಟು ಸಚಿವರ ಜೊತೆಗೆ ಒನ್ ಟು ಒನ್ ಚರ್ಚೆ ನಡೆಸಲಿದ್ದಾರೆ. ಸಚಿವರಿಂದ ಶಾಸಕರ ಆರೋಪಗಳ ಬಗ್ಗೆ ಪೂರ್ಣ ಪ್ರಮಾಣದ ಮಾಹಿತಿಯನ್ನು ಪಡೆದುಕೊಳ್ಳುತ್ತಿದ್ದಾರೆ.



**ಸಚಿವರಿಗೆ ಭವಿಷ್ಯದ ಟಾರ್ಗೆಟ್:** ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಸಚಿವರಿಗೆ ಭವಿಷ್ಯದ ಟಾರ್ಗೆಟ್ ನೀಡುತ್ತಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ ಏನೆಲ್ಲಾ ಕೆಲಸ ಕಾರ್ಯಗಳನ್ನು ಮಾಡಿದ್ದೀರಿ ಜಿಲ್ಲಾ ಮಟ್ಟದಲ್ಲಿ ಎಷ್ಟು ಪ್ರವಾಸ ಮಾಡಿದ್ದೀರಿ ಶಾಸಕರ ಬೇಡಿಕೆಗಳಿಗೆ ಯಾವ ರೀತಿಯಲ್ಲಿ ಸ್ಪಂದಿಸುತ್ತಿದ್ದೀರಿ ಎಂಬಿತ್ಯಾದಿ ಮಾಹಿತಿಗಳನ್ನು ಪಡೆದುಕೊಂಡಿದ್ದಾರೆ. ಅಷ್ಟೇ ಅಲ್ಲದೆ ಮುಂದಿನ ದಿನಗಳಲ್ಲಿ ಯಾವ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಬೇಕು ಎಂಬ ನಿಟ್ಟಿನಲ್ಲಿಯೂ ಕೆಲವೊಂದು ಸಲಹೆ ಸೂಚನೆಗಳನ್ನು ನೀಡಿದ್ದಾರೆ ಎಂದು ತಿಳಿದುಬಂದಿದೆ. ಜೊತೆಗೆ ಕೆಲವೊಂದು ಆರೋಪಗಳು ಇರುವ ಸಚಿವರಿಗೆ ಕ್ಲಾಸ್ ತೆಗೆದುಕೊಂಡು ಮುಂದೆ ಹೀಗಾಗದಂತೆ ನೋಡಿಕೊಳ್ಳುವಂತೆ ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

**2028 ಕ್ಕೆ ಸಿದ್ಧಗೊಳ್ಳಿ!:** ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಜನರು ಅಭೂತಪೂರ್ವವಾಗಿಯೇ ಗೆಲ್ಲಿಸಿದ್ದಾರೆ. ಹಾಗಂತ ನಾವು ಮೈಮರೆಯದೆ 2028 ರ ವಿಧಾನಸಭೆ ಚುನಾವಣೆಯಲ್ಲಿ ಮತ್ತೆ ಗೆಲುವು ಸಾಧಿಸಬೇಕು.

ಈ ನಿಟ್ಟಿನಲ್ಲಿ ಇಲಾಖಾವಾರು ಕೆಲಸ ಕಾರ್ಯಗಳು ಅತೀ ಉತ್ತಮವಾಗಿ ಜನರ ಗಮನ ಸೆಳೆಯುವಂತೆ ಇರಬೇಕು. ಕೇವಲ ಸರ್ಕಾರದತ್ತ ಮಾತ್ರ ಗಮನ ಕೊಡದೆ ಪಕ್ಷ ಸಂಘಟನೆಯತ್ತಲೂ ಗಮನ ಹರಿಸಬೇಕು ಎಂಬ ನಿಟ್ಟಿನಲ್ಲಿ ಸುರ್ಜೇವಾಲಾ ಸೂಚನೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

**ಮಹದೇವಪ್ಪ ಗೈರಿನ ಬಗ್ಗೆ ಚರ್ಚೆ:** 2 ದಿನಗಳಿಂದಲೂ ಉಸ್ತುವಾರಿ ಸಭೆಗೆ ಸಮಾಜ ಕಲ್ಯಾಣ ಸಚಿವ ಎಚ್.ಸಿ ಮಹದೇವಪ್ಪ ಕೂಡ ಹಾಜರಾಗಿರಲಿಲ್ಲ. ಸಭೆಗೆ ಬರುವಂತೆ ಸುರ್ಜೇವಾಲಾ ಕರೆ ಮಾಡಿದರೂ ಸಮಯಾವಕಾಶವನ್ನು ಮಹದೇವಪ್ಪ ಕೇಳಿದ್ದರು. ಕೊನೆಯ ದಿನವಾದ ಇಂದು ಹಾಜರಾಗುತ್ತಾರಾ ಇಲ್ಲವಾ ಎಂಬ ಕುತೂಹಲ ಮೂಡಿಸಿದೆ. ಇತ್ತ ಸೆಪ್ಟೆಂಬರ್ ಕ್ರಾಂತಿ ಹೇಳಿಕೆ ನೀಡಿ ಸಂಚಲನ ಸೃಷ್ಟಿಸಿದ್ದ ಸಚಿವ ಕೆ.ಎನ್ ರಾಜಣ್ಣ ಉಸ್ತುವಾರಿ ಸಭೆಗೆ ಹಾಜರಾಗುತ್ತಾರಾ ಎಂಬುವುದು ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ

### ಭಿನ್ನಾಭಿಪ್ರಾಯದ ನಡುವೆಯೂ ಮುಂದುವರಿದ ಸಭೆ!

**ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಶಾಸಕರ ಜೊತೆಗೆ ಸಿಎಂ ಹಾಗೂ ಡಿಸಿಎಂ ಅನುಪಸ್ಥಿತಿಯಲ್ಲಿ ಸಭೆಯನ್ನು ನಡೆಸುತ್ತಿರುವುದು ಕೆಲವರ ಅಸಮಾಧಾನಕ್ಕೆ ಕಾರಣವಾಗಿದೆ. ಅದರಲ್ಲೂ ಸಿದ್ದರಾಮಯ್ಯ ಬಣ ಈ ಸಭೆಗೆ ವಿರೋಧ ವ್ಯಕ್ತಪಡಿಸಿದೆ. ಕೆ ಎನ್ ರಾಜಣ್ಣ ಸೇರಿದಂತೆ ಕೆಲವು ಸಚಿವರು ಇದರ ಬಗ್ಗೆ ಅಸಮಧಾನಗೊಂಡಿದ್ದಾರೆ. ಈ ನಿಟ್ಟಿನಲ್ಲಿ ಚರ್ಚೆಗಳು ನಡೆಯುತ್ತಿದ್ದರೂ ಸುರ್ಜೇವಾಲಾ ಅವರು ತಮ್ಮ ಸಭೆಯನ್ನು ಮುಂದುವರಿಸಿದ್ದಾರೆ.**

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹9,928/Gram24ct ₹9,100/Gram22ct ಬೆಳ್ಳಿ: ₹114.00/Gram

# ಕೋವಿಡ್ ಅಕ್ರಮ: ಒಂಬತ್ತು ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಇಲಾಖಾ ತನಿಖೆ

• ಉದಯವಾಹಿನಿ, ಬೆಂಗಳೂರು



ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ) ವ್ಯಾಪ್ತಿಯಲ್ಲಿ ಕೋವಿಡ್ ಅವಧಿಯಲ್ಲಿ ನಡೆದ ಅಕ್ರಮಕ್ಕೆ ಸಂಬಂಧಿಸಿದಂತೆ ಬಿಬಿಎಂಪಿಯ ಒಂಬತ್ತು ಆರೋಗ್ಯ ಅಧಿಕಾರಿಗಳ ವಿರುದ್ಧ ಇಲಾಖಾ ತನಿಖೆಗೆ ಸೂಚಿಸಲಾಗಿದೆ. ರಾಜ್ಯ ಸರ್ಕಾರ ಕೋವಿಡ್ ಅಕ್ರಮಗಳ ಕುರಿತು ತನಿಖೆಗೆ ನಿವೃತ್ತ ನ್ಯಾಯಮೂರ್ತಿ ಮೈಕೆಲ್ ಡಿ. ಕುನ್ಹಾ ನೇತೃತ್ವದಲ್ಲಿ ಸಮಿತಿ ರಚಿಸಿತ್ತು. ಕುನ್ಹಾ ಸಮಿತಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ ಮಧ್ಯಂತರ ವರದಿ ಆಧರಿಸಿ, ಕೋವಿಡ್ ಅವಧಿಯಲ್ಲಿ ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಕಾರ್ಯನಿರ್ವಹಿಸಿದ 28 ಅಧಿಕಾರಿಗಳಿಗೆ ನೋಟಿಸ್ ನೀಡಲಾಗಿದೆ.

ಬಿಬಿಎಂಪಿ ಎಂಜಿನಿಯರ್, ವೈದ್ಯರು ಮತ್ತು ಹಣಕಾಸು ವಿಭಾಗದ ಅಧಿಕಾರಿಗಳಿಗೆ ನೋಟಿಸ್ ನೀಡಿ ಉತ್ತರ ನೀಡುವಂತೆ ಸೂಚಿಸಲಾಗಿದೆ. ಈ ನೋಟಿಸ್ ಸ್ವೀಕರಿಸಿದ ನಂತರ, 28 ಅಧಿಕಾರಿಗಳು ದಾಖಲೆಗಳೊಂದಿಗೆ ಪ್ರತಿಕ್ರಿಯೆ ಸಲ್ಲಿಸಿದ್ದಾರೆ ಅಧಿಕಾರಿಗಳು ನೀಡಿದ ಉತ್ತರಗಳನ್ನು ಪರಿಶೀಲಿಸಿದ ನಂತರ, 19 ಅಧಿಕಾರಿಗಳಿಗೆ ಕ್ಲೀನ್ ಚಿಟ್ ನೀಡಲಾಗಿದೆ. ಆದಾಗ್ಯೂ, ಇಲಾಖೆಯು ಉಳಿದ ಒಂಬತ್ತು ಬಿಬಿಎಂಪಿ ಆರೋಗ್ಯ ಅಧಿಕಾರಿಗಳ ವಿರುದ್ಧ ಇಲಾಖೆ ತನಿಖೆಗೆ ಆದೇಶಿಸಿದೆ. ಈ ಅಧಿಕಾರಿಗಳು ಬಿಬಿಎಂಪಿ ಆರೋಗ್ಯ ಇಲಾಖೆಯ ವೆಚ್ಚ ಮತ್ತು ಬಿಲ್‌ಗಳ ಬಗ್ಗೆ ಸ್ಪಷ್ಟನೆ ನೀಡಲು ವಿಫಲರಾಗಿದ್ದಾರೆ. ಆದ್ದರಿಂದ ಈ ವಿಷಯವನ್ನು ಬಿಬಿಎಂಪಿ ಆಡಳಿತ ಇಲಾಖೆಗೆ, ಇಲಾಖಾ ತನಿಖೆಗಾಗಿ ವರ್ಗಾಯಿಸಲಾಗಿದೆ. ಇಲಾಖಾ ತನಿಖೆಯ ಸಮಯದಲ್ಲಿ ಈ ಅಧಿಕಾರಿಗಳು ಅನುಮಾನಗಳನ್ನು ಸ್ಪಷ್ಟಪಡಿಸಲು ವಿಫಲವಾದರೆ, ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯ ಆರೋಗ್ಯ ಅಧಿಕಾರಿ ಸಿರಾಜುದ್ದೀನ್ ಮದನಿ ಅವರು ತಿಳಿಸಿದ್ದಾರೆ.

ಅಲ್ಲದೆ, ಕೋವಿಡ್ ಅವಧಿಯಲ್ಲಿ ಸಾಮಗ್ರಿಗಳನ್ನು ಪೂರೈಸಿದ 15 ಖಾಸಗಿ ಕಂಪನಿಗಳಿಗೆ ನೋಟಿಸ್ ನೀಡಲಾಗಿದೆ. 15 ಖಾಸಗಿ ಕಂಪನಿಗಳಿಗೆ ಹೆಚ್ಚುವರಿಯಾಗಿ ನೀಡಲಾದ 13 ಕೋಟಿ ರೂ.ಗಳನ್ನು ವಸೂಲಿ ಮಾಡಲು ಸಮಿತಿ ಸೂಚಿಸಿದೆ.

## ಬಿಜೆಪಿ ಶಾಸಕ ಬೈರತಿ ಬಸವರಾಜ್ ವಿರುದ್ಧ ಎಫ್‌ಐಆರ್

• ಉದಯವಾಹಿನಿ, ಬೆಂಗಳೂರು

ಹಲಸೂರು ಕೆರೆಯ ಸಮೀಪದ ಮನೆಯೊಂದರ ಎದುರು ರಾತ್ರಿ ನಡೆದ ರೌಡಿಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಕೊಲೆ ಪ್ರಕರಣದ ಸಂಬಂಧ ಕೆ.ಆರ್. ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ್ ವಿರುದ್ಧ ಭಾರತಿ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಜಗದೀಶ್, ಕಿರಣ್, ವಿಮಲ್, ಅನಿಲ್ ವಿರುದ್ಧವೂ ಎಫ್‌ಐಆರ್ ದಾಖಲಿಸಿಕೊಂಡು ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ಕೊಲೆ ನಡೆದಿದೆ ಎಂದು ಆರೋಪಿಸಿ ಕೊಲೆಯಾದ ಶಿವಪ್ರಕಾಶ್ ತಾಯಿ ಇವರ ವಿರುದ್ಧ ದೂರು ನೀಡಿದ್ದಾರೆ. ಕೊಲೆ ಪ್ರಕರಣಕ್ಕೂ ನನಗೂ ಯಾವುದೇ ಸಂಬಂಧ ಇಲ್ಲ. ಯಾರೇ ಸುಮ್ಮನೆ ದೂರು ನೀಡಿದರೂ ಎಫ್‌ಎಆರ್ ದಾಖಲಿಸಬಹುದೇ? ಎಫ್‌ಐಆರ್ ವಿರುದ್ಧ ಕಾನೂನು ಹೋರಾಟ ಮಾಡುತ್ತೇನೆ' ಎಂದು ಬೈರತಿ ಬಸವರಾಜ್ ಪ್ರತಿಕ್ರಿಯೆ ನೀಡಿದ್ದಾರೆ.

## ಲಂಚ ಆರೋಪ: ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯ ಗೋವಿಂದರಾಜ ಶಿಕ್ಷೆ ರದ್ದು

• ಉದಯವಾಹಿನಿ, ಬೆಂಗಳೂರು

ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಲು ರೂ.2 ಲಕ್ಷ ಲಂಚ ಪಡೆದ ಆರೋಪದಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಗಣೇಶ ಮಂದಿರ ವಾರ್ಡ್ ಸದಸ್ಯರಾಗಿದ್ದ ಎಲ್.ಗೋವಿಂದರಾಜ ಅವರಿಗೆ ಲೋಕಾಯುಕ್ತ ವಿಶೇಷ ನ್ಯಾಯಾಲಯ ವಿಧಿಸಿದ್ದ ನಾಲ್ಕು ವರ್ಷಗಳ ಜೈಲು ಶಿಕ್ಷೆಯನ್ನು ಹೈಕೋರ್ಟ್ ರದ್ದುಪಡಿಸಿದೆ.'ಬೆಂಗಳೂರು ನಗರ ಜಿಲ್ಲಾ ಲೋಕಾಯುಕ್ತ ವಿಶೇಷ ನ್ಯಾಯಾಲಯ ನನಗೆ ವಿಧಿಸಿರುವ ಜೈಲು ಶಿಕ್ಷೆ ರದ್ದುಪಡಿಸಬೇಕು' ಎಂದು ಕೋರಿದ್ದ ಗೋವಿಂದರಾಜ ಅವರ ಕ್ರಿಮಿನಲ್ ಮೇಲ್ಮನವಿ, ಅಪರಾಧಿಗೆ ವಿಧಿಸಲಾಗಿರುವ



ಶಿಕ್ಷೆಯ ಪ್ರಮಾಣ ಹೆಚ್ಚಳ ಮಾಡಬೇಕು' ಎಂದು ಕೋರಿದ್ದ ಲೋಕಾಯುಕ್ತ ಪೊಲೀಸರ ಮೇಲ್ಮನವಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಜಿ.ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. 'ಅರ್ಜಿದಾರರ ವಿರುದ್ಧದ ಆರೋಪವನ್ನು ಸಾಬೀತುಪಡಿಸುವಲ್ಲಿ ಲೋಕಾಯುಕ್ತ ಪೊಲೀಸರು ಸೂಕ್ತ ಸಾಕ್ಷ್ಯಾಧಾರ ಒದಗಿಸಲು ವಿಫಲರಾಗಿದ್ದಾರೆ ಮತ್ತು ತನಿಖಾ ಪ್ರಕ್ರಿಯೆಯಲ್ಲಿ ದೋಷಗಳಿವೆ' ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ಶಿಕ್ಷೆ ರದ್ದುಪಡಿಸಿ ಆದೇಶಿಸಿದೆ. ಗೋವಿಂದರಾಜ ಪರ ಪದಾಂಕಿತ ಹಿರಿಯ ವಕೀಲ ಸಿ.ವಿ.ನಾಗೇಶ್ ವಾದ ಮಂಡಿಸಿದ್ದರು. ಕೆ.ರಾಘವೇಂದ್ರ ವಕಾಲತ್ತು ವಹಿಸಿದ್ದರು.

## ಮೂರು ಅಂತಸ್ತಿನ ಕಟ್ಟಡ: ಒಸಿಗೆ ವಿನಾಯಿತಿ ನೀಡಲು ಸರ್ಕಾರ ಅಧಿಸೂಚನೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿನ ಎಲ್ಲಾ ಕಡೆ 1200 ಚದರಡಿ ನಿವೇಶನಗಳಲ್ಲಿ ಇರುವ ಮೂರು ಅಂತಸ್ತಿನ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣ ಪತ್ರ (ಒಸಿ) ಪಡೆಯುವುದಕ್ಕೆ ವಿನಾಯಿತಿ ನೀಡಲು ನಗರಾಭಿವೃದ್ಧಿ ಇಲಾಖೆ ತೀರ್ಮಾನಿಸಿದೆ.

ಇದಕ್ಕೆ ಸಂಬಂಧಿಸಿದಂತೆ, ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ (ಜಿಬಿಎ) – 2024, ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ 1976 (ಕೆಎಂಸಿ ಕಾಯ್ದೆ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾದರಿ ಕಟ್ಟಡ ಬೈಲಾಗಳನ್ನು ತಿದ್ದುಪಡಿ ಮಾಡಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ನಿರ್ಧರಿಸಲಾಗಿದೆ. 1200 ಚದರಡಿ ವಿಸ್ತೀರ್ಣದ ನಿವೇಶನದಲ್ಲಿ ನೆಲ ಅಂತಸ್ತು + ಎರಡು ಅಂತಸ್ತು ಅಥವಾ ಸ್ಟಿಲ್ಟ್ + ಮೂರು ಅಂತಸ್ತಿನವರೆಗಿನ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯುವುದರಿಂದ ವಿನಾಯಿತಿ ನೀಡಲಾಗುತ್ತದೆ. ಜಿಬಿಎ–2024 ಕಾಯ್ದೆಯಲ್ಲಿ ಒಸಿಗೆ ವಿನಾಯಿತಿ ನೀಡಲು ಸರ್ಕಾರ ಅಧಿಸೂಚನೆ ಹೊರಡಿಸಬಹುದು ಎಂದು ಸೆಕ್ಷನ್ 241(7) ರಲ್ಲಿ ಹೇಳಲಾಗಿದೆ. ಆದರೆ, ಬಿಬಿಎಂಪಿ ಕಾಯ್ದೆ–2020, ಕೆಎಂಸಿ– 1976 ಕಾಯ್ದೆ, ಕರ್ನಾಟಕ ಪುರಸಭೆ ಕಾಯ್ದೆ 1964ರಲ್ಲಿ ಈ ಅವಕಾಶ ಇರುವುದಿಲ್ಲ. ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಉಪಮುಖ್ಯಮಂತ್ರಿ, ಸಂಸದೀಯ ವ್ಯವಹಾರಗಳ ಸಚಿವರು, ಆಹಾರ, ಕೈಗಾರಿಕೆ, ಇಂಧನ, ಕಂದಾಯ, ನಗರಾಭಿವೃದ್ಧಿ, ಪೌರಾಡಳಿತ ಸಚಿವರೊಂದಿಗೆ ನಡೆದ ಸಭೆಯಲ್ಲಿ ಎಲ್ಲಾ ಕಾಯ್ದೆಗಳಲ್ಲೂ ಸಮಾನಾಂತರ ಅವಕಾಶಗಳು ಇರಬೇಕು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಆದ್ದರಿಂದ, ಒಸಿಗೆ ವಿನಾಯಿತಿ ನೀಡಲು ನಿಯಮಗಳನ್ನು ರಚಿಸಿ, ಕಾಯ್ದೆಗಳಿಗೆ ತಿದ್ದುಪಡಿ ತರಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವದ ಸಭೆಯಲ್ಲಿ ನಿರ್ಧರಿಸಲಾಗಿದೆ. ನಗರಾಭಿವೃದ್ಧಿ ಇಲಾಖೆ, ಬಿಬಿಎಂಪಿ, ಬೆಸ್ಕಾಂ, ಪೌರಾಡಳಿತ, ಇಂಧನ, ಪಂಚಾಯತ್ ರಾಜ್ ಆಯುಕ್ತಾಲಯದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

# ಸಚಿವ ಮುನಿಯಪ್ಪರಿಗೆ ತಮಾಷೆಯಾಗಿ ಕಾಲೆಳೆದ ಸಿಎಂ!

## ಜಮೀನು ಹಸ್ತಾಂತರದಿಂದ ಹಿಂದೆ ಸರಿದ ಸರ್ಕಾರ, ಸಿಎಂ , ಭೂಸ್ವಾಧೀನ ಕೈಬಿಡಬೇಕೆಂಬ ಒತ್ತಾಯ

• ಉದಯವಾಹಿನಿ, ಬೆಂಗಳೂರು

ಮುನಿಯಪ್ಪನವರೇ, ನೀವು ರಾಜಕಾರಣಿ. ಈಗ ನೀವು ಯಾವ ಹೊಲವನ್ನು ಉತ್ತುತ್ತೀರಿ, ಬಿತ್ತುತ್ತೀರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಳಿದ ಪ್ರಸಂಗ ವಿಧಾನಸೌಧದಲ್ಲಿ ಜು. 15ರಂದು ನಡೆಯಿತು. ಅದು ದೇವನಹಳ್ಳಿಯಲ್ಲಿ ಏರೋಸ್ಪೇಸ್ ನಿರ್ಮಾಣಕ್ಕಾಗಿ 1,777 ಎಕರೆ ಭೂಮಿಯನ್ನು ವಶಕ್ಕೆ ಪಡೆಯುವ ನಿರ್ಧಾರವನ್ನು ಸರ್ಕಾರ ಕೈಬಿಟ್ಟಿದ್ದನ್ನು ಪ್ರಕಟಣೆ ಮಾಡಿದ ಸಂದರ್ಭ. ಭೂಸ್ವಾಧೀನ ಕೈಬಿಟ್ಟಿರುವುದಾಗಿ ಸಿದ್ದರಾಮಯ್ಯನವರು ಪ್ರಕಟಿಸಿದ ಕೂಡಲೇ ರೈತ ಪ್ರತಿನಿಧಿಗಳು ಖುಷಿಯಿಂದ ಚಪ್ಪಾಳೆ ತಟ್ಟಿದರು.

ಆಗ ಅವರು ಲೋಕಾಭಿರಾಮವಾಗಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಭೂಸ್ವಾಧೀನ ಕೈಬಿಡಬೇಕೆಂಬ ಒತ್ತಾಯ ವಿಚಾರವಾಗಿ ರೈತರ ಅಹವಾಲು ಆಲಿಸುವ ಜತೆಗೆ ಸಂಬಂಧಪಟ್ಟ ಎಲ್ಲರೊಂದಿಗೆ ಚರ್ಚಿಸಲಾಗಿದೆ. ಸ್ಥಳೀಯ ನಾಯಕರಾದ ಸಚಿವ ಕೆ.ಎಚ್.ಮುನಿಯಪ್ಪ ಅವರ ಅಭಿಪ್ರಾಯವನ್ನೂ ಪಡೆಯಲಾಗಿದ್ದು, ಮುನಿಯಪ್ಪ ಸಹ ರೈತರ ಪರವಾಗಿಯೇ ವಾದ ಮಾಡುತ್ತಿದ್ದರು ಎಂದು ಹೇಳಿದರು.

ಅದಕ್ಕೆ ಪಕ್ಕದಲ್ಲಿದ್ದ ಮುನಿಯಪ್ಪ, ತಾವೂ ರೈತರೇ ಅಲ್ಲವೇ ಎಂದಾಗ ಸಿಎಂ, ಎಲ್ಲರೂ ಮೂಲತಃ ರೈತರು. ಆಮೇಲೆ ಬೇರೆಬೇರೆ ಆಗಿರುವುದು. ಈಗ ನೀವು ರಾಜಕಾರಣಿ. ಈಗ ಯಾವ ಹೊಲ ಉತ್ತುತ್ತೀರಿ ನೀವು. ನಿಮಗೆ ನೇಗಿಲ ಕಟ್ಟಲು

> ಅಂತಿಮವಾಗಿ ಭೂಸ್ವಾಧೀನ ಕೈಬಿಡುವ ವಿಚಾರದ ಬಗ್ಗೆ ಮಹತ್ವದ ಸಭೆ ನಡೆಸಿ, ತೀರ್ಮಾನ ಕೈಗೊಳ್ಳುವ ಮೂಲಕ ಸಿದ್ದರಾಮಯ್ಯ ಅವರು ಕೊಟ್ಟ ಮಾತು ಉಳಿಸಿಕೊಂಡಂತಾಗಿದೆ. ಈ ಬಗ್ಗೆ ನಡೆದ ಸಭೆಯ ಒಳಗೆ ಹಾಗೂ ಹೊರಗೆ ಹೋರಾಟಗಾರರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ಬರುವುದೋ ಇಲ್ಲವೋ ಗೊತ್ತಿಲ್ಲ, ಎಂದು ಮುನಿಯಪ್ಪನವರ ಕಾಲೆಳೆದರು.

ಆದರೂ, ಮಾತಿನಲ್ಲಿ ಸೋಲೊಪ್ಪಿಕೊಳ್ಳದ ಮುನಿಯಪ್ಪ, ನಾನು ಎತ್ತು ಕಟ್ಟಿ ಉಳುಮೆ ಮಾಡುವುದರಲ್ಲಿ ರಾಜ್ಯ ಮಟ್ಟದ ಪ್ರಥಮ ಬಹುಮಾನ ತೆಗೆದುಕೊಂಡಿದ್ದೀನಿ ಸರ್. ನೇಗಿಲು ಕಟ್ಟಿ ಹೊಲ ಉತ್ತಿದ್ದೇನೆ, ವ್ಯವಸಾಯ ಮಾಡಿದ್ದೇನೆ. ನೀವೂ ಮಾಡಿದ್ದೀರಿ, ಎಂದು ನಗುತ್ತಾ ಹೇಳಿದರು. ಬಲಭಾಗದಲ್ಲಿದ್ದ ಸಚಿವ ಎಂ.ಬಿ.ಪಾಟೀಲ್, ಸರ್ ಹಾಗಾದರೆ ಎಂ.ಬಿ.ಪಾಟೀಲರು ಇಂಡಸ್ಟ್ರಿಗಳ ಪರವೇ, ಎನ್ನುತ್ತಿದ್ದಂತೆ ಎಚ್ಚೆತ್ತ ಸಿಎಂ, ಇಲ್ಲ ಇಂಡಸ್ಟ್ರಿ ಮಿನಿಸ್ಟರ್ ಅಷ್ಟೇ, ಎಂದು ನಗುತ್ತಾ ಮಾತು ಮುಂದುವರಿಸಿದರು.

> **ಮಾತು ಉಳಿಸಿಕೊಂಡ ಸಿಎಂ**
> ದೇವನಹಳ್ಳಿಯ ಚನ್ನರಾಯಪಟ್ಟಣ, ಇತರೆಡೆ ಭೂಸ್ವಾಧೀನ ಕೈಬಿಡಬೇಕೆಂಬ ಹೋರಾಟ ತೀವ್ರಗೊಳ್ಳುತ್ತಿದ್ದಂತೆ ಸರಕಾರವೂ ಇಕ್ಕಟ್ಟಿಗೆ ಸಿಲುಕಿತ್ತು. ಹೋರಾಟಗಾರರ ಮನವೊಲಿಕೆ ಪ್ರಯತ್ನಗಳ ಫಲ ನೀಡದಿದ್ದಾಗ ಅಂತಿಮವಾಗಿ ಭೂಸ್ವಾಧೀನ ಅಧಿಸೂಚನೆ ರದ್ದತಿಗೆ ಸರಕಾರ ತೀರ್ಮಾನಿಸಿದ್ದು, ಸಿಎಂ ಹಿಂದೆ ಕೊಟ್ಟ ಮಾತು ಉಳಿಸಿಕೊಂಡಂತಾಗಿದೆ.

**ಫೆ.15ರಂದು ಸಂಬಂಧ ಅಧಿಕೃತ ಆದೇಶ**

ಉದ್ದೇಶಿತ ಹೈಟೆಕ್ ಡಿಫೆನ್ಸ್ ಆಯಂಡ್ ಏರೋಸ್ಪೇಸ್ ಪಾರ್ಕ್ ನಿರ್ಮಾಣಕ್ಕಾಗಿ ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ, ಮಟ್ಟಬಾರ್ಲು, ಶ್ರೋತ್ರೀಯ ತೆಲ್ಲೋಹಳ್ಳಿ, ಪಾಳ್ಯ, ಹರಳೂರು, ಪೋಲನಹಳ್ಳಿ, ಗೋಕರೆ ಬಚ್ಚೇನಹಳ್ಳಿ, ನಲ್ಲೂರು, ಮಲ್ಲೇಪುರ, ನಲ್ಲಪ್ಪನಹಳ್ಳಿ, ಚೀಮಾಚನಹಳ್ಳಿ, ಮುದ್ದೇನಹಳ್ಳಿ ಹಾಡ್ಯಾಳ ಗ್ರಾಮಗಳ ಒಟ್ಟು 1,777 ಎಕರೆ ಭೂಸ್ವಾಧೀನಕ್ಕೆ 2021ರ ಆ.27ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿತ್ತು. 2022ರ ಫೆ.15ರಂದು ಈ ಸಂಬಂಧ ಅಧಿಕೃತ ಆದೇಶ ಹೊರಡಿಸಲಾಗಿತ್ತು. ಇದರ ವಿರುದ್ಧ ರೈತರು ನಡೆಸಿದ ಹೋರಾಟದಲ್ಲಿ ಅಂದಿನ ಪ್ರತಿಪಕ್ಷ ನಾಯಕರಾಗಿದ್ದ ಸಿದ್ದರಾಮಯ್ಯ ಪಾಲ್ಗೊಂಡು ಬೆಂಬಲಿಸಿದ್ದರು. ಮುಂದೆ ಅಧಿಕಾರಕ್ಕೆ ಬಂದರೆ ಭೂಸ್ವಾಧೀನಕ್ಕೆ ಹೊರಡಿಸಿರುವ ಅಧಿಸೂಚನೆ ರದ್ದುಪಡಿಸುವ ಭರವಸೆ ನೀಡಿದ್ದರು.

ಆದರೆ ಸಿದ್ದರಾಮಯ್ಯನವರ ಸರಕಾರವೇ ಕಳೆದ ಏಪ್ರಿಲ್‌ನಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿತ್ತು. ಇದರಿಂದ ಆಕ್ರೋಶಗೊಂಡ ಹೋರಾಟಗಾರರು ಭೂಸ್ವಾಧೀನ ಪ್ರಕ್ರಿಯೆ ಕೈಬಿಡುವಂತೆ ಹೋರಾಟ ತೀವ್ರಗೊಳಿಸಿದ್ದರು. ಇದರಿಂದ ಸರಕಾರವೂ ಇಕ್ಕಟ್ಟಿಗೆ ಸಿಲುಕಿತ್ತು.

## ಹೆಬ್ಬಾಳ-ಸಿಲ್ಕ್ ಬೋರ್ಡ್ ಜಂಕ್ಷನ್ ಅವಳಿ ಸುರಂಗ ರಸ್ತೆಗೆ ಟೆಂಡರ್

• ಉದಯವಾಹಿನಿ, ಬೆಂಗಳೂರು

ಹೆಬ್ಬಾಳ ಜಂಕ್ಷನ್‌ನಿಂದ ಸಿಲ್ಕ್ ಬೋರ್ಡ್ ಜಂಕ್ಷನ್ ವರೆಗೆ ಉತ್ತರ–ದಕ್ಷಿಣ ಕಾರಿಡಾರ್ ಮೂರು ಪಥಗಳ ಅವಳಿ ಸುರಂಗ ರಸ್ತೆ ಟ್ವಿನ್ ಟನಲ್ ನಿರ್ಮಾಣಕ್ಕೆ 17,698 ಕೋಟಿ ಅಂದಾಜು ವೆಚ್ಚದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ನಗರದ ಬೃಹತ್ ಮೂಲಸೌಕರ್ಯಗಳ ಅಭಿವೃದ್ಧಿಗೆ ರಚಿಸಲಾಗಿರುವ ವಿಶೇಷ ಉದ್ದೇಶದ ಸಂಸ್ಥೆ ಎಸ್‌ಪಿವಿ –ಬೆಂಗಳೂರು ಸ್ಮಾರ್ಟ್ ಇನ್ ಫ್ರಾಸ್ಟ್ರಕ್ಚರ್ ಲಿಮಿಟೆಡ್ ಸಂಸ್ಥೆ ಬಿ–ಸ್ಮೈಲ್ ವತಿಯಿಂದ ಎರಡು ಪ್ಯಾಕೇಜ್‌ಗಳಲ್ಲಿ ನಿರ್ಮಾಣ ಕಾರ್ಯಾಚರಣೆ– ವರ್ಗಾವಣೆ (ಬೂಟ್) ಮಾದರಿಯಲ್ಲಿ ಟೆಂಡರ್ ಕರೆಯಲಾಗಿದೆ.

ಅವಳಿ ಸುರಂಗ ರಸ್ತೆಯ ಜೊತೆಗೆ ಮೂರು ಪಥ ಅಥವಾ ಎರಡು ಪಥದ ಪ್ರವೇಶ ನಿರ್ಗಮನದ ರ್‍ಯಾಂಪ್‌ಗಳನ್ನು



ಉದಯವಾಹಿನಿ ಚಿತ್ರ

ನಿರ್ಮಿಸಿ, ಕಾರ್ಯಾಚರಣೆ ಮಾಡಿ. ನಿರ್ವಹಣೆ ಮಾಡಲು ಟೆಂಡರ್ ಆಹ್ವಾನಿಸಲಾಗಿದೆ. ಸೆಪ್ಟೆಂಬರ್ 3ರಂದು ಬಿಡ್ ಸಲ್ಲಿಸಲು ಅಂತಿಮ ದಿನವಾಗಿದ್ದು, 4ರಂದು ಆರ್ಥಿಕ ಬಿಡ್ ತೆರೆಯಲಾಗುತ್ತದೆ. ಯಾವುದೇ ಕಾರಣವನ್ನು ನೀಡದೆ ಎಲ್ಲಾ ಅಥವಾ ಯಾವುದೇ ಬಿಡ್ ಅನ್ನು ಒಪ್ಪಿಕೊಳ್ಳುವ ಇಲ್ಲವೇ ತಿರಸ್ಕರಿಸುವ ಹಕ್ಕನ್ನು ಬಿ–ಸ್ಮೈಲ್ ಕಾಯ್ದಿರಿಸಿಕೊಂಡಿದೆ

> ಬಿಬಿಎಂಪಿ, ಬಿ–ಸ್ಮೈಲ್ ನೋಂದಣಿಯಾಗಿರುವ ಗುತ್ತಿಗೆದಾರರು ಅಥವಾ ಕೇಂದ್ರ, ಲೋಕೋಪಯೋಗಿ, ರಾಜ್ಯ ಲೋಕೋಪಯೋಗಿ ಇಲಾಖೆ, ರೈಲ್ವೆ, ರಾಷ್ಟ್ರೀಯ ಹೆದ್ದಾರಿಗಳಲ್ಲಿ ನೋಂದಣಿಯಾಗಿರುವ ಗುತ್ತಿಗೆದಾರರು ಬಿಡ್ ಸಲ್ಲಿಸಲು ಅರ್ಹರಾಗಿರುತ್ತಾರೆ. ಜಂಟಿ ಸಂಸ್ಥೆಗಳಾಗಿ ಅಥವಾ ಒಕ್ಕೂಟಗಳಾಗಿಯೂ ಬಿಡ್ ಸಲ್ಲಿಬಹುದಾಗಿದೆ ಎಂದು ಟೆಂಡರ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಎಂದು ಸ್ಪಷ್ಟಪಡಿಸಲಾಗಿದೆ. ಅವಳಿ ಸುರಂಗ ರಸ್ತೆಯನ್ನು ಬೂಟ್ ಆಧಾರದಲ್ಲಿ ನಿರ್ಮಿಸಲು ಜೂನ್ 5ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿತ್ತು.

## ಬೆಂಗಳೂರಿನಲ್ಲಿ ಕಾಂಗ್ರೆಸ್ ಒಬಿಸಿ ಸಲಹಾ ಮಂಡಳಿ ಸಭೆ


• ಉದಯವಾಹಿನಿ, ಬೆಂಗಳೂರು

ವಿಧಾನಸಭಾ ಚುನಾವಣೆಗೆ ಇನ್ನೂ ಕೆಲವೇ ದಿನಗಳು ಬಾಕಿಯಿರುವಂತೆಯೇ ಬೆಂಗಳೂರಿನಲ್ಲಿ ನಡೆದ ಎಐಸಿಸಿ ಒಬಿಸಿ ಸಲಹಾ ಮಂಡಳಿ ಸಭೆ ಚುನಾವಣಾ ಗಿಮಿಕ್ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ ವಿಜಯೇಂದ್ರ ಹೇಳಿದ್ದಾರೆ.

ಹಿಂದುಳಿದ ವರ್ಗಗಳ ಅಭ್ಯುದಯ, ಅಭಿವೃದ್ಧಿ ಹಿನ್ನೆಲೆಯಲ್ಲಿ ಸಭೆ ನಡೆದಿಲ್ಲ. ಸ್ವಾತಂತ್ರ್ಯಾನಂತರ ದೇಶ, ರಾಜ್ಯವನ್ನು ಬಹುಕಾಲ ಆಳಿದ ಕಾಂಗ್ರೆಸ್ ಈ ಸಮುದಾಯಗಳ ಹಿನ್ನಡೆಗೆ ಹೊಣೆ ಹೊರಬೇಕು ಎಂದು ಅವರು ಒತ್ತಾಯಿಸಿದ್ದಾರೆ.

**ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ ವಿಜಯೇಂದ್ರ ಹೇಳಿಕೆ**

ಒಬಿಸಿ, ಎಸ್‌ಸಿ, ಎಸ್‌ಟಿ ಸಮುದಾಯಗಳ ಉನ್ನತಿ ಅಥವಾ ಅಭಿವೃದ್ಧಿಯ ಈ ಸಭೆಯ ಅಜೆಂಡಾ ಅಲ್ಲ. ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲುವುದು ಹೇಗೆ ಎಂಬುದು ನಿಜವಾದ ಅಜೆಂಡಾವಾಗಿದೆ ಎಂದು ವಿಜಯೇಂದ್ರ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ 55–60 ವರ್ಷಗಳಿಂದ ರಾಜ್ಯ ಹಾಗೂ ದೇಶ ಎರಡರಲ್ಲೂ ಆಡಳಿತ ನಡೆಸಿರುವ ಪಕ್ಷ ಕಾಂಗ್ರೆಸ್ ಆಗಿದೆ. ಈ ಸಮುದಾಯಗಳ ಅಭಿವೃದ್ಧಿ ಮ್ತು ಸಾಮಾಜಿಕ ನ್ಯಾಯ ದೊರೆಯದಿದ್ದರೆ ಯಾರು ಹೊಣೆ ಹೊರಬೇಕು? ಎಂದು ಪ್ರಶ್ನಿಸಿದರು. ದೇಶದಲ್ಲಿ ಸುಮಾರು 55 ವರ್ಷಕ್ಕೂ ಹೆಚ್ಚು ಕಾಲ ಆಡಳಿತ ನಡೆಸಿದ ಕಾಂಗ್ರೆಸ್ ಇದರ ಹೊಣೆ ಹೊರಬೇಕು ಎಂದು ಆಗ್ರಹಿಸಿದರು. ಬಿಹಾರ ಚುನಾವಣೆ ಸನ್ನಿಹದಲ್ಲಿರುವಂತೆಯೇ ಎಐಸಿಸಿಯ ಒಬಿಸಿ ಸಮಿತಿ ಸಭೆ ಬೆಂಗಳೂರಿನಲ್ಲಿ ನಡೆದಿದೆ. ಈ ಸಭೆಗೆ ಯಾವುದೇ ಪ್ರಾಮುಖ್ಯತೆ, ಪ್ರಸ್ತುತತೆ ಇಲ್ಲ. ಇದು ಕೇವಲ ರಾಜಕೀಯ ಗಿಮಿಕ್ ಆಗಿದೆ. ಮುಂಬರುವ ಬಿಹಾರ ಚುನಾವಣೆಗೆ ಇದೊಂದು ಚುನಾವಣಾ ಗಿಮಿಕ್ ಆಗಿದೆ ಎಂದು ಅವರು ಹೇಳಿದರು.




## ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್ ಸೋಗಿನಲ್ಲಿ ಉದ್ಯಮಿಗೆ ಬೆದರಿಕೆ

• ಉದಯವಾಹಿನಿ, ಬೆಂಗಳೂರು

ಉತ್ತರ ಭಾರತದ ಕುಖ್ಯಾತ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯಿ ತಂಡದ ಸದಸ್ಯರೆಂದು ಹೇಳಿಕೊಂಡು ನಗರದ ಉದ್ಯಮಿಗೆ ಬೆದರಿಕೆ ಹಾಕಿ, ಹಣ ಸುಲಿಗೆ ಮಾಡಲು ಪ್ರಯತ್ನಿಸಿದ್ದ ನಾಲ್ವರನ್ನು ಶೇಷಾದ್ರಿಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬೆಂಗಳೂರಿನ ಮಾವಳ್ಳಿಯ ಮೊಹಮ್ಮದ್ ರಫೀಕ್, ಉತ್ತರ ಪ್ರದೇಶದ ಶಿಶುಪಾಲ್ ಸಿಂಗ್, ವಂಶ್ ಸಚ್ ದೇವ್ ಅಮಿತ್ ಚೌಧರಿ ಬಂಧಿತರು.

ಆರೋಪಿಗಳಿಂದ ಒಂದು ಕಾರು, ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್



ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಉತ್ತರ ಪ್ರದೇಶದ ಮೂವರು ಆರೋಪಿಗಳನ್ನು ಮೊಹಮ್ಮದ್ ರಫೀಕ್ ನಗರಕ್ಕೆ ಕರೆಸಿಕೊಂಡು ನಗರದ ಉದ್ಯಮಿಗೆ ಬೆದರಿಕೆ ಹಾಕಿದ್ದ. ಉದ್ಯಮಿ ನೀಡಿದ ದೂರು ಆಧರಿಸಿ ಆರೋಪಿಗಳನ್ನು ಪತ್ತೆ ಹಚ್ಚಲಾಯಿತು ಎಂದು ಪೊಲೀಸರು ಹೇಳಿದರು.

> ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತನಿಖೆಗಾಗಿ ಕೇಂದ್ರ ವಿಭಾಗ ಸಿಸಿಬಿ ಒಳಗೊಂಡಂತೆ ಪ್ರತ್ಯೇಕ ತಂಡ ರಚಿಸಲಾಗಿತ್ತು. ಪ್ರಕರಣದ ತನಿಖೆ ಕೈಗೊಂಡಾಗ ಜೆ.ಸಿ.ರಸ್ತೆಯಲ್ಲಿ ಕಾರ್ ಸೌಂಡ್ಸ್ ಶಾಪ್‌ನಲ್ಲಿ ಬಿಡಿಭಾಗಗಳನ್ನು ಮಾರಾಟ ಮಾಡುತ್ತಿದ್ದ ಮೊಹಮ್ಮದ್ ರಫೀಕ್ ಬೆದರಿಕೆ ಹಾಕಿದ್ದು ಪತ್ತೆಯಾಗಿತ್ತು. ಆತ ನೀಡಿದ ಸುಳಿವು ಆಧರಿಸಿ ಉತ್ತರ ಪ್ರದೇಶದ ಮೂವರನ್ನು ಬಂಧಿಸಲಾಯಿತು ಎಂದು ಸೀಮಂತ್ ಕುಮಾರ್ ಸಿಂಗ್ ಹೇಳಿದರು.

ಶೇಷಾದ್ರಿಪುರ ಪೊಲೀಸ್ ಠಾಣಾ ವ್ಯಾಪ್ತಿಯ ನೆಹರೂ ನಗರದ ಅಪಾರ್ಟ್‌ಮೆಂಟ್‌ನಲ್ಲಿ ಉದ್ಯಮಿ ನೆಲಸಿದ್ದಾರೆ. ಪ್ಲೇವುಡ್ ವ್ಯಾಪಾರ ಮಾಡುತ್ತಿದ್ದಾರೆ. ಉದ್ಯಮಿಗೆ ಆರೋಪಿಗಳು ಕರೆ ಮಾಡಿ ಬೆದರಿಕೆ ಹಾಕಿದ್ದರು. ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್ ಸದಸ್ಯರಾಗಿದ್ದು, ಒಂದು ಕೋಟಿ ರೂಪಾಯಿ ನೀಡುವಂತೆ ಬೇಡಿಕೆ ಇಟ್ಟಿದ್ದರು. ಹಣ ಕೊಡದಿದ್ದರೆ ನಿನ್ನ ಮಗನನ್ನು ಅಪಹರಣ ಮಾಡುತ್ತೇವೆ' ಎಂದು ಬೆದರಿಸಿದ್ದರು. ಈ ಸಂಬಂಧ ಶೇಷಾದ್ರಿಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

## 1.70 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿ

• ಉದಯವಾಹಿನಿ, ಬೆಂಗಳೂರು

ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಕಾರ್ಯಾಚರಣೆ ನಡೆಸಿದ ಕೋರಮಂಗಲ, ಯಲಹಂಕ ಉಪನಗರ ಠಾಣೆಯ ಪೊಲೀಸರು, ಇಬ್ಬರು ವಿದೇಶಿಯರೂ ಸೇರಿ ಮೂವರು ಡ್ರಗ್ಸ್ ಪೆಡ್ಲರ್‌ಗಳನ್ನು ಬಂಧಿಸಿದ್ದಾರೆ. ಬಂಧಿತರಿಂದ ರೂ.1.70 ಕೋಟಿ ಮೌಲ್ಯದ ವಿವಿಧ ಮಾದರಿಯ ಮಾದಕ ವಸ್ತುಗಳನ್ನು ಜಪ್ತಿ ಮಾಡಲಾಗಿದೆ. ಯಲಹಂಕ ಉಪನಗರ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ ಘಾನಾ ದೇಶದ ಬ್ರೆಟ್ (45) ಹಾಗೂ ಕೋಫಿ (44) ಎಂಬುವವರನ್ನು ಬಂಧಿಸಿದ್ದಾರೆ.

ಬಂಧಿತರಿಂದ ರೂ.70 ಲಕ್ಷ ಮೌಲ್ಯದ ಎಂಡಿಎಂಎ ವಶಕ್ಕೆ ಪಡೆದಿದ್ದಾರೆ. ವಿದೇಶದಿಂದ



ಉದಯವಾಹಿನಿ ಚಿತ್ರ

ಬಂದಿದ್ದ ಇಬ್ಬರು ದೊಡ್ಡಬೆಟ್ಟದಹಳ್ಳಿಯ ಮೂರನೇ ಕ್ರಾಸ್‌ನ ಮನೆಯೊಂದರಲ್ಲಿ ಮಾದಕ ವಸ್ತುಗಳನ್ನು ಸಂಗ್ರಹಿಸಿಕೊಂಡು ಮಾರಾಟ ಮಾಡುತ್ತಿರುವ ಕುರಿತು ದೂರು ಬಂದಿತ್ತು. ಇದನ್ನು ಆಧರಿಸಿ ಮನೆಯ ಮೇಲೆ ದಾಳಿ ನಡೆಸಿದಾಗ ಎಂಡಿಎಂಎ ಸಂಗ್ರಹ ಮಾಡಿಕೊಂಡಿದ್ದು ಪತ್ತೆಯಾಗಿತ್ತು ಎಂದು ಪೊಲೀಸರು ಹೇಳಿದರು.

## ನಕಲಿ ಜಾಮೀನು ನೀಡುತ್ತಿದ್ದವರ ಸೆರೆ

• ಉದಯವಾಹಿನಿ, ಬೆಂಗಳೂರು

ಆರೋಪಿಗಳ ಪರವಾಗಿ ನ್ಯಾಯಾಲಯಗಳಲ್ಲಿ ನಕಲಿ ಜಾಮೀನು ನೀಡುತ್ತಿದ್ದ ಎಂಟು ಆರೋಪಿಗಳನ್ನು ಕೇಂದ್ರ ವಿಭಾಗದ ಹಲಸೂರು ಗೇಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ವಿಜಯನಗರ ಜಿಲ್ಲೆ ಹೂವಿನಹಡಗಲಿಯ ಕೆ.ರಫಿ (33) ಬೆಂಗಳೂರಿನ ಯಲಹಂಕ ತಾಲ್ಲೂಕಿನ ಸಿಂಗಹಳ್ಳಿಯ ಎಸ್‌ಜಿ.ಪ್ರವೀಣ್ ಕುಮಾರ್ (32) ತುಮಕೂರು ಜಿಲ್ಲೆಯ ತಿಪಟೂರಿನ ಅಭಿಷೇಕ್ (33), ಆನೇಕಲ್ ತಾಲ್ಲೂಕಿನ ಮೈಸೂರಮ್ಮದೊಡ್ಡಿಯ ನಿವಾಸಿ ಗೋವಿಂದನಾಯ್ಕ (37), ರಾಮನಗರ ಜಿಲ್ಲೆಯ ಗಂಗೋಣಹಳ್ಳಿಯ ನಿವಾಸಿ ದೊರೆರಾಜು (32), ಬೆಂಗಳೂರಿನ ಬಿಟಿಎಂ ಲೇಔಟ್‌ನ ಗುರಪ್ಪಪಾಳ್ಯದ



ಉದಯವಾಹಿನಿ ಚಿತ್ರ

ಅಬೀದ್ ವಾಸೀಂ (46), ಯಶವಂತಪುರದ ಅಹಮ್ಮದ್ ಜುಬೇರ್ (23) ಹಾಗೂ ತುರುವೇಕೆರೆ ತಾಲ್ಲೂಕು ತಾವರೆಕೆರೆಯ ಟಿ.ಡಿ.ಗೋವಿಂದರಾಜು (32) ಬಂಧಿತರು. ಆರೋಪಿಗಳಿಂದ 47 ನಕಲಿ ಆಧಾರ್ ಕಾರ್ಡ್‌ಗಳು, ಆರ್‌ಟಿಸಿ, ವಿವಿಧ ಮಾದರಿಯ 122 ನಕಲಿ ದಾಖಲೆಗಳು, ಪೆನ್ ಡ್ರೈವ್, ಏಳು ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು. ನಾಲ್ಕನೇ ಎಸಿಜೆಎಂ ನ್ಯಾಯಾಲಯದ ಶಿರಸ್ತೇದಾರ್ ಡಿ.ಸೆಲ್ವರಾಜ್ ಹಾಗೂ ಹಲಸೂರು ಗೇಟ್ ಠಾಣೆಯ ಪಿಎಸ್‌ಐ ಭಗವಂತ್ರಾಲಯ ಮಾಶ್ಯಾಳ್ ಅವರು ನೀಡಿದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಎಂಟು ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು. ನಕಲಿ ಆಧಾರ್ ಕಾರ್ಡ್, ಆರ್‌ಟಿಸಿ, ಮ್ಯುಟೇಷನ್ ಹಾಗೂ ವಿವಿಧ ಸರ್ಕಾರಿ ಇಲಾಖೆಯ ನಕಲಿ ವೇತನ ಚೀಟಿಗಳನ್ನು ಸೃಷ್ಟಿಸಿಕೊಳ್ಳುತ್ತಿದ್ದ ಆರೋಪಿಗಳು, ನ್ಯಾಯಾಲಯದಲ್ಲಿ ಜಾಮೀನು ಕೋರಿರುವ ಆರೋಪಿಗಳನ್ನು ಪತ್ತೆಹಚ್ಚುತ್ತಿದ್ದರು. ಜಾಮೀನು ಕೋರಿರುವ ಆರೋಪಿಗಳ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿ ನಕಲಿ ದಾಖಲೆಗಳನ್ನು ಸಲ್ಲಿಸುತ್ತಿದ್ದರು' ಎಂದು ಮೂಲಗಳು ತಿಳಿಸಿವೆ.'

# ಬೆಂಗಳೂರಲ್ಲಿ ಇ–ಖಾತಾ ವ್ಯವಸ್ಥೆಯಿಂದ ತೆರಿಗೆ ವಂಚನೆ ಬಯಲು!

## 1000 ಕೋಟಿ ರೂ. ಹೆಚ್ಚುವರಿ ತೆರಿಗೆ ಸಂಗ್ರಹದ ನಿರೀಕ್ಷೆ, 9 ತಿಂಗಳಲ್ಲಿ 5.50 ಲಕ್ಷಕ್ಕೂ ಹೆಚ್ಚು ಇ–ಖಾತಾ ವಿತರಣೆ

• ಉದಯವಾಹಿನಿ, ಬೆಂಗಳೂರು

ಮಹಾನಗರದಲ್ಲಿ ಕೋಟ್ಯಂತರ ರೂ. ಬೆಲೆ ಬಾಳುವ ಆಸ್ತಿಗಳ ಅಕ್ರಮ ಮಾರಾಟ ನಕಲಿ ದಾಖಲೆ ಸೃಷ್ಟಿಯಂತಹ ಕುಕೃತ್ಯಗಳಿಗೆ ಕಡಿವಾಣ ಹಾಕುವ ಉದ್ದೇಶದೊಂದಿಗೆ ಜಾರಿಗೆ ತಂದಿರುವ ಇ–ಖಾತಾ ವ್ಯವಸ್ಥೆಯು ಬಿಬಿಎಂಪಿ ಬೊಕ್ಕಸ ತುಂಬಿಸುತ್ತಿದೆ. ಇದರಿಂದ ತೆರಿಗೆ ವಂಚಕರ ಬಣ್ಣ ಬಯಲಾಗುತ್ತಿದೆ! ಹೌದು, ಆಸ್ತಿ ಮಾಲೀಕರು ಅಂತಿಮ ಇ–ಖಾತೆಗಾಗಿ ಸಲ್ಲಿಸುವ ದಾಖಲಾತಿಗಳಿಂದ ತೆರಿಗೆ ವಂಚನೆಯು ಬೆಳಕಿಗೆ ಬರುತ್ತಿದೆ. ಇದರಿಂದ ಆಸ್ತಿ ತೆರಿಗೆ ಸೋರಿಕೆಗೆ ಕಡಿವಾಣ ಬಿದ್ದಂತಾಗಿದೆ. ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯಡಿ (ಎಸ್‌ಎಎಸ್) ಮಾಲೀಕರು ಸ್ವತ್ತುಗಳ ನೈಜ ವಿಸ್ತೀರ್ಣ ಘೋಷಿಸದೆ ಕಡಿಮೆ ತೆರಿಗೆ ಪಾವತಿಸಿಕೊಂಡು ಬರುತ್ತಿದ್ದಾರೆ. ಕೆಲ ವರ್ಷಗಳ ಹಿಂದೆ ಟೋಟಲ್ ಸ್ಟೇಷನ್ ಸರ್ವೆ ಮೂಲಕ ಐಟಿ, ಬಿಟಿ ಕಂಪನಿಗಳು, ಮಾಲ್‌ಗಳ ತೆರಿಗೆ ವಂಚನೆ ಬಯಲಿಗೆಳೆಯಲಾಯಿತು. ಆದರೆ, ಇದು ಶುರುವಾದಷ್ಟೇ ವೇಗದಲ್ಲಿ ಸ್ಥಗಿತಗೊಂಡಿತು.

**500 ಕೋಟಿ ರೂ. ವಸೂಲಾತಿ:** 2024ರ ಅ.1ರಿಂದ ಇ–ಖಾತಾ ವ್ಯವಸ್ಥೆ ಜಾರಿಗೆ ಬಂದಿತು. ಕಳೆದ 9 ತಿಂಗಳಲ್ಲಿ 5.50 ಲಕ್ಷಕ್ಕಿಂತ ಹೆಚ್ಚು ಅಂತಿಮ ಇ–ಖಾತಾಗಳನ್ನು ವಿತರಿಸಲಾಗಿದೆ. 25 ಲಕ್ಷ ಆಸ್ತಿಗಳ ಕರಡು ಇ–ಖಾತಾಗಳು ಆನ್‌ಲೈನ್‌ನಲ್ಲಿ ಲಭ್ಯ ಇವೆ.

ಬಿಬಿಎಂಪಿ ವ್ಯಾಪ್ತಿಯಲ್ಲಿನ ಪ್ರತಿಯೊಂದು ಸ್ವತ್ತಿಗೂ ಇ–ಖಾತಾ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ. ಸಾರ್ವಜನಿಕರು ಅಂತಿಮ ಇ–ಖಾತಾ ಪಡೆಯಲು ತಮ್ಮ



ಉದಯವಾಹಿನಿ ಚಿತ್ರ

ಆಧಾರ್ ಸಂಖ್ಯೆ, ಕ್ರಯಪತ್ರ, ಆಸ್ತಿ ತೆರಿಗೆ ಐಡಿ, ಬೆಸ್ಕಾಂ ಸಂಖ್ಯೆ ಮತ್ತು ಆಸ್ತಿಯ ಭಾವಚಿತ್ರದ ದಾಖಲೆ ಸಲ್ಲಿಸಬೇಕಿದೆ. ಇದರಿಂದ ಆಸ್ತಿಗಳ ನೈಜ ವಿಸ್ತೀರ್ಣ, ತೆರಿಗೆ ಪಾವತಿಯ ಮಾಹಿತಿ ಲಭ್ಯವಾಗುತ್ತಿದೆ. ಅಷ್ಟೇ ಅಲ್ಲ; ತೆರಿಗೆ ವಂಚನೆಯೂ ಪತ್ತೆಯಾಗುತ್ತಿದೆ. ಅಂತಿಮ ಇ–ಖಾತಾಗಾಗಿ ಸಲ್ಲಿಸಿರುವ ಆಸ್ತಿಗಳ ದಾಖಲಾತಿ ಪರಿಶೀಲನೆ ಸಂದರ್ಭದಲ್ಲಿ ಸ್ವಯಂಘೋಷಿತ ತೆರಿಗೆ ಪದ್ಧತಿಯಡಿ ಕಡಿಮೆ ವಿಸ್ತೀರ್ಣ ಘೋಷಿಸಿಕೊಂಡಿರುವುದು ಹಾಗೂ ವಾಣಿಜ್ಯ ಬಳಕೆಯ ಕಟ್ಟಡಗಳಿಗೆ ವಸತಿ ತೆರಿಗೆ ಪಾವತಿಸುತ್ತಿರುವುದು ಕಂಡು ಬಂದಿದೆ. ಇಂಥ ಆಸ್ತಿಗಳಿಂದ ಈವರೆಗೆ 500 ಕೋಟಿ ರೂ. ವಸೂಲು ಮಾಡಲಾಗಿದೆ.

**5 ಲಕ್ಷ ಆಸ್ತಿಗಳಿಂದ ತೆರಿಗೆ ಖೋತಾ:** ಆಸ್ತಿ ತೆರಿಗೆಯೇ ಬಿಬಿಎಂಪಿಯ ಪ್ರಮುಖ ಆದಾಯ ಮೂಲ. ಪಾಲಿಕೆಯು 25 ಲಕ್ಷಕ್ಕಿಂತ ಹೆಚ್ಚು ಸ್ವತ್ತುಗಳ ಕರಡು ಇ–ಖಾತಾಗಳನ್ನು ಆನ್‌ಲೈನ್‌ನಲ್ಲಿ ಲಭ್ಯವಾಗಿಸಿದೆ. ಆದರೆ, ತೆರಿಗೆ ವಸೂಲಾಗುತ್ತಿರುವುದು ಸುಮಾರು 20 ಲಕ್ಷ ಆಸ್ತಿಗಳಿಂದ ಮಾತ್ರ. ಹೀಗಾಗಿ, ಕೋಟ್ಯಂತರ ರೂ. ತೆರಿಗೆ ಸೋರಿಕೆಯಾಗುತ್ತಿದೆ. ಹಲವು ಸ್ವತ್ತುಗಳನ್ನು ತೆರಿಗೆ ಜಾಲದಡಿ ತರಲಾಗಿಲ್ಲ. ಇದೆಲ್ಲದಕ್ಕೂ ಇ–ಖಾತಾವನ್ನೇ ಅಸ್ತ್ರವಾಗಿಸಿಕೊಳ್ಳಲಾಗಿದೆ. ತೆರಿಗೆ ವಂಚನೆ, ತೆರಿಗೆ ಜಾಲದಡಿ ಬಾರದಿರುವ ಆಸ್ತಿಗಳನ್ನು ಪತ್ತೆ ಮಾಡಿ ಆಸ್ತಿ ತೆರಿಗೆಯ ಆದಾಯದ ಮೂಲವನ್ನು ಹೆಚ್ಚಿಸಿಕೊಳ್ಳಲು ಪಾಲಿಕೆ ತೀರ್ಮಾನಿಸಿದೆ. ಅಂತಿಮ ಇ–ಖಾತಾ ಕೋರಿ ಆಸ್ತಿ ಮಾಲೀಕರು ಸಲ್ಲಿಸುವ ದಾಖಲೆಗಳನ್ನು

> ಇ–ಖಾತಾ ವ್ಯವಸ್ಥೆಯಿಂದ 1000 ಕೋಟಿ ರೂ. ಹೆಚ್ಚುವರಿ ಆಸ್ತಿ ತೆರಿಗೆ ಸಂಗ್ರಹವಾಗುವ ನಿರೀಕ್ಷೆ ಇದೆ. ಇ–ಖಾತಾ ಕೋರಿ ಸಲ್ಲಿಕೆಯಾಗಿರುವ ದಾಖಲಾತಿಗಳ ಪರಿಶೀಲನೆಯಿಂದ ಕಡಿಮೆ ವಿಸ್ತೀರ್ಣ ಘೋಷಿಸಿಕೊಂಡು ತೆರಿಗೆ ವಂಚಿಸುತ್ತಿರುವ ಆಸ್ತಿ ಮಾಲೀಕರನ್ನು ಪತ್ತೆ ಮಾಡುತ್ತಿದ್ದು, ಈವರೆಗೆ 500 ಕೋಟಿ ರೂ. ವಸೂಲಾಗಿದೆ.
> –ಮುನೀಶ್ ಮೌದ್ಗಿಲ್, ವಿಶೇಷ ಆಯುಕ್ತ, ಬಿಬಿಎಂಪಿ ಕಂದಾಯ ವಿಭಾಗ

**2996 ಕೋಟಿ ರೂ. ತೆರಿಗೆ ಸಂಗ್ರಹ**

**ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಸಕ್ತ 2025–26ನೇ ಸಾಲಿನಲ್ಲಿ 6256 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹ ಗುರಿ ಹೊಂದಲಾಗಿದೆ. ಈ ಪೈಕಿ ಈವರೆಗೆ 2966 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹಿಸಲಾಗಿದೆ.**

ಪರಿಶೀಲಿಸಿ, ತೆರಿಗೆ ವಂಚನೆ ಪತ್ತೆ ಮಾಡಲು ಉದ್ದೇಶಿಸಲಾಗಿದೆ. ಸುಮಾರು 5 ಲಕ್ಷ ಆಸ್ತಿಗಳು ತಪ್ಪು ವಿಸ್ತೀರ್ಣ ಘೋಷಿಸಿಕೊಂಡು ಕಡಿಮೆ ತೆರಿಗೆ ಪಾವತಿಸುತ್ತಿರುವುದು ಬೆಳಕಿಗೆ ಬಂದಿದೆ. ಈ ಆಸ್ತಿಗಳಿಂದ 500 ಕೋಟಿ ರೂ. ತೆರಿಗೆ ಸಂಗ್ರಹವಾಗುವ ನಿರೀಕ್ಷೆ ಇದೆ. 2024–25ನೇ ಸಾಲಿನಲ್ಲಿ 20.57 ಲಕ್ಷ ಆಸ್ತಿ ಮಾಲೀಕರ ಪೈಕಿ 3.49 ಲಕ್ಷ ಮಂದಿ ತೆರಿಗೆ ಪಾವತಿಸಿಲ್ಲ. 1.73 ಲಕ್ಷ ಮಂದಿ ದೀರ್ಘಕಾಲದ ಸುಸ್ತಿದಾರರು ಹಾಗೂ 1.76 ಲಕ್ಷ ಮಂದಿ ಕಳೆದ ವರ್ಷದ ಸುಸ್ತಿದಾರರಾಗಿದ್ದಾರೆ. ಒಟ್ಟು 3.49 ಲಕ್ಷ ಮಂದಿ ಸುಸ್ತಿದಾರರಿಂದ 390 ಕೋಟಿ ರೂ. ತೆರಿಗೆ ಬಾಕಿ ಬರಬೇಕಿದೆ. ಇವರಿಗೆ ನೋಟಿಸ್, ಸಂದೇಶ, ಐವಿಆರ್‌ಎಸ್ ಕರೆಗಳು, ವೈಯಕ್ತಿಕ ಕರೆಗಳು, ಮುಟ್ಟುಗೋಲು ನೋಟಿಸ್ ಕಳುಹಿಸಿದರೂ ತೆರಿಗೆ ವಸೂಲಾಗಿಲ್ಲ.

# ಸಾಧನಾ ಸಮಾವೇಶ ಸಿದ್ದರಾಮಯ್ಯ ಶಕ್ತಿ ಪ್ರದರ್ಶನದ ಸಮಾವೇಶ ಅಲ್ಲ

• ಉದಯವಾಹಿನಿ, ಮೈಸೂರು

ಜುಲೈ 19 ರಂದು ಮೈಸೂರಿನಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರದ ಸಾಧನಾ ಸಮಾವೇಶ ಹಿನ್ನೆಲೆ ಮಹಾರಾಜ ಕಾಲೇಜು ಮೈದಾನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್ ಸಿ ಮಹದೇವಪ್ಪ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು.



**ಮೈಸೂರಿಗೆ ಅನುದಾನ:** ಸಿಎಂ ಸಿದ್ದರಾಮಯ್ಯ ಅವರು ಮೈಸೂರು ಜಿಲ್ಲೆಗೆ 3 ದಿನಗಳ ಕಾಲ ಪ್ರವಾಸ ಕೈಗೊಳ್ಳಲಿದ್ದಾರೆ. ಮೈಸೂರಿಗೆ ಸಾವಿರಾರು ಕೋಟಿ ರೂಪಾಯಿ ಅನುದಾನ ಮಂಜೂರು ಆಗಿತ್ತು. ಕೆಲವೊಂದು ಉದ್ಘಾಟನೆ ಆಗಬೇಕು. ಇನ್ನೂ ಅನೇಕ ಕಾರ್ಯಕ್ರಮಗಳ ಶಂಕುಸ್ಥಾಪನೆ ಮಾಡಬೇಕು. ಮೈಸೂರು ಜಿಲ್ಲೆಗೆ ಸರ್ಕಾರದಿಂದ ಏನೆಲ್ಲಾ ಅನುದಾನ ಬಂದಿದೆ ಎಂಬುದರ ಕುರಿತು ಚರ್ಚೆ ಮಾಡಿದ್ದೇವೆ. 502 ಕೋಟಿ ಲೋಕೋಪಯೋಗಿ ಇಲಾಖೆಗೆ ಬಂದಿದೆ. ಜಲ ಸಂಪನ್ಮೂಲ ಇಲಾಖೆಗೆ 419 ಕೋಟಿ ಬಂದಿದೆ.

ಸೆಸ್‌ಗೆ 408 ಕೋಟಿ ರೂಪಾಯಿ ಹಣ ಬಂದಿದೆ ಎಂದರು. ಸಣ್ಣ ಕೈಗಾರಿಕೆಗೆ 198 ಕೋಟಿ ಹಣ ಕೊಟ್ಟಿದ್ದಾರೆ. ಜಿಲ್ಲಾ ಕೋಶದಿಂದ 120 ಕೋಟಿ ಹಣ ಬಂದಿದೆ. ವೈದ್ಯಕೀಯ ಶಿಕ್ಷಣ ಇಲಾಖೆಗೆ 100 ಕೋಟಿ ಕೊಟ್ಟಿದೆ. ಇತರೆ ಇಲಾಖೆಗಳಿಗೆ ನೂರಾರು ಕೋಟಿ ಹಣ ಕೊಟ್ಟಿದ್ದೇವೆ. 2569 ಕೋಟಿ ಹಣ ಮೈಸೂರು ನಗರ ವ್ಯಾಪ್ತಿಗೆ ರಾಜ್ಯ ಸರ್ಕಾರದಿಂದ ಬಂದಿದೆ. ಹೀಗಾಗಿ ಮೈಸೂರು ಜಿಲ್ಲೆಯಲ್ಲಿ ಸರ್ಕಾರದ ಸಾಧನಾ ಸಮಾವೇಶ ಮಾಡುತ್ತಿದ್ದೇವೆ. ಜುಲೈ 19 ರಂದು ಮೈಸೂರಿನಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ ಕೆ ಶಿವಕುಮಾರ್ ಶಂಕುಸ್ಥಾಪನೆ, ಉದ್ಘಾಟನೆ ಕಾರ್ಯಕ್ರಮಗಳನ್ನು ಮಾಡಲಿದ್ದಾರೆ ಎಂದು ಹೇಳಿದರು.

**ಸಿಗಂದೂರು ಸೇತುವೆ ಉದ್ಘಾಟನೆ**

**ಸಿದ್ದರಾಮಯ್ಯ ಕಾಲದಲ್ಲಿ ಮೈಸೂರು ಅಭಿವೃದ್ಧಿ**

**ಮೈಸೂರು ಜಿಲ್ಲೆಗೆ ಸಿದ್ದರಾಮಯ್ಯನವರ ಕಾಲದಲ್ಲಿ ಆದಷ್ಟು ಅಭಿವೃದ್ಧಿ ಯಾವ ಕಾಲದಲ್ಲೂ ಆಗಿಲ್ಲ. ಯಾವ ಸರ್ಕಾರವೂ ಮಾಡದ ಕೆಲಸವನ್ನು ಮೈಸೂರಿಗೆ ನಮ್ಮ ಸರ್ಕಾರ ಮಾಡಿದೆ. ಕೇವಲ ಮೈಸೂರು ನಗರಕ್ಕಾಗಿಯೇ 2569 ಕೋಟಿ ಕೊಟ್ಟಿದ್ದೇವೆ. ಇದು ಸಾಧನೆ ಅಲ್ವಾ. ಗ್ಯಾರಂಟಿಯಿಂದ ಅನುದಾನ ಕೊಡಲಾಗುತ್ತಿಲ್ಲ ಎಂಬುದು ಸುಳ್ಳು. ಗ್ಯಾರಂಟಿ ಜೊತೆಯೇ ನಾವು ಅಭಿವೃದ್ಧಿ ಮಾಡುತ್ತಿದ್ದೇವೆ. ಈ ಸಾಧನಾ ಸಮಾವೇಶಕ್ಕೆ ವಿರೋಧ ಪಕ್ಷದ ಶಾಸಕರು, ಸಂಸದರಿಗೂ ಆಹ್ವಾನ ಕೊಟ್ಟಿದ್ದೇವೆ. ಶಿಷ್ಟಾಚಾರದ ಪಾಲನೆ ಮಾಡಿದ್ದೇವೆ. ಬರುವುದು, ಬಿಡುವುದು ಅವರಿಗೆ ಬಿಟ್ಟಿದ್ದು ಎಂದರು.**

**ವೇಳೆ ಶಿಷ್ಟಾಚಾರ ಉಲ್ಲಂಘನೆ ವಿಚಾರ:** ಇದು ನಮ್ಮ ಮೊದಲ ಅವಧಿಯ ಸರ್ಕಾರದ ಯೋಜನೆ. 2013ರಲ್ಲಿ ನಾವೇ ಈ ಸೇತುವೆ ಯೋಜನೆಗೆ ಕಾರ್ಯಸೂಚಿ ಸಿದ್ದ ಮಾಡಿದ್ದೇವೆ. ಒಟ್ಟಾರೆ ಪ್ಲಾನ್ ಕೂಡ ತಯಾರು ಮಾಡಿದ್ದೇವೆ. ಯಡಿಯೂರಪ್ಪ ಅವರೇ ನನಗೆ ಕರೆ ಮಾಡಿ ಮಹದೇವಣ್ಣ ಈ ಬ್ರಿಡ್ಜ್ ಮಾಡಿಕೊಡು ಎಂದು ಪ್ರೀತಿಯಿಂದ ಹೇಳಿದ್ದರು. ಅಂದಿನ ಸ್ಪೀಕರ್ ಕಾಗೋಡು ತಿಮ್ಮಪ್ಪನವರು ಸಹ ಮಹದೇವಪ್ಪ ಈ ಬ್ರಿಡ್ಜ್ ಮಾಡು ಎಂದು ಹೇಳಿದ್ದರು. ಹೀಗಾಗಿ ಸೇತುವೆ ಕಾರ್ಯ ಯೋಜನೆ ಮಾಡಿದ್ದೇವೆ. ಯೋಜನೆಗೆ ಹಣ ಜಾಸ್ತಿಯಾದ ಕಾರಣ ಅದನ್ನು ಕೇಂದ್ರಕ್ಕೆ ವರ್ಗಾಯಿಸಲಾಯಿತು. ನಾನು ಯಾವತ್ತೂ ಇದು ನಮ್ಮದು ಎಂದು ಕ್ಲೈಂ ಮಾಡಿಲ್ಲ. ಇವರು ಹೇಳುತ್ತಿರುವುದಕ್ಕೆ ನಾನು ಹೇಳುತ್ತಿದ್ದೇನೆ.

ಇದು ಕಾಂಗ್ರೆಸ್ ಸರ್ಕಾರದ ಯೋಜನೆ ಎನ್ನುವುದರಲ್ಲಿ ಯಾವುದೇ ಅನುಮಾನಗಳು ಬೇಡ. ಕಾರ್ಯಕ್ರಮದಲ್ಲಿ ಶಿಷ್ಟಾಚಾರದ ಉಲ್ಲಂಘನೆಯಾಗಿದೆ. ಇದು ಆರೋಗ್ಯಕರ ಬೆಳವಣಿಗೆಯಲ್ಲ. ರಾಜ್ಯ, ಕೇಂದ್ರ ಎರಡು ಸರ್ಕಾರ ಅಲ್ಲಿ ಇದಿದ್ದರೇ ಅದರ ಮೆರುಗು ಹೆಚ್ಚಾಗುತ್ತಿತ್ತು. ಮುಂದಿನ ದಿನಗಳಲ್ಲಿ ಈ ರೀತಿಯ ಸಂಘರ್ಷಕ್ಕೆ ಕೇಂದ್ರ, ಸರ್ಕಾರ ಅವಕಾಶ ಮಾಡಿಕೊಡಬಾರದು ಎಂದರು.

## ಸಚಿನ್ ನಿಂಬಾಳ್ಕರ್, ಐಶ್ವರ್ಯಾಗೆ ಮುಖ್ಯಮಂತ್ರಿ ಪದಕ

• ಉದಯವಾಹಿನಿ, ಕುಶಾಲನಗರ





ವಲಯ ಅರಣ್ಯ ವ್ಯಾಪ್ತಿಯ ಮೀನುಕೊಲ್ಲಿ ವಿಭಾಗದಲ್ಲಿ ಉಪ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಚಿನ್ ನಿಂಬಾಳ್ಕರ್, ಗಂಧದಕೋಟಿ ಅರಣ್ಯ ತರಬೇತಿ ಕೇಂದ್ರದ ವಲಯ ಉಪ ಅರಣ್ಯಾಧಿಕಾರಿ ಐಶ್ವರ್ಯಾ ಆರ್. ಗೌಡಗ ಮುಖ್ಯಮಂತ್ರಿ ಪದಕ ಗೌರವಕ್ಕೆ ಭಾಜನರಾಗಿದ್ದಾರೆ. ಸಚಿನ್ ನಿಂಬಾಳ್ಕರ್ 8 ವರ್ಷಗಳಿಂದ ಕೊಡಗು ಜಿಲ್ಲೆಯಲ್ಲಿ ಉಪ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ವಿರಾಜಪೇಟೆ ಉಪ ವಿಭಾಗದಲ್ಲಿ ಕೆಲವು ವರ್ಷ ಕರ್ತವ್ಯ ನಿರ್ವಹಿಸಿದ್ದರು. ಐಶ್ವರ್ಯಾ ಅವರು 8 ವರ್ಷಗಳಿಂದ ಕೊಡಗು ಜಿಲ್ಲೆಯಲ್ಲಿ ಉಪ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

## ಕನ್ನಡ ಸಾಹಿತ್ಯ ಸ್ಪರ್ಧೆಗೆ ಆಹ್ವಾನ

• ಉದಯವಾಹಿನಿ, ಮಂಡ್ಯ

ಜೀವನಾಡಿ ಕನ್ನಡ ಮಾಸಪತ್ರಿಕೆ ವತಿಯಿಂದ ರಾಜ್ಯ ಮಟ್ಟದ ಕನ್ನಡ ಸಾಹಿತ್ಯ ಸ್ಪರ್ಧೆ-2025 ಅಂಗವಾಗಿ ಕಥಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಕವನ ಸ್ಪರ್ಧೆಯನ್ನು ಆಯೋಜಿಸಲಾಗಿದೆ ಎಂದು ಪತ್ರಿಕೆಯ ಸಂಪಾದಕ ಎಚ್. ಎಸ್. ಮುದ್ದೇಗೌಡ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕಥೆ 2,500 ಪದಗಳನ್ನು ಮೀರಬಾರದು, ಪ್ರಬಂಧ 2 ಸಾವಿರ ಪದಗಳನ್ನು ಮೀರಬಾರದು, ಕವಿತೆಗಳು 24 ಸಾಲುಗಳನ್ನು ಮೀರಬಾರದು, ಸದರಿ ಸ್ಪರ್ಧೆಗೆ ಪ್ರಸ್ತುತ ಪಡಿಸುವ ಕಥೆ, ಪ್ರಬಂಧ, ಕವನಗಳು ಬ್ಲಾಗ್, ಸಾಮಾಜಿಕ ಜಾಲತಾಣ ಸೇರಿದಂತೆ ಬೇರೆಲ್ಲೂ ಪ್ರಕಟವಾಗಿರಬಾರದು, ಅನುವಾದಿತ ಕಥೆ, ಪ್ರಬಂಧ, ಕವಿತೆಗಳಿಗೆ ಅವಕಾಶವಿಲ್ಲ, ಸ್ವಂತ ರಚನೆಯಾಗಿರಬೇಕು ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು. ಲೇಖನಗಳನ್ನು ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿಸಿ ಇ ಮೇಲ್: jeevanaadi22@gmail.com ವಿಳಾಸಕ್ಕೆ ಕಳುಹಿಸಬೇಕು. ಲೇಖನದ ಜತೆ ಲೇಖಕರ ಭಾವಚಿತ್ರ, ವಿಳಾಸ, ದೂರವಾಣಿ ಸಂಖ್ಯೆ, ಇ-ಮೇಲ್ ವಿಳಾಸವನ್ನು ಪ್ರತ್ಯೇಕ ಹಾಳೆಯಲ್ಲಿ ಬರೆದು ಲಗತ್ತಿಸಬೇಕು. ಲಕೋಟೆಯ ಮೇಲೆ ಜೀವನಾಡಿ ಸಾಹಿತ್ಯ ಸ್ಪರ್ಧೆ-2025 ಎಂದು ನಮೂದಿಸಬೇಕು. ಕಥೆ, ಪ್ರಬಂಧ, ಕವನಗಳನ್ನು ಸಲ್ಲಿಸಲು ಆ.15 ಕೊನೆಯ ದಿನವಾಗಿದ್ದು, ನಂತರ ಬಂದಲ್ಲಿ ಪರಿಗಣಿಸಲಾಗುವುದಿಲ್ಲ ಎಂದರು.

# 2823 ಎಕರೆ ಭೂಸ್ವಾಧೀನ ಕೈಬಿಡಲು ಆಗ್ರಹ

## ಚನ್ನರಾಯಪಟ್ಟಣ ಹೋರಾಟದಿಂದ ಜಂಗಮಕೋಟೆ ರೈತರ ಹೋರಾಟಕ್ಕೆ ಬೂಸ್ಟ್

• ಉದಯವಾಹಿನಿ, ಚಿಕ್ಕಬಳ್ಳಾಪುರ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನರಾಯಪಟ್ಟಣ ವ್ಯಾಪ್ತಿಯ ರೈತರ ಹೋರಾಟಕ್ಕೆ ರಾಜ್ಯ ಸರಕಾರ ತಲೆಬಾಗಿದೆ. ಇದು ಜಮೀನು ಕಳೆದುಕೊಳ್ಳುವ ಭೀತಿಯಲ್ಲಿರುವ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆ ಭಾಗದ ರೈತರಲ್ಲಿ ಆಶಾಭಾವ ಮೂಡಿಸಿದ್ದು, ಚನ್ನರಾಯಪಟ್ಟಣ ರೈತರ ಹೋರಾಟದಲ್ಲೂ ಭಾಗಿಯಾಗಿದ್ದ ಇಲ್ಲಿನ ರೈತರು ಹರ್ಷ ವ್ಯಕ್ತಪಡಿಸಿದ್ದಾರೆ.

**ರೈತರ ಸಂಭ್ರಮಕ್ಕೆ ಕಾರಣ**

ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ವಿಧಾನಸೌಧದ ಸಭಾಂಗಣದಲ್ಲಿ ನಡೆದ ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಹಾಗೂ ಇತರ ಗ್ರಾಮಗಳಲ್ಲಿನ 1777 ಎಕರೆ ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಪಟ್ಟಂತೆ ಅಧಿಕಾರಿಗಳ, ರೈತ ಮುಖಂಡರ ಸಭೆಯಲ್ಲಿ ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ, ಇತರ ಗ್ರಾಮಗಳಲ್ಲಿನ ಭೂಸ್ವಾಧೀನ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದೇವೆ ಎಂದು ಘೋಷಿಸಲಾಗಿದೆ. ಇದೀಗ ರೈತರ ಸಂಭ್ರಮಕ್ಕೆ ಕಾರಣವಾಗಿದೆ.

**ಇಲ್ಲೂ ಭರವಸೆ:** ಸರಕಾರ ಭೂಸ್ವಾಧೀನ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಕೈಬಿಡಲು ನಿರ್ಧರಿಸಿದೆ. ಕೆಲವು ರೈತರು ಜಮೀನು ನೀಡಲು ಸಿದ್ಧರಿರುವುದಾಗಿ ಮುಂದೆ ಬಂದಿದ್ದಾರೆ. ಜಮೀನು ನೀಡಲು ಇಚ್ಛಿಸುವವರ ಜಮೀನನ್ನು ಸರಕಾರ ಸ್ವಾಧೀನಪಡಿಸಿಕೊಳ್ಳಲಿದ್ದು, ಅವರಿಗೆ ಹೆಚ್ಚಿನ ಪರಿಹಾರ, ಅಭಿವೃದ್ಧಿಪಡಿಸಿದ ಜಮೀನು ನೀಡಲಾಗುವುದು ಎಂದು ಭರವಸೆ ನೀಡಿದೆ. ರಾಜ್ಯದಲ್ಲಿ ಭೂಸ್ವಾಧೀನ ವಿರುದ್ಧ ಈ ಮಟ್ಟದ ಪ್ರತಿಭಟನೆ ನಡೆದಿಲ್ಲ. ಸರಕಾರ ರೈತಪರವಾಗಿದ್ದು, ಅವರ ಬೇಡಿಕೆಗಳನ್ನು ಪರಿಗಣಿಸಿ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡಲು ನಿರ್ಧರಿಸಿದೆ ಎಂದು ಮುಖ್ಯಮಂತ್ರಿ ಹೇಳಿರುವುದು ಜಿಲ್ಲೆಯ ಹೋರಾಟಗಾರರಲ್ಲೂ ಭರವಸೆ ಮೂಡಿಸಿದೆ.

**ಹೋರಾಟಕ್ಕೆ ಅಣಿ:** ಚನ್ನರಾಯಪಟ್ಟಣ ಭೂ ಹೋರಾಟಕ್ಕೆ ಸಿಕ್ಕಿರುವ ಜಯ ಶಿಡ್ಲಘಟ್ಟದ ಜಂಗಮಕೋಟೆ ಭಾಗದ ರೈತರಲ್ಲೂ ಆಶಾಭಾವ ಮೂಡಿಸಿದೆ. ಭೂಮಿ ಉಳಿಸಿ ಹೋರಾಟಕ್ಕೆ ಮತ್ತಷ್ಟು ಪುಷ್ಟಿ ನೀಡಿದ್ದು, ಇಲ್ಲೂ ರಾಜ್ಯ ಸರಕಾರ ಭೂ ಸ್ವಾಧೀನ ಕೈಬಿಡಲಿದೆ ಎಂಬ ಸಂತಸ ವ್ಯಕ್ತಪಡಿಸಿದ್ದಾರೆ. ವಿಶೇಷ ಎಂದರೆ ಈ ಭಾಗದ ರೈತರೂ ಚನ್ನರಾಯಪಟ್ಟಣ ಹೋರಾಟಕ್ಕೂ ಬೆಂಬಲ ಸೂಚಿಸಿದ್ದರು. ಈಗ ಜಂಗಮಕೋಟೆ ವ್ಯಾಪ್ತಿಯಲ್ಲೂ ದೊಡ್ಡ ಮಟ್ಟದ ಹೋರಾಟಕ್ಕೆ ರೈತರು ಅಣಿಯಾಗಿದ್ದಾರೆ.

**ಏನೇನಾಗಿದೆ?:** ಸರಕಾರ ಸದ್ಯಕ್ಕೆ ಯಾವುದೇ ನಿರ್ಧಾರ ತಗೆದುಕೊಂಡಿಲ್ಲ. ಈ ಮಧ್ಯೆ ಜನಪ್ರತಿನಿಧಿಗಳು, ಕೆಲವು ರೈತ ಸಂಘಟನೆಗಳ ನಡುವೆ ದೊಡ್ಡ ವಾಕ್ಸಮರವೂ ನಡೆದಿದ್ದು ನಾನೋ ನೀನೋ ಎನ್ನುವ ಪರಿಸ್ಥಿತಿ ಸ್ಥಾಪನೆಗೊಂಡಿದೆ.

ಜನಮತ ಸಂಗ್ರಹದಲ್ಲಿ ಹೆಚ್ಚಿನ ರೈತರು ಜಮೀನು ಕೊಡಲ್ಲ ಎಂದಿದ್ದಾರೆ, ಕೈಗಾರಿಕಾ ನಿರ್ಮಾಣ ಯೋಚನೆಯನ್ನು ಕೈಬಿಡಿ ಎಂದು ಕೆಐಎಡಿಬಿಗೆ ರೈತರು ಆಗ್ರಹಿಸುತ್ತಿದ್ದಾರೆ. ಆದರೆ ಜನಪ್ರತಿನಿಧಿಗಳು ಮಾತ್ರ ಕಾನೂನಿನ ನಿಯಮದಂತೆ ಎಲ್ಲ ಪ್ರಕ್ರಿಯೆಗಳು ನಡೆಯಲಿವೆ ಎಂದು ಕಾದುನೋಡುವ ತಂತ್ರಕ್ಕೆ ಶರಣಾಗಿದ್ದಾರೆ. ಆದರೆ ಈಗ ಚನ್ನರಾಯಪಟ್ಟಣದ ಹೋರಾಟದ ನಂತರ ಜಂಗಮಕೋಟೆ ಭಾಗದ ರೈತರಲ್ಲೂ ಭೂಮಿ ಉಳಿಸಿಕೊಳ್ಳುವ ಭರವಸೆ ಮೂಡಿದೆ.

ಚನ್ನರಾಯಪಟ್ಟಣ ರೈತರ ಹೋರಾಟಕ್ಕೆ ಈ ಭಾಗದ ರೈತರು ಬೆಂಬಲ ನೀಡಿದ್ದರು. ಈಗ ಅಲ್ಲಿನ ರೈತರಿಗೆ ನ್ಯಾಯ ಸಿಕ್ಕಿದ್ದು, ಈಗ ಅಲ್ಲಿನ ರೈತರು ಜಂಗಮಕೋಟೆ ವ್ಯಾಪ್ತಿಯ ರೈತರ ಹೋರಾಟಕ್ಕೆ ಸಾಥ್ ನೀಡುವ ಭರವಸೆ ನೀಡಿದ್ದಾರೆ. ಈಗಾಗಲೇ ಸರಕಾರ ಜಂಗಮಕೋಟೆ ವ್ಯಾಪ್ತಿಯಲ್ಲಿ ಭೂ ಸ್ವಾಧೀನ ಪ್ರಕ್ರಿಯೆಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು, ಮುಂದೆ ಯಾವ ರೀತಿ ಹೋರಾಟ ರೂಪುಗೊಳ್ಳಲಿದೆ ಎಂಬುದನ್ನು ಕಾದುನೋಡಬೇಕು.



ಉದಯವಾಹಿನಿ ಚಿತ್ರ

**ಚನ್ನರಾಯಪಟ್ಟಣ ರೈತ ಹೋರಾಟಕ್ಕೆ ಜಯ ಸಿಕ್ಕಿರುವುದು ನಮಗೆ ಭಾರಿ ಸಂತೋಷವನ್ನುಂಟು ಮಾಡಿದೆ. ಅದೇ ರೀತಿ ಜಂಗಮಕೋಟೆ ವ್ಯಾಪ್ತಿಯಲ್ಲಿನಡೆಯುತ್ತಿರುವ ಹೋರಾಟಕ್ಕೂ ಜಯ ಸಿಗುವ ಭರವಸೆ ಸಿಕ್ಕಿದೆ. ಕಾನೂನು ಹೋರಾಟದ ಜತೆಗೆ ಚಳವಳಿಯನ್ನು ಮುಂದುವರಿಸಿದ್ದು ಶೀಘ್ರವೇ ಬೃಹತ್ ಮಟ್ಟದ ಹೋರಾಟ ನಡೆಯಲಿದೆ. ಜಂಗಮಕೋಟೆ ರೈತರ ಹೋರಾಟಕ್ಕೂ ಜಯ ಸಿಗಲಿದೆ.**

**-ಭಕ್ತರಹಳ್ಳಿ ಬೈರೇಗೌಡ, ರಾಜ್ಯ ಕಾರ್ಯಾಧ್ಯಕ್ಷ, ರೈತ ಸಂಘ**

**ಚನ್ನರಾಯಪಟ್ಟಣದ ಹೋರಾಟ ಗೆದ್ದಿದ್ದು, ಒಗ್ಗಟ್ಟಿನಲ್ಲಿ ಬಲವಿದೆ ಎಂಬುದನ್ನು ಸಾಬೀತುಪಡಿಸಿದೆ. ಜನರು ಒಂದಾದರೆ ಯಾವತ್ತೂ ಸೋಲಾಗದು ಎಂಬುದಕ್ಕೆ ಚನ್ನರಾಯಪಟ್ಟಣದ ಹೋರಾಟವೇ ಸಾಕ್ಷಿಯಾಗಿದೆ. ಹೋರಾಟಕ್ಕೆ ಜಯ ಸಿಗಲಿದೆ ಎಂಬುದು ಮೊತ್ತೊಮ್ಮೆ ರುಜುವಾತಾಗಿದೆ.**

**-ಆರ್.ಆಂಜನೇಯರೆಡ್ಡಿ, ಅಧ್ಯಕ್ಷರು, ಶಾಶ್ವತ ನೀರಾವರಿ ಹೋರಾಟ ಸಮಿತಿ**

**ಗರಿಗೆದರಿದ ನಿರೀಕ್ಷೆ**

**ಜಂಗಮಕೋಟೆ ಬಳಿ ಕೈಗಾರಿಕೆ ಪ್ರದೇಶ ನಿರ್ಮಿಸಲು 2823 ಎಕರೆ ಭೂಮಿಯನ್ನು ಗುರುತಿಸಲಾಗಿದ್ದು, ಭೂ ಸ್ವಾಧೀನ ಪ್ರಕ್ರಿಯೆಗೆ ಭಾರಿ ವಿರೋಧ ವ್ಯಕ್ತವಾಗಿದೆ. ಈಗಾಗಲೇ ರೈತರ ಅಭಿಪ್ರಾಯ ಸಂಗ್ರಹ ನಡೆದಿದ್ದು, ಹೆಚ್ಚಿನ ಮಂದಿ ವಿರೋಧ ವ್ಯಕ್ತಪಡಿಸಿದ್ದಾರೆ. ಆದರೆ ಆ ಭಾಗದಲ್ಲಿಆಗಾಗ್ಗೆ ಕೆಐಎಡಿಬಿ, ರೈತರ ನಡುವೆ ಗಲಾಟೆಗಳು ನಡೆಯುತ್ತಲೇ ಇವೆ. ಸದ್ಯ ಚನ್ನರಾಯಪಟ್ಟಣ ರೈತರ ಹೋರಾಟಕ್ಕೆ ಸರಕಾರ ಮಣಿದಿರುವುದು ಈ ಭಾಗದ ರೈತರ ನಿರೀಕ್ಷೆಯನ್ನು ಗರಿಗೆದರುವಂತೆ ಮಾಡಿದೆ.**

# ಮಳೆಗಾಲದಲ್ಲಿಯೇ ಮೇವಿಗೆ ಬರ

• ಉದಯವಾಹಿನಿ, ಹುಳಿಯಾರು

ಜುಲೈ ಮಧ್ಯಭಾಗ ಪೂರ್ಣ ಮಳೆಗಾಲದ ದಿನಗಳಾಗಿದ್ದು, ಹೊಲದಲ್ಲಿ ಬೆಳೆ ಮಧ್ಯೆ ಬೆಳದ ಕಳೆ, ಬದುಗಳಲ್ಲಿ ಹುಲುಸಾಗಿ ಆಹಾರ ತಿನ್ನುತ್ತಿದ್ದ ರಾಸುಗಳು ಈ ವರ್ಷ ಮಳೆ ಕೊರತೆಯಿಂದ ಕೆರೆ, ಕಟ್ಟೆಗಳ ಕೂಳೆ ಹುಲ್ಲು, ಮರಗಳ ಸೊಪ್ಪನ್ನು ತಿನ್ನುವಂತಾಗಿದೆ. ಮುಂಗಾರು ಆರಂಭದ ನಂತರ ಎರಡು ತಿಂಗಳಿನಿಂದಲೂ ನಿರೀಕ್ಷಿತ ಮಳೆಯಾಗದೆ ಸಂಪೂರ್ಣ ಭರ ಆವರಿಸಿದೆ. ಕಳೆದ ವರ್ಷ ಕೂಡ ಉತ್ತಮ ಮಳೆಯಾಗದೆ ರಾಗಿ, ನವಣೆ ಸೇರಿದಂತೆ ಬೆಳೆಗಳು ಉತ್ತಮವಾಗಿ ಬೆಳೆಯದ ಕಾರಣ ಮೇವು ಬರಲಿಲ್ಲ. ಕಾಳು ಬೇರ್ಪಡಿಸಿ ಹುಲ್ಲನ್ನು ಒಣಗಿಸಿ ಬಣವೆ ಹಾಕಿಕೊಂಡು ದಾಸ್ತಾನು ಮಾಡಿಕೊಂಡು ಬಳಸುತ್ತಿದ್ದರು. ಕಳೆದ ವರ್ಷ ಮಳೆ ಬಾರದ ಕಾರಣ ಹುಲ್ಲು ದಾಸ್ತಾನು ಮಾಡಲು ಆಗಿಲ್ಲ. ಕೆಲ ರೈತರಿಗೆ ಅಲ್ಪಸ್ವಲ್ಪ ಆಗಿದ್ದರೂ ಈಗಾಗಲೇ ದಾಸ್ತಾನು ಮುಗಿದು ಹೋಗಿದೆ. ಗುಡ್ಡ ಪ್ರದೇಶಗಳಲ್ಲಿ ಬಾದೆಹುಲ್ಲು ಇದ್ದರೆ ಅದನ್ನಾದರೂ ಮೇಯಿಸಿ ಕೊಳ್ಳುತ್ತಿದ್ದರು. ಆದರೆ ಡಿಸೆಂಬರ್‌ನಲ್ಲಿಯೇ ಗುಡ್ಡಗಳು ಹೊತ್ತಿ ಉರಿಯುವುದರಿಂದ ಅಲ್ಲಿಯೂ ಮೇವು ಸಿಗುತ್ತಿಲ್ಲ. ಮುಂಗಾರಿನಲ್ಲಿ ಉತ್ತಮ ಮಳೆ ಬಂದರೆ ಪೂರ್ವ ಮುಂಗಾರು ಬೆಳೆಗಳ ಜತೆ ಹುಲ್ಲು ಬೆಳೆಯುತ್ತಿತ್ತು.



ಉದಯವಾಹಿನಿ ಚಿತ್ರ

**ಮುಗಿದ ಹುಲ್ಲು ದಾಸ್ತಾನು**

ಅದಲ್ಲದೆ ಮುಂಗಾರು ಬೆಳೆ ಚನ್ನಾಗಿ ಬಂದಿದ್ದರೆ ಹೆಸರು ಸೊಪ್ಪು ಕೂಡ ರಾಸುಗಳ ಮೇವಿಗೆ ಬಳಕೆಯಾಗುತ್ತಿತ್ತು. ರೋಹಿಣಿ ಮಳೆ ಬಂದಿದ್ದರೆ ಜೋಳದ ಬೀಜಗಳ ಬಿತ್ತನೆಯಿಂದ ರಾಸುಗಳ ಮೇವಿಗೆ ತೊಂದರೆ ಆಗುತ್ತಿರಲಿಲ್ಲ. ಆದರೆ ಎರಡು ತಿಂಗಳಿನಿಂದ ಮಳೆಯಿಲ್ಲದೆ ಎಲ್ಲಿಯೂ ಮೇವು ಲಭ್ಯವಾಗದೆ ರೈತರು ಮೇವಿಗಾಗಿ ಪರದಾಡುತ್ತಿದ್ದಾರೆ. ಕೊಳವೆಬಾವಿ ಹೊಂದಿರುವ ರೈತರು ಮೇವು ಬೆಳೆದುಕೊಳ್ಳಲು ನೀರಿನ ಬರ ಎದುರಾಗಿದೆ.

ಕೊಳವೆಬಾವಿಯ ಅಲ್ಪಸ್ವಲ್ಪ ನೀರನ್ನು ದೀರ್ಘಾವಧಿ ಬೆಳೆಗಳಾದ ತೆಂಗು, ಅಡಿಕೆ ಉಳಿಸಿಕೊಳ್ಳಲು ಬಳಕೆ ಮಾಡಿಕೊಳ್ಳುತ್ತಿದ್ದಾರೆ. ದುಬಾರಿ ಹಣ ತೆತ್ತು ಬೇರೆ ಕಡೆಯಿಂದ ಮೇವು ತರಲು ರೈತರ ಬಳಿ ಆರ್ಥಿಕ ಸಮಸ್ಯೆ ಕಾಡುತ್ತಿದೆ. ಹೈನುಗಾರಿಕೆಗಾಗಿ ಮಿಶ್ರತಳಿ ಹಸುಗಳನ್ನು ಪಾಲನೆ ಮಾಡಿರುವ ಹೈನುಗಾರರು ಮೇವಿಗೆ ಪರದಾಡುತ್ತಿದ್ದಾರೆ. ಮಿಶ್ರತಳಿ ಹಸುಗಳು ಹೆಚ್ಚು ಮೇವು ತಿನ್ನುವುದರಿಂದ ಅವುಗಳಿಗೆ ಮೇವು ಹುಡುಕುವುದು ಕಷ್ಟವಾಗಿ ಪರಿಣಮಿಸಿದೆ. ಮನೆಯಲ್ಲಿಯೇ ಇದ್ದು ಹಸಿ ಮೇವು ತಿಂದು ಹಾಲು ಕರೆಯುವ ಹಸುಗಳನ್ನು ವಿಧಿಯಿಲ್ಲದೆ ಕೆರೆ ದಂಡೆ ಸೇರಿದಂತೆ ಇತರೆಡೆ ಮೇವು ಮೇಯಿಸಲು ಹೋಗುವ ಸ್ಥಿತಿ ನಿರ್ಮಾಣವಾಗಿದೆ ಎನ್ನುತ್ತಾರೆ ಹೈನುಗಾರರು. ಈಗಾಗಲೇ ಬಹುತೇಕ ರೈತರು ಮರದ ಸೊಪ್ಪನ್ನು ಆಶ್ರಯಿಸುತ್ತಿದ್ದಾರೆ. ಮುಂದಿನ ವಾರದಲ್ಲಿ ಮಳೆ ಬಾರದೆ ಹೋದರೆ ರೈತರು ರಾಸುಗಳ ಮೇವಿಗೆ ಬೇಸಿಗೆ ಕಾಲದಲ್ಲಿ ಬರ ಅನುಭವಿಸಿದಂತೆ ಮಳೆಗಾಲದಲ್ಲಿಯೂ ಅನುಭವಿಸಬೇಕಾಗುತ್ತದೆ ಎಂದು ಆತಂಕ ವ್ಯಕ್ತಪಡಿಸುತ್ತಾರೆ ರೈತರು.

**ಕಳೆದ ವರ್ಷ ಉತ್ತಮ ಮಳೆಬಾರದೆ ಹುಲ್ಲು ದಾಸ್ತಾನು ಮಾಡಲು ಆಗಿಲ್ಲ. ಪ್ರಸಕ್ತ ಮುಂಗಾರಿನಲ್ಲಿ ಮಳೆ ಕೈಕೊಟ್ಟು ಕಾರಣ ಹೊಲಗಳಲ್ಲಿ ಮೇವು ಸಿಗುತ್ತಿಲ್ಲ. ಮೇವಿನ ಬರದಿಂದ ಮಿಶ್ರ ತಳಿ ಹಸುವೊಂದನ್ನು ಅನಿವಾರ್ಯವಾಗಿ ಮಾರಬೇಕಾಯಿತು**

**-ಜಯಣ್ಣ ರಂಗನಕೆರೆ**

# ಕಾಡಾನೆ ಹಾವಳಿ: ಮನೆಗೆ ಹಾನಿ

• ಉದಯವಾಹಿನಿ, ನಾಪೋಕ್ಲು

ಸಮೀಪದ ನರಿಯಂದಡ, ಯವಕಪಾಡಿ ಗ್ರಾಮದಲ್ಲಿ ಕಾಡಾನೆಗಳ ಉಪಟಳ ಮಿತಿಮೀರಿದ್ದು, ಗ್ರಾಮಸ್ಥರು ಹೈರಾಣಾಗಿದ್ದಾರೆ. ಯವಕಪಾಡಿ ಗ್ರಾಮದ ಕುಡಿಯರ ಕಾಲೊನಿಯಲ್ಲಿ ಕಾಡಾನೆಗಳು ದಾಂದಲೆ ನಡೆಸಿವೆ. ಯವಕಪಾಡಿ ಗ್ರಾಮದ ನಿವಾಸಿ ಕುಡಿಯರ ಬಿದ್ದಪ್ಪ ಅವರ ಐನ್ ಮನೆಯ ಮೇಲೆ ತೆಂಗಿನ ಮರ ಬೀಳಿಸಿ ಮನೆಗೆ ಹಾನಿ ಉಂಟು ಮಾಡಿದೆ. ಕುಟುಂಬದವರು ಕೆಲಸದ ನಿಮಿತ್ತ ಬೇರೆಡೆ ತೆರಳಿದ್ದರಿಂದ ಯಾವುದೇ ಅನಾಹುತವಾಗಿಲ್ಲ.

ಕುಡಿಯರ ಗಣೇಶ್ ಮಾತನಾಡಿ, ಬಿರುಸಿನ ಮಳೆಯಿದ್ದುದರಿಂದ ಎಲ್ಲರೂ ಬೇರೆಡೆ ತೆರಳಿದ್ದೆವು. ಮನೆ ಖಾಲಿ ಇತ್ತು. ತೆಂಗಿನ ಮರ ಮುರಿದು ಬಿದ್ದು ಸಮಸ್ಯೆಯಾಗಿದೆ. ಮುತ್ತಜ್ಜನ ಕಾಲದಿಂದ ವಾಸವಿದ್ದ ಮನೆ ಧ್ವಂಸವಾಗಿದೆ. ಸರ್ಕಾರ ಕಾಲೊನಿಗೆ ರಸ್ತೆ ನಿರ್ಮಿಸಿದ್ದು ಬಿಟ್ಟರೆ ಕಾಡುಪ್ರಾಣಿಗಳಿಂದ ಉಂಟಾಗುವ ಉಪಟಳದ ಬಗ್ಗೆ ಯಾವುದೇ ಪರಿಹಾರ ನೀಡುತ್ತಿಲ್ಲ. ಕಾಡು ಪ್ರಾಣಿಗಳಿಂದ ಬಡಜನರು ಸಮಸ್ಯೆ ಅನುಭವಿಸುತ್ತಿದ್ದು ಸರ್ಕಾರಕ್ಕೆ ಕಾಳಜಿ ಇಲ್ಲ ಎಂದು ಆರೋಪಿಸಿದರು.

ಅರಣ್ಯ ಇಲಾಖೆ ಸಿಬ್ಬಂದಿ ಯಾರು ಆಗಮಿಸಿಲ್ಲ. ಸಂತ್ರಸ್ತರಿಗೆ ಸ್ಥಳದಲ್ಲೇ ಪರಿಹಾರ ನೀಡುವ ಕಾರ್ಯ ಆಗಬೇಕು ಎಂದು ಗ್ರಾಮ ಪಂಚಾಯಿತಿ ಸದಸ್ಯ ಕುಡಿಯರ ಭರತ್ ಚಂದ್ರ, ದೇವಯ ಒತ್ತಾಯಿಸಿದರು.



ಉದಯವಾಹಿನಿ ಚಿತ್ರ

**ಎರಡು ವರ್ಷದಿಂದ ಈ ಭಾಗದಲ್ಲಿ ವಾಸಿಸುವವರ ಮನೆ ಆಸ್ತಿ ನಾಶವಾಗಿದೆ. ಲಕ್ಷಾಂತರ ರೂಪಾಯಿ ನಷ್ಟವಾಗಿದೆ. ಯವಕಪಾಡಿ, ಮರಂದೋಡ, ಕುಂಜಿಲ ಸೇರಿದಂತೆ ವಿವಿಧ ಗ್ರಾಮಗಳಲ್ಲಿನ ಕಾಫಿ ತೋಟಗಳು ಹಾನಿಯಾಗಿವೆ. ಇಲ್ಲಿ ಒಂಟಿ ಸಲಗ ಅಡ್ಡಾಡುತ್ತಿದ್ದು ಪ್ರತಿವರ್ಷ ಸಮಸ್ಯೆ ಆಗುತ್ತಿದೆ. ಒಂಟಿ ಸಲಗವನ್ನು ಹಿಡಿಯಲು ಕೇಂದ್ರ ಸರ್ಕಾರದಿಂದ ಆದೇಶವಾಗಿದ್ದರೂ ಅರಣ್ಯ ಇಲಾಖೆ ಆನೆ ಸೆರೆ ಹಿಡಿಯಲು ವಿಫಲವಾಗಿದೆ. ಆನೆ ದಾಳಿಯಿಂದ ಹಾನಿಗೊಳಗಾದ ಮನೆಯನ್ನು ನಿರ್ಮಿಸಲು ಕುಟುಂಬಕ್ಕೆ 10 ಲಕ್ಷ ಪರಿಹಾರ ನೀಡಬೇಕು**

**- ಕುಡಿಯರ ಮುತ್ತಪ್ಪ, ತಾಲ್ಲೂಕು ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ**

## ಮಿನಿ ನ್ಯೂಸ್

### ಸಹ ವಿದ್ಯಾರ್ಥಿ ಮೇಲೆ ಹಲ್ಲೆ ಆರೋಪಿಗಳ ವಿರುದ್ಧ ಎಫ್‌ಐಆರ್

• ಉದಯವಾಹಿನಿ, ಕನಕಪುರ

ಕ್ಷುಲ್ಲಕ ಕಾರಣಕ್ಕೆ ಕಾಲೇಜು ವಿದ್ಯಾರ್ಥಿಗಳು ಗುಂಪು ಕಟ್ಟಿಕೊಂಡು ಸಹ ವಿದ್ಯಾರ್ಥಿ ಮೇಲೆ ಹಲ್ಲೆ ನಡೆಸಿರುವ ಘಟನೆ ನಗರದ ವಿವೇಕಾನಂದ ನಗರದಲ್ಲಿ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಭರತ್ (19), ಆತನ ಸಹೋದರ ಗಗನ್ (21) ಹಲ್ಲೆಗೊಳಗಾದವರು. ಐಟಿಐ ವ್ಯಾಸಂಗ ಮಾಡುತ್ತಿರುವ ಕನಕಪುರದ ಮಾದೇಶ್, ಅನಿಲ್, ಸೂರ್ಯ, ಬಿಜ್ಜಳ್ಳಿ ಪ್ರೀತು ಸೇರಿದಂತೆ ಹತ್ತು ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಜುಲೈ 10 ರಂದು ಐಟಿಐ ಕಾಲೇಜಿನಲ್ಲಿ ಓದುತ್ತಿರುವ ಮಾದೇಶ್, ಅನಿಲ್, ಸೂರ್ಯ, ಪ್ರೀತು ಕಾಲೇಜಿನಲ್ಲಿ ವಿನಾಕಾರಣ ಜಗಳ ತೆಗೆದು ಭರತ್ ಮೇಲೆ ಗಲಾಟೆ ಮಾಡಿದ್ದಾರೆ.

ಅಲ್ಲದೆ ಸಂಜೆ 10 ಮಂದಿ ಗುಂಪು ಕಟ್ಟಿಕೊಂಡು ಬಂದು ಮಾರಕಾಸ್ತ್ರ ಹಿಡಿದು ವಿವೇಕಾನಂದ ನಗರದ ಭರತ್ ಅವರ ಮನೆ ಬಳಿ ಭರತ್, ಗಗನ್ ಅವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ದೊಣ್ಣೆಯಿಂದ ಹಲ್ಲೆ ಮಾಡಿ ಜೀವ ಬೆದರಿಕೆ ಹಾಕಿದ್ದಾರೆ. ವಿನಾಕಾರಣ ಆರೋಪಿಗಳು ನನ್ನ ಮಕ್ಕಳು ಭರತ್, ಗಗನ್ ಮೇಲೆ ಹಲ್ಲೆ ನಡೆಸಿ, ಜೀವಬೆದರಿಕೆ ಹಾಕಿದ್ದಾರೆ. ಹಾಗಾಗಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಂಡು ನನ್ನ ಮಕ್ಕಳಿಗೆ ರಕ್ಷಣೆ ನೀಡಬೇಕೆಂದು ಭರತ್ ತಾಯಿ ಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ದೂರಿನನ್ವಯ ಆರೋಪಿಗಳ ವಿರುದ್ಧ ಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು, ಆರೋಪಿಗಳು ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

### ಗರ್ಭಿಣಿಯಾದ ಬಾಲಕಿ ಎಫ್‌ಐಆರ್ ದಾಖಲು

• ಉದಯವಾಹಿನಿ, ಕುಣಿಗಲ್

9ನೇ ತರಗತಿ ವಿದ್ಯಾರ್ಥಿನಿಯನ್ನು ಪುಸಲಾಯಿಸಿ, ಅತ್ಯಾಚಾರ ವೆಸಗಿ ಗರ್ಭಿಣಿಯಾಗಲು ಕಾರಣನಾದ ಆರೋಪದ ಮೇರೆಗೆ ಕಿರಣ್ (21) ಎಂಬಾತನ ವಿರುದ್ಧ ಅಮೃತೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 'ಕಿರಣ್ ಎಂಬಾತ ಮಗಳನ್ನು ಪುಸಲಾಯಿಸಿ ಅತ್ಯಾಚಾರ ವೆಸಗಿದ್ದಾನೆ. ಈತನ ವಿರುದ್ಧ ಸೂಕ್ತ ಕ್ರಮಕ್ಕೆಗೊಳ್ಳಬೇಕು ಎಂದು ಬಾಲಕಿ ತಾಯಿ ನೀಡಿದ ದೂರಿನ ಮೇರೆಗೆ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಬಾಲಕಿಯ ತಾಯಿ ಬೆಂಗಳೂರಿನಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದರು. ವಾರ, ತಿಂಗಳಿಗೊಮ್ಮೆ ಊರಿಗೆ ಬಂದು ಹೋಗುತ್ತಿದ್ದರು. ಬಾಲಕಿ ತಂದೆಯ ಜತೆಗೆ ತಾಲ್ಲೂಕಿನ ಗ್ರಾಮವೊಂದರಲ್ಲಿ ವಾಸವಿದ್ದರು. ಭಾನುವಾರ ತಾಯಿ ಮನೆಗೆ ಬಂದಾಗ ಬಾಲಕಿ ಮಲಗಿದ್ದು, ವಿಚಾರಿಸಿದಾಗ ಆರೋಗ್ಯ ಸರಿಯಿಲ್ಲ ಎಂದಿದ್ದಾಳೆ. ಕೂಡಲೇ ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಆರೋಗ್ಯ ಪರೀಕ್ಷಿಸಿದಾಗ ಬಾಲಕಿ ಗರ್ಭ ಧರಿಸಿರುವುದು ಗೊತ್ತಾಗಿದೆ. ನಂತರ ಗರ್ಭಪಾತ ಮಾಡಿಸಿದ್ದಾರೆ. ವಿದ್ಯಾಭ್ಯಾಸಕ್ಕೆ ಅಡ್ಡಿಯಾಗಬಾರದು ಎಂಬ ಕಾರಣಕ್ಕೆ ವೈದ್ಯರಿಗೆ ತಿಳಿಸಿ ಕಾನೂನು ನಿಯಮದಂತೆ ಗರ್ಭಪಾತ ಮಾಡಿಸಲಾಗಿದೆ ಎಂದು ತಾಯಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

### ನಾಲ್ಕು ಹಸುಗಳ ಕಳವು

• ಉದಯವಾಹಿನಿ, ನಾಗಮಂಗಲ

ತಾಲ್ಲೂಕಿನ ತಟ್ಟಹಳ್ಳಿ ಗ್ರಾಮದ ನಿವಾಸಿ ಅಪ್ಪೇಗೌಡ ಅವರಿಗೆ ಸೇರಿದ್ದ ನಾಲ್ಕು ಹಸುಗಳನ್ನು ಕಳ್ಳರು ಈಚೆಗೆ ಕಳ್ಳತನ ಮಾಡಿದ್ದಾರೆ. 10 ಹಸುಗಳ ಪೈಕಿ ಸುಮಾರು 5 ಲಕ್ಷ ಬೆಲೆಬಾಳುವ ನಾಲ್ಕು ಹಸುಗಳನ್ನು ಕಳ್ಳರು ಕಳವು ಮಾಡಿದ್ದು, ಹೈನುಗಾರ ಕುಟುಂಬ ಕಂಗಾಲಾಗಿದೆ. ಅಪ್ಪೇಗೌಡ ಕುಟುಂಬದವರು ಹಲವು ವರ್ಷಗಳಿಂದ ಹೈನುಗಾರಿಕೆ ಮಾಡಿ ಜೀವನ ನಡೆಸುತ್ತಿದ್ದರು.



ತಮ್ಮ ತೋಟದ ಮನೆಯ ಕಾಂಪೌಂಡ್ ಬಳಿ ಕಟ್ಟಿದ್ದ 10 ಹಸುಗಳ ಪೈಕಿ ಎರಡು ಗರ್ಭ ಧರಿಸಿದ್ದ ಎಚ್.ಎಫ್ ಹಸುಗಳು ಸೇರಿದಂತೆ ನಾಲ್ಕು ಹಸುಗಳನ್ನು ಕಳ್ಳತನ ಮಾಡಿದ್ದು, ಅವುಗಳ ಬೆಲೆ 5 ಲಕ್ಷ ಎಂದು ಅಂದಾಜಿಸಲಾಗಿದೆ. ಕುಟುಂಬಸ್ಥರು ಗ್ರಾಮದ ಸುತ್ತಮುತ್ತಲ ಜಮೀನಿನಲ್ಲಿ ಹುಡುಕಾಟ ನಡೆಸಿದರೂ ಪ್ರಯೋಜನವಾಗಿಲ್ಲ. ಹಸುಗಳನ್ನು ನಂಬಿ ಬದುಕು ನಡೆಸುತ್ತಿದ್ದ ನಮಗೆ ದಿಕ್ಕು ತೋಚದಂತಾಗಿದ್ದು, ಇನ್ನು ನಮಗೆ ಯಾರು ಗತಿ ಎಂದು ವೃದ್ಧ ಅಪ್ಪೇಗೌಡರ ಕುಟುಂಬದ ಸದಸ್ಯರು ಅಳಲು ತೋಡಿಕೊಂಡರು. ನಾಗಮಂಗಲ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬೆಲೆ ಕುಸಿತ; ಈರುಳ್ಳಿ ಬೆಳೆದ ರೈತರು ಕಂಗಾಲು

• ಉದಯವಾಹಿನಿ, ಶಿಡ್ಲಘಟ್ಟ

ಸಾಮಾನ್ಯವಾಗಿ ಈರುಳ್ಳಿ ಹೆಚ್ಚುವಾಗ ಕಣ್ಣೀರು ಬರುತ್ತದೆ. ಆದರೆ ತಾಲ್ಲೂಕಿನಲ್ಲಿ ಈರುಳ್ಳಿ ಬೆಳೆದ ರೈತರು ಬೆಳೆಯ ಕುಸಿತದಿಂದಾಗಿ ಹಾಕಿದ ಹಣವೆಲ್ಲಾ ನಷ್ಟವಾಗಿ ಕಣ್ಣೀರಿಡುತ್ತಿದ್ದಾರೆ. ತಾಲ್ಲೂಕಿನ ಬಶೆಟ್ಟಹಳ್ಳಿ ಹೋಬಳಿಯ ತಿಮ್ಮನಾಯಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಲವಾರು ರೈತರು ಈರುಳ್ಳಿ ಬೆಳೆದಿದ್ದಾರೆ. ಕಳೆದ ಮೂರು ತಿಂಗಳಿಂದ ಈಗ ಬೆಲೆ ಬರುತ್ತದೆ, ನಾಳೆ ಬೆಳೆ ಬರುತ್ತದೆ ಎನ್ನುತ್ತಾ ಆಶಾಭಾವನೆಯಿಂದ ಈರುಳ್ಳಿಗಳನ್ನು ಚೀಲಕ್ಕೆ ಹಾಕಿಟ್ಟುಕೊಂಡು ಕಾಯುತ್ತಿದ್ದಾರೆ. ಆದರೆ ಒಂದೆಡೆ ಕೊಳೆತು ಹೋಗುತ್ತಿರುವ ಈರುಳ್ಳಿ, ಮತ್ತೊಂದೆಡೆ ಮಾರುಕಟ್ಟೆಯಲ್ಲಿ ಬೆಲೆ ಇರದಿರುವುದು ಅವರನ್ನು ಹೈರಾಣಾಗಿಸಿದೆ. ಅಲಗುರ್ಕಿ ಗ್ರಾಮದ ಮಾರಪ್ಪರೆಡ್ಡಿ ರಘುನಾಥರೆಡ್ಡಿ, ನಂದೀಶರೆಡ್ಡಿ, ನಾರಾಯಣಸ್ವಾಮಿ, ಮೂರ್ತಿ ಮುಂತಾದ ರೈತರು ಈರುಳ್ಳಿಯನ್ನು ರಾಶಿ ಹಾಕಿಕೊಂಡು ತಲೆ ಮೇಲೆ ಕೈಹೊತ್ತು ದಿಕ್ಕು ತೋಚದೆ ಕುಳಿತಿದ್ದಾರೆ.

**ಏನು ಮಾಡುವುದೋ ತೋಚುತ್ತಿಲ್ಲ**

ಒಂದು ಸೇರಿಗೆ 500ರಂತೆ, 25 ಸೇರು ಈರುಳ್ಳಿಯನ್ನು ನಾಟಿ ಮಾಡಿದ್ದವು. 250 ಮೂಟೆಯಷ್ಟು ಈರುಳ್ಳಿ ಬೆಳೆದಿದ್ದೆವು. ಮೂರು ತಿಂಗಳು ಕಾದರೂ ಬೆಲೆ ಬಂದಿಲ್ಲ. ಸಾಕಷ್ಟು ಈರುಳ್ಳಿ ಕೊಳೆತು ಹೋಗಿ ಈಗ 170 ಮೂಟೆಗಳಷ್ಟು ಮಾತ್ರ ಉಳಿದಿದೆ. ನಾಲ್ಕು ತಿಂಗಳು ಬೆಳೆ ಬೆಳೆದು, ಮೂರು ತಿಂಗಳಿಂದ ಕಾದಿರುವ ನಮಗೆ ಈಗ ಏನು ಮಾಡುವುದೋ ತೋಚುತ್ತಿಲ್ಲ ಎಂದು ರೈತ ರಘುನಾಥರೆಡ್ಡಿ ತಮ್ಮ ಅಳಲನ್ನು ತೋಡಿಕೊಂಡರು.

ಈರುಳ್ಳಿ ಬೆಲೆ ಕುಸಿತದಿಂದಾಗಿ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ರೈತರು ನಷ್ಟ ಅನುಭವಿಸುತ್ತಿದ್ದಾರೆ. ಹೆಚ್ಚಿನ ಇಳುವರಿ, ಇತರ ರಾಜ್ಯಗಳಿಂದ ಆವಕ, ಮಧ್ಯವರ್ತಿಗಳ ಹಾವಳಿ ಮುಂತಾದ ಕಾರಣಗಳಿಂದ ಈರುಳ್ಳಿ ಬೆಲೆ ಕುಸಿದಿದೆ. ಈರುಳ್ಳಿ ಬೆಲೆ ಕುಸಿತದಿಂದ ರೈತರು ಆರ್ಥಿಕ ನಷ್ಟ ಅನುಭವಿಸುತ್ತಿದ್ದಾರೆ. ಸಾಲಗಾರರಾಗುವ ಭೀತಿ ಎದುರಾಗಿದೆ. ಮನನೊಂದ ರೈತರು ಬೆಳೆದ ಬೆಳೆಯನ್ನು ನಾಶಪಡಿಸುತ್ತಿದ್ದಾರೆ. ಸರ್ಕಾರ ಬೆಲೆ ಕುಸಿತ ತಡೆಯಲು ಬೆಂಬಲ ಬೆಲೆ ನಿಗದಿಪಡಿಸಬೇಕು. ಈರುಳ್ಳಿ ಶೇಖರಿಸಿಡಲು ಸೂಕ್ತವಾದ ಶೈತ್ಯಾಗಾರ ನಿರ್ಮಿಸಬೇಕು. ಮಧ್ಯವರ್ತಿಗಳ ಹಾವಳಿಯನ್ನು ನಿಯಂತ್ರಿಸಿ ರೈತರು ಬೆಳೆದ ಬೆಳೆಗೆ ನ್ಯಾಯಯುತ ಬೆಲೆ ಸಿಗುವಂತೆ ನೋಡಿಕೊಳ್ಳಬೇಕು. ರೈತರು ಬೆಳೆದ ಬೆಳೆಯನ್ನು ಮಾರಾಟ ಮಾಡಲು ಸಮರ್ಪಕ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಬೇಕು ಎಂದು ರೈತರು ಒತ್ತಾಯಿಸಿದರು.



ಉದಯವಾಹಿನಿ ಚಿತ್ರ

**ಎರಡು ಲಕ್ಷ ರೂ ಬಂಡವಾಳ ಹಾಕಿದ್ದೇವೆ. ಆದರೆ ಈಗ ಮಾರಿದರೆ ಸುಮಾರು ಮೂವತ್ತು ಸಾವಿರ ಸಿಗಬಹುದಷ್ಟೇ. ಕೊಳ್ಳುವವರು ಇತ್ತ ತಲೆ ಹಾಕುತ್ತಿಲ್ಲ. ಕಳೆದ ವರ್ಷ ಎರಡು ಸಾವಿರ ರೂ ಇದ್ದ ಒಂದು ಮೂಟೆ ಈಗ 300 ಆಗಿದೆ. ನಮ್ಮ ಹಳ್ಳಿಯ ಸುತ್ತಮುತ್ತ ಸಾವಿರಾರು ಮೂಟೆಗಳು ರೈತರು ಬೆಳೆದ ಈರುಳ್ಳಿ ಇವೆ. ಇನ್ನು ಇವನ್ನು ಶೇಖರಿಸಿಡಲು ಸಾಧ್ಯವಿಲ್ಲ**


**- ರಘುನಾಥರೆಡ್ಡಿ, ರೈತ**

# ಜುಲೈನಲ್ಲೂ ಕೈಕೊಟ್ಟ ಮಳೆ; ಬರದ ಆತಂಕ

## ರೈತರು ಸಕಾಲಕ್ಕೆ ಬಿತ್ತನೆ ಮಾಡಲಾಗದೆ ಮುಗಿಲಿನತ್ತ ಮುಖ ಮಾಡಿದ್ದಾರೆ

• ಉದಯವಾಹಿನಿ, ತುಮಕೂರು

ಜಿಲ್ಲೆಯಲ್ಲಿ ಮುಂಗಾರು ಮಳೆ ಕೈಕೊಟ್ಟಿದ್ದು, ಎಲ್ಲೆಡೆ ಆತಂಕದ ವಾತಾವರಣ ಮನೆ ಮಾಡಿದೆ. ರೈತರು ಸಕಾಲಕ್ಕೆ ಬಿತ್ತನೆ ಮಾಡಲಾಗದೆ ಮುಗಿಲಿನತ್ತ ಮುಖ ಮಾಡಿದ್ದಾರೆ. ಈ ವೇಳೆಗಾಗಲೇ ಮುಂಗಾರು ಪೂರ್ವದಲ್ಲಿ ಬಿತ್ತನೆ ಮಾಡಿದ್ದ ಫಸಲು ಕೊಯ್ದುಮಾಡಿ, ಮುಂಗಾರು ಬಿತ್ತನೆ ಕೆಲಸವನ್ನು ಪೂರ್ಣಗೊಳಿಸುವ ಹಂತಕ್ಕೆ ಬರುತ್ತಿದ್ದರು. ಆದರೆ ಜೂನ್, ಜು. ತಿಂಗಳಲ್ಲಿ ವರುಣನ ಮುನಿಸು ಕಂಡು ದಿಕ್ಕು ತೋಚದಂತಾಗಿದೆ. ಇನ್ನೂ ಕೆಲವು ದಿನಗಳು ಇದೇ ಪರಿಸ್ಥಿತಿ ಮುಂದುವರಿದರೆ ಮುಂದೇನು? ಎಂಬ ಚಿಂತೆಯಲ್ಲಿದ್ದಾರೆ. ಮನದಲ್ಲೇ ವರುಣ ಪ್ರಾರ್ಥನೆ ನಡೆಸಿದ್ದಾರೆ. ಮುಗಿಲು ಕಪ್ಪಾಗುವುದು, ಮೋಡ ದಟ್ಟೈಸುವುದು, ಕೆಲ ಸಮಯ ಕತ್ತಲೆಯ ವಾತಾವರಣ ನಿರ್ಮಾಣವಾಗುವುದು.



ಉದಯವಾಹಿನಿ ಚಿತ್ರ

**ಅಂತರ್‌ಜಲದ ಮಟ್ಟ ಕುಸಿತ**

ಇನ್ನೇನು ಜೋರು ಮಳೆ ಬಂತು ಎನ್ನುವಷ್ಟರಲ್ಲಿ ಮೋಡ ಮರೆಯಾಗಿ ನಾಲ್ಕು ಹನಿಗಳೂ ಭೂಮಿಗೆ ಬೀಳುತ್ತಿಲ್ಲ. ಪ್ರತಿ ದಿನವೂ ವಾತಾವರಣದಲ್ಲಿ ಇಂತಹುದೇ ಸ್ಥಿತಿ ಕಂಡುಬರುತ್ತಿದೆ. ವರುಣನ ಕಣ್ಣಾಮುಚ್ಚಾಲೆ ಆಟ ಕಂಡವರು ದಿಗಿಲುಗೊಂಡಿದ್ದಾರೆ. ನಮ್ಮ ಕೈಯಲ್ಲಿ ಏನಿದೆ. ಎಲ್ಲಾ ಅವನೇ ಕುರುಣಿಸಬೇಕು ಎಂದು ರೈತ ಸಂಜೀವಪ್ಪ ಮುಗಿಲಿನತ್ತ ಕೈ ತೋರಿಸುತ್ತಾರೆ. ದಿನಗಳು ಕಳೆದಂತೆ ಪರಿಸ್ಥಿತಿ ಬಿಗಡಾಯಿಸುವಂತೆ ಕಾಣುತ್ತಿದೆ. ಒಂದು ವರ್ಷ ಮಳೆಯಾದರೆ ಮತ್ತೊಂದು ವರ್ಷ ಬರ ಎಂಬ ಸ್ಥಿತಿಯನ್ನು ನೆನೆದವರು ಆತಂಕಿತರಾಗಿದ್ದಾರೆ. ಹಿಂದಿನ ವರ್ಷ ಸಾಧಾರಣವಾಗಿ ಬಿದ್ದಿತ್ತು. ಈ ವರ್ಷವೂ ವರುಣನ ದಯೆ ನಮ್ಮ ಕಡೆ ಇರಲಿ ಎಂದು ರೈತರು ಪ್ರಾರ್ಥಿಸುತ್ತಿದ್ದಾರೆ. ಅಲ್ಲಲ್ಲಿ ಕಪ್ಪೆ, ಕತ್ತೆ, ಓತಿಕ್ಯಾತ ಮದುವೆ ಮಾಡಿ ಮೊರೆ ಇಡುತ್ತಿದ್ದಾರೆ.

**ಮಳೆ ವಿವರ:** ಜುಲೈ 1ರಿಂದ 15ರ ವರೆಗೆ ಮಧುಗಿರಿ ತಾಲ್ಲೂಕಿನಲ್ಲಿ ತೀವ್ರ ಮಳೆ ಕೊರತೆ ಎದುರಾಗಿದ್ದು, ವಾಡಿಕೆ 35 ಮಿ.ಮೀಗೆ ಕೇವಲ 10 ಮಿ.ಮೀ ಬಿದ್ದಿದೆ. ತುಮಕೂರು ತಾಲ್ಲೂಕಿನಲ್ಲಿ ವಾಡಿಕೆ 52 ಮಿ.ಮೀಗೆ 26 ಮಿ.ಮೀ, ತುರುವೇಕೆರೆ ತಾಲ್ಲೂಕು ವಾಡಿಕೆ 24 ಮಿ.ಮೀಗೆ 11 ಮಿ.ಮೀ, ಕುಣಿಗಲ್ ತಾಲ್ಲೂಕು 29 ಮಿ.ಮೀಗೆ 23 ಮಿ.ಮೀ ಸುರಿದಿದೆ. ಗುಬ್ಬಿ, ಶಿರಾ ತಾಲ್ಲೂಕಿನಲ್ಲೂ ಇಂತಹುದೇ ಪರಿಸ್ಥಿತಿ ಇದೆ. ಉಳಿದ ತಾಲ್ಲೂಕುಗಳಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ. ಕರೆ, ಕಟ್ಟೆಗಳು ಬರಿದಾಗಿದ್ದು, ಕೊಳವೆ ಬಾವಿಗಳಲ್ಲಿ ಒರತೆ ತಗ್ಗಿದೆ. ಸಾಕಷ್ಟು ಕಡೆಗಳಲ್ಲಿ ಅಂತರ್ಜಲದ ಮಟ್ಟ ತೀವ್ರವಾಗಿ ಕುಸಿತ ಕಂಡಿದೆ. ಹೇಮಾವತಿ ನಾಲೆಯಿಂದ ನೀರು ಹರಿಸುವ ಪ್ರದೇಶಗಳನ್ನು ಹೊರತುಪಡಿಸಿದರೆ ಇತರೆಡೆಗಳಲ್ಲಿ ನೀರಿನ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ.

**ನೀರಿಗೆ ಸಮಸ್ಯೆ ಖಾಸಗಿ ಬೋರ್‌ವೆಲ್ ಮೊರೆ**

**ಮಳೆಗಾಲದಲ್ಲೇ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಎದುರಾಗಿದ್ದು ಕೊಳವೆ ಬಾವಿಗಳು ಬರಿದಾಗುತ್ತಿವೆ. ಜಿ.ಪಂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದಿಂದ ಕೊರೆಸಿದ್ದ ಕೊಳವೆ ಬಾವಿಗಳು ಬತ್ತಿದ್ದು ಜಿಲ್ಲೆಯ 16 ಗ್ರಾಮಗಳಲ್ಲಿ ಖಾಸಗಿ ಕೊಳವೆ ಬಾವಿಗಳ ಮೂಲಕ ನೀರು ಸರಬರಾಜು ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮತ್ತಿಘಟ್ಟ ಕಂಪನಹಳ್ಳಿ ಕರಡಿಸಾಬರಪಾಳ್ಯ ಕುಣಿಗಲ್ ತಾಲ್ಲೂಕಿನ ಮುದುಗಿರಿಪಾಳ್ಯ ಕಿಚ್ಚವಾಡಿ ಕೀಲಾರಕೊಪ್ಪಲು ಬೀರಗಾನಹಳ್ಳಿ ಈರಮೇಸ್ತ್ರಿಪಾಳ್ಯ ಮಧುಗಿರಿ ತಾಲ್ಲೂಕಿನ ಬಸ್ಮಂಗಿಕಾವಲ್ ವೀರಕ್ಯಾತನಪಾಳ್ಯ ಶಿರಾ ತಾಲ್ಲೂಕು ಕಳುವರಹಳ್ಳಿ ಬಂಗಾರಿಹಟ್ಟಿ ತಿಪಟೂರು ತಾಲ್ಲೂಕು ಶೆಟ್ಟಿಹಳ್ಳಿ ಸಿಡೇಹಳ್ಳಿ ನ್ಯಾಕೇನಹಳ್ಳಿ ತುಮಕೂರು ತಾಲ್ಲೂಕು ಭೋವಿಪಾಳ್ಯ ಹಿರೆಗುಂಡಗಲ್ಲು ದೊಡ್ಡಗೊಲ್ಲಹಳ್ಳಿ ಗ್ರಾಮಗಳಿಗೆ ಖಾಸಗಿ ಕೊಳವೆ ಬಾವಿಯಿಂದ ನೀರು ಕೊಡಲಾಗುತ್ತಿದೆ. ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ 152 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದು ಎಂದು ಅಂದಾಜಿಸಲಾಗಿದೆ. ಕುಣಿಗಲ್ ತಾಲ್ಲೂಕಿನಲ್ಲಿ ಅತಿ ಹೆಚ್ಚು 38 ತಿಪಟೂರು 31 ಪಾವಗಡ 22 ಮಧುಗಿರಿ ತಾಲ್ಲೂಕಿನ 21 ಹಳ್ಳಿಗಳನ್ನು ಗುರುತಿಸಲಾಗಿದೆ.**

**ಜಿಲ್ಲೆ ಸ್ಥಿತಿ**

**ಜಿಲ್ಲೆಯಲ್ಲಿ ಜೂನ್‌ನಲ್ಲಿ ಸರಾಸರಿ ವಾಡಿಕೆ 59 ಮಿ.ಮೀ ಮಳೆಯಾಗಬೇಕಿದ್ದು, ಕೇವಲ 35 ಮಿ.ಮೀ ಬಿದ್ದಿದೆ. ಜೂನ್‌ನಿಂದ ಜುಲೈ 15ರ ವರೆಗೆ ವಾಡಿಕೆ 88 ಮಿ.ಮೀ ಬೀಳಬೇಕಿದ್ದು, 55 ಮಿ.ಮೀ ಸುರಿದಿದೆ. ಜುಲೈ 1ರಿಂದ 15ರ ವರೆಗೆ 29 ಮಿ.ಮೀ ಮಳೆ ಆಗಬೇಕಿದ್ದು, ಕೇವಲ 19 ಮಿ.ಮೀ ಸುರಿದಿದೆ. ಅದೂ ನಿರಂತರವಾಗಿ ಅಥವಾ ಜೋರು ಮಳೆಯಾಗಿಲ್ಲ. ಅಲ್ಲಲ್ಲಿ ಭೂಮಿಯ ಮೇಲು ಭಾಗ ತೇವ ಮಾಡುವಷ್ಟು ಬೀಳುತ್ತದೆ. ಸ್ವಲ್ಪ ಬಿಸಿಲು ಬಂದರೆ, ಜೋರಾಗಿ ಗಾಳಿ ಬೀಸಿದರೆ ಒಣಗಿ ಹೋಗುತ್ತದೆ. ಯಾವ ಬೆಳೆಗೂ ಉಪಯೋಗ ಇಲ್ಲವಾಗಿದೆ.**

ಅಂತರಾಳದಿಂದ..
EDITORIAL

# ವಾಕ್, ಅಭಿವ್ಯಕ್ತಿ ಸ್ವಾತಂತ್ರ್ಯ; ಮುಕ್ತ ಮನಸ್ಸಿನ ಚರ್ಚೆ ಅಗತ್ಯ

ಅಭಿವ್ಯಕ್ತಿ ಸ್ವಾತಂತ್ರ್ಯದ ಎಲ್ಲೆಯನ್ನು ಗೆರೆ ಎಳೆದಂತೆ ಗುರ್ತಿಸುವುದು ಸಾಧ್ಯವಿಲ್ಲ. ಹಾಗಾಗಿ, ಅಭಿವ್ಯಕ್ತಿ ಸ್ವಾತಂತ್ರ್ಯದ ಸಲಹೆ, ವ್ಯಾಖ್ಯಾನಗಳನ್ನು ವ್ಯಾಪಕ ಚರ್ಚೆಗೆ ಒಳಪಡಿಸಬೇಕಾಗಿದೆ.

ಸಾಮಾಜಿಕ ಮಾಧ್ಯಮಗಳಲ್ಲಿ ಕಂಡುಬರುತ್ತಿರುವ ವಿಭಜಕ ಪ್ರವೃತ್ತಿಯನ್ನು ಹತ್ತಿಕ್ಕುವ ಅಗತ್ಯವನ್ನು **ಸುಪ್ರೀಂ ಕೋರ್ಟ್ ಪ್ರತಿಪಾದಿಸಿದೆ:** ಸಾಮಾಜಿಕ ಮಾಧ್ಯಮದಲ್ಲಿ ಆಕ್ಷೇಪಾರ್ಹ ಹಾಗೂ ಪ್ರಚೋದನಕಾರಿ ಪೋಸ್ಟ್‌ಗಳನ್ನು ನಿಯಂತ್ರಿಸಲು ಮಾರ್ಗಸೂಚಿ ರೂಪಿಸುವುದನ್ನು ಪರಿಗಣಿಸುವುದಾಗಿಯೂ ಹೇಳಿದೆ. ಸಮುದಾಯಗಳ ನಡುವೆ ದ್ವೇಷ ಹಾಗೂ ವಿಭಜಕ ಭಾವನೆಯನ್ನು ಉತ್ತೇಜಿಸುವುದಕ್ಕೆ ಸಾಮಾಜಿಕ ಜಾಲತಾಣಗಳು ವ್ಯಾಪಕವಾಗಿ ಬಳಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಅಭಿಪ್ರಾಯಕ್ಕೆ ವಿಶೇಷ ಮಹತ್ವವಿದೆ. ಹಿಂದೂ ದೇವತೆಗೆ ಸಂಬಂಧಿಸಿದಂತೆ 'ಎಕ್ಸ್'ನಲ್ಲಿ ಆಕ್ಷೇಪಾರ್ಹ ಪೋಸ್ಟ್ ಹಂಚಿಕೊಂಡಿದ್ದಕ್ಕಾಗಿ ಹಲವು ರಾಜ್ಯಗಳಲ್ಲಿ ಪ್ರಕರಣ ಎದುರಿಸುತ್ತಿರುವ ವಜಾಹತ್ ಖಾನ್ ಸಲ್ಲಿಸಿರುವ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ವಿಭಾಗೀಯ ನ್ಯಾಯಪೀಠ, ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಸೂಕ್ಷ್ಮ ಸಂಗತಿಗಳನ್ನು ಪ್ರಸ್ತಾಪಿಸಿದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಆರ್‌ಎಸ್‌ಎಸ್ ಬಗ್ಗೆ ರಚಿಸಿದ್ದ ವ್ಯಂಗ್ಯಚಿತ್ರ ಹಂಚಿಕೊಂಡಿದ್ದಕ್ಕಾಗಿ ಕಾನೂನು ಕ್ರಮ ಎದುರಿಸುತ್ತಿರುವ ಇಂದೋರ್‌ನ ವ್ಯಂಗ್ಯಚಿತ್ರಕಾರ ಹೇಮಂತ್ ಮಾಳವೀಯ ಅವರ ಜಾಮೀನು ಅರ್ಜಿ ವಿಚಾರಣೆಯ ಪ್ರಕರಣದಲ್ಲಿ, ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ದುರುಪಯೋಗ ಆಗಿದೆ ಎಂದೂ ಸುಪ್ರೀಂ ಕೋರ್ಟ್ ಗುರ್ತಿಸಿದೆ. ಈ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿರುವ ಅಭಿಪ್ರಾಯಗಳು ವಾಕ್ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಜೊತೆಗೆ ನಿರ್ವಹಿಸಬೇಕಾದ ಹೊಣೆಗಾರಿಕೆಯನ್ನು ನಾಗರಿಕರಿಗೆ ನೆನಪು ಮಾಡುವಂತಿವೆ. ಸಂವಿಧಾನದ 19 (2)ನೇ ವಿಧಿಯ ಅಡಿಯಲ್ಲಿ ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಇರುವ ನಿರ್ಬಂಧಗಳನ್ನು ನೆನಪಿಸಿರುವ ಸುಪ್ರೀಂ ಕೋರ್ಟ್. ಆ ನಿರ್ಬಂಧಗಳು ಸರಿಯಾಗಿಯೇ ಇವೆ ಎಂದು ಹೇಳಿದೆ. ಸಾಮಾಜಿಕ ಜಾಲತಾಣಗಳ ಪೋಸ್ಟ್‌ಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿ ರಚಿಸುವ ಚಿಂತನೆಯ ಜೊತೆಗೇ, ಸೆನ್ಸಾರ್‌ಶಿಪ್ ಬಗ್ಗೆ ತಾನು ಮಾತನಾಡುತ್ತಿಲ್ಲ ಎಂದು ಸ್ಪಷ್ಟಪಡಿಸಿರುವ ನ್ಯಾಯಪೀಠ, ವ್ಯಕ್ತಿತ್ವದ ಘನತೆ, ಭ್ರಾತೃತ್ವ ಭಾವನೆ ಹಾಗೂ ಜಾತ್ಯತೀತ ಮನೋಭಾವದ ಅಗತ್ಯವನ್ನು ಒತ್ತಿಹೇಳಿದೆ. ಸುಪ್ರೀಂ ಕೋರ್ಟ್‌ನ ಸಲಹೆ ರೂಪದ ಅಭಿಪ್ರಾಯ, ಎಲ್ಲರ ಒಳಿತನ್ನು ಬಯಸುವ ಭಾರತೀಯ ಸಮಾಜದ ವಿವೇಕದ ಮೇಲೆ ಕವಿದಿರುವ ದೂಳನ್ನು ಸ್ವಚ್ಛಪಡಿಸಲು ನೀಡಿರುವ ಎಚ್ಚರಿಕೆಯ ಸೂಚನೆಯಂತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೌಲ್ಯದ ರೂಪದಲ್ಲಿ ನೋಡಬೇಕೆನ್ನುವ ಸುಪ್ರೀಂ ಕೋರ್ಟ್ ಅಭಿಪ್ರಾಯ ಸರಿಯಾದುದಾದರೂ, ಸಮಕಾಲೀನ ರಾಜಕಾರಣದಲ್ಲಿ ಅನುಕೂಲಕ್ಕೆ ತಕ್ಕಂತೆ ಮೌಲ್ಯಗಳೂ ಬದಲಾಗುತ್ತಿರುವುದನ್ನು ಮರೆಯಬಾರದು. ಅಭಿವ್ಯಕ್ತಿ ಸ್ವಾತಂತ್ರ್ಯದ ಎಲ್ಲೆಯನ್ನು ಗೆರೆ ಎಳೆದಂತೆ ಗುರ್ತಿಸುವುದು ಸಾಧ್ಯವಿಲ್ಲ. ಈ ಬಿಕ್ಕಟ್ಟು, ಸೃಜನಶೀಲ ಕಲೆಗಳ ಅಭಿವ್ಯಕ್ತಿಯ ಸಂದರ್ಭದಲ್ಲಿ ಮತ್ತೂ ಸೂಕ್ಷ್ಮವಾಗುತ್ತದೆ ಹಾಗೂ ಸೃಜನಶೀಲ ಸಾಧ್ಯತೆಗಳನ್ನು ಮೊಟಕುಗೊಳಿಸುವ ಸಾಧ್ಯತೆಗೆ ಅಸ್ಪದ ಕಲ್ಪಿಸಲೂಬಹುದು. ಸೃಜನಶೀಲ ಅಭಿವ್ಯಕ್ತಿಯನ್ನು ಕೂದಲು ಸೀಳಿದಂತೆ ನೋಡಲು ಒತ್ತಾಯಿಸುವುದು, ಟೀಕೆ ಟಿಪ್ಪಣಿಗಳನ್ನು ಸಹಿಸದ ರಾಜಕಾರಣಿಗಳು ಹಾಗೂ ರಾಜಕೀಯ ಪಕ್ಷಗಳಿಗೆ ಕಲೆಯ ಬಗ್ಗೆ ಅಸಹನೆ ಹೊಂದಲು ಕಾರಣವಾಗಬಹುದು. ಹಾಗೆ ನೋಡಿದರೆ, ಬಹಳಷ್ಟು ಸಂದರ್ಭಗಳಲ್ಲಿ ಜನ ಪ್ರತಿನಿಧಿಗಳೇ ನಾಲಿಗೆ ಸಡಿಲಬಿಟ್ಟು ಮಾತನಾಡುವುದಿದೆ ಹಾಗೂ ಆ ಮಾತುಗಳನ್ನು ಹಣ, ಅಧಿಕಾರ ಹಾಗೂ ಜಾತಿ ಬಲದ ಜೊತೆಗೆ, ಸಂವಿಧಾನದತ್ತವಾದ ವಿಶೇಷ ರಕ್ಷಣಾ ಕವಚವನ್ನೂ ಬಳಸಿ ಅರಗಿಸಿಕೊಳ್ಳುತ್ತಾರೆ. ಈ ಯಾವ ರಕ್ಷಣಾ ಕವಚಗಳೂ ಇಲ್ಲದ ಜನಸಾಮಾನ್ಯರು, ಕಲಾವಿದರು ಹಾಗೂ ಪತ್ರಕರ್ತರು ಅಭಿವ್ಯಕ್ತಿ ಸ್ವಾತಂತ್ರ್ಯದ ಮೌಲ್ಯವನ್ನು ರಕ್ಷಿಸುವ ಹೊಣೆಗಾರಿಕೆ ನಿರ್ವಹಿಸಬೇಕಾಗುತ್ತದೆ. ಸಮಾಜದಲ್ಲಿ ಕಾಣಿಸುತ್ತಿರುವ ಒಡಕು ಹಾಗೂ ದ್ವೇಷ ಮನೋಭಾವದ ಪ್ರವೃತ್ತಿಗೆ ಸಾಮಾಜಿಕ ಮಾಧ್ಯಮ ಕನ್ನಡಿಯಂತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನ ಹಾಗೂ ಪ್ರಚೋದನಕಾರಿ ಪೋಸ್ಟ್‌ಗಳನ್ನು ಹಾಕುವ ಪಡೆಯೊಂದು ಸಕ್ರಿಯವಾಗಿದ್ದು, ಆ ಪಡೆಯನ್ನು ರಾಜಕಾರಣಿಗಳೇ ಪೋಷಿಸುತ್ತಿದ್ದಾರೆ. ಈ ವಿರೋಧಾಭಾಸದ ಕಾರಣದಿಂದಲೇ, ಅಭಿವ್ಯಕ್ತಿ ಸ್ವಾತಂತ್ರ್ಯದ ಸಲಹೆ, ವ್ಯಾಖ್ಯಾನಗಳನ್ನು ಸಹಾನುಭೂತಿಯಿಂದ ನೋಡಬೇಕಾಗಿದೆ ಹಾಗೂ ವ್ಯಾಪಕ ಚರ್ಚೆಗೆ ಒಳಪಡಿಸಬೇಕಾಗಿದೆ.

**ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೌಲ್ಯಗಳನ್ನು ನಾಗರಿಕರು ಅರಿತುಕೊಳ್ಳಬೇಕು ಹಾಗೂ ಸ್ವಯಂ ನಿಯಂತ್ರಣ ಪಾಲಿಸಬೇಕು ಎಂದು ನ್ಯಾಯಪೀಠ ಹೇಳಿರುವುದು ಸರಿಯಾಗಿದೆ. ಅಭಿಪ್ರಾಯ ವ್ಯಕ್ತಪಡಿಸಲು ಎಲ್ಲರಿಗೂ ಸ್ವಾತಂತ್ರ್ಯವಿದ್ದರೂ, ನಮ್ಮ ಮಾತು ಉಂಟು ಮಾಡಬಹುದಾದ ಸಾಮಾಜಿಕ ಪರಿಣಾಮದ ಬಗ್ಗೆ ಯೋಚಿಸಲು ನ್ಯಾಯಪೀಠದ ಅಭಿಪ್ರಾಯಗಳು ನಮ್ಮನ್ನು ಒತ್ತಾಯಿಸುವಂತಿವೆ.**



# ಕಾಲಿನ ಕೆಳಗೆ ತಲೆದಿಂಬನ್ನು ಇಟ್ಕೊಂಡು ಮಲಗಿದ್ದರೆ..!

ನಮ್ಮಲ್ಲಿ ಹೆಚ್ಚಿನವರಿಗೆ ಮಲಗುವ ಸಂದರ್ಭದಲ್ಲಿ ತಲೆಅಡಿಯಲ್ಲಿ ದಿಂಬು ಇಟ್ಟು ಮಲಗುವ ಅಭ್ಯಾಸ ಇರುತ್ತದೆ. ಆದರೆ ಹೀಗೆ ಮಾಡುವುದರ ಬದಲು ಪಾದಗಳ ಕೆಳಗೆ ದಿಂಬುನ್ನು ಇಟ್ಟುಕೊಂಡು ಮಲಗುವಂತಹ ಸಣ್ಣ ಅಭ್ಯಾಸವನ್ನು ಮೈಗೂಡಿಸಿಕೊಂಡರೆ, ಆರೋಗ್ಯಕ್ಕೆ ಸಾಕಷ್ಟು ಲಾಭಗಳು ಸಿಗುತ್ತಾ ಹೋಗುತ್ತವೆ ನಮ್ಮಲ್ಲಿ ಎಷ್ಟೋ ಜನರಿಗೆ ತಲೆದಿಂಬು ಇಲ್ಲದೆ ನಿದ್ದೆಯೇ ಬರುವುದಿಲ್ಲ! ಆದರೆ ಈ ಬಗ್ಗೆ ತಜ್ಞರು ಹೇಳುವ ಪ್ರಕಾರ ತಲೆದಿಂಬು ಇಲ್ಲದೆ ಮಲಗುವ ಅಭ್ಯಾಸ ಮಾಡಿಕೊಂಡರೆ ಹೆಚ್ಚು ಆರೋಗ್ಯಕರ ಕುತ್ತಿಗೆ ನೋವು ಹಾಗೂ ಬೆನ್ನುಮೂಳೆ ಸಂಬಂಧಿತ ಕಾಯಿಲೆಗಳು ಬರುವುದರಿಂದ ದೂರವಿರಬಹುದು, ಎಂದು ಸಲಹೆ ನೀಡುತ್ತಾರೆ, ಆದರೆ ಇದ್ದಕ್ಕಿದಂತೆ ದಿಂಬಿಲ್ಲದೆ ತಕ್ಷಣ ನಿದ್ರೆಗೆ ಜಾರುವುದು ಕೆಲವರಿಗೆ ಸ್ವಲ್ಪ ಕಷ್ಟವಾಗ ಬಹುದು.

ಅದರಲ್ಲೂ ತಲೆದಿಂಬು ಇಟ್ಟು ಮಲಗುವ ಅಭ್ಯಾಸ ಇರುವವರು, ಹಠಾತ್ ಬದಲಾವಣೆ ಈ ರೀತಿಯ ಮಾಡಿ ಕೊಂಡರೂ ಕೂಡ ಇದು ನಿದ್ರೆಯ ಮಾದರಿಗೆ ಅಡ್ಡಿಯಾಗಬಹುದು. ಇನ್ನ ಮುಂದೆ ಮಲಗುವ ಮುನ್ನ ಪಾದಗಳ ಕೆಳಗೆ ದಿಂಬುನ್ನು ಇಟ್ಟುಕೊಂಡು ಮಲಗುವಂತಹ ಅಭ್ಯಾಸವನ್ನು ರೂಢಿ ಮಾಡುತ್ತಾ ಹೋಗಿ, ಇದರಿಂದ ಬೆನ್ನುಮೂಳೆಗೆ ಸಂಬಂಧಪಟ್ಟ ಸಮಸ್ಯೆಗಳು ದೂರವಾಗುವುದರ ಜೊತೆಗೆ, ಮುಖದ ಸುಕ್ಕು, ಕುತ್ತಿಗೆ ನೋವು, ಸರಿಯಾಗಿ ನಿದ್ದೆ ಬರದಿರುವ ಸಮಸ್ಯೆಗಳೆಲ್ಲಾ ನಿಧಾನಕ್ಕೆ ದೂರವಾಗುತ್ತಾ ಹೋಗುತ್ತದೆ!


**ಮೊಣಕಾಲುಗಳ ಕೆಳಗೆ ದಿಂಬುನ್ನು ಇಟ್ಟು ಮಲಗುವುದರ ಪ್ರಯೋಜನಗಳು**

ನಾವು ನಮ್ಮ ಬೆನ್ನಿನ ಮೇಲೆ ನೇರವಾಗಿ ಮಲಗಿದಾಗ ಮತ್ತು ನಮ್ಮ ಮೊಣಕಾಲುಗಳ ಕೆಳಗೆ ದಿಂಬುನ್ನು ಇಟ್ಟುಕೊಂಡಾಗ, ಬೆನ್ನು ಮೂಳೆಯು ಅದರ ನೈಸರ್ಗಿಕ ಆಕಾರದಲ್ಲಿ ಬೆಂಬಲವನ್ನು ಪಡೆಯುತ್ತದೆ. ಸಾಮಾನ್ಯ ವಾಗಿ, ಬೆಂಬಲವಿಲ್ಲದೆ ಮಲಗುವುದರಿಂದ ಕೆಳ ಬೆನ್ನಿನಲ್ಲಿ ಒತ್ತಡ ಉಂಟಾಗುತ್ತದೆ, ಇದು ನೋವು ಅಥವಾ ಬಿಗಿತವನ್ನು ಉಂಟು ಮಾಡಬಹುದು. ಆದರೆ ದಿಂಬಿನಿಂದ ಒದಗಿಸಲಾದ ಸ್ವಲ್ಪ ಎತ್ತರವು ಬೆನ್ನು ಮೂಳೆಯನ್ನು ಸಮತೋಲನ ದಲ್ಲಿರಿಸುತ್ತದೆ ಮತ್ತು ಸೊಂಟದ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ. ಇದು ಬೆನ್ನುಮೂಳೆಯ ಆರೋಗ್ಯವನ್ನು ಸುಧಾರಿಸುವುದಲ್ಲದೆ ಬೆನ್ನುನೋವಿನ ಸಾಧ್ಯತೆಗಳನ್ನು ಕಡಿಮೆ ಮಾಡುತ್ತದೆ. ಬನ್ನಿ ಹಾಗಾದ್ರೆ ರಾತ್ರಿ ಮಲಗುವ ಮುನ್ನ ತಲೆದಿಂಬನ್ನು ಪಾದಗಳ ಕೆಳಗೆ ಇಟ್ಟು ಮಲಗುವುದರ ಪ್ರಯೋಜನಗಳು ಏನು ಎನ್ನುವುದರ ಬಗ್ಗೆ ನೋಡೋಣ


**ಪಾದಗಳ ಊತದ ಸಮಸ್ಯೆಯನ್ನು ದೂರಮಾಡುತ್ತದೆ:** ಒಂದು ವೇಳೆ ಪಾದಗಳಲ್ಲಿ ಊತವಿದ್ದರೆ, ಈ ವಿಧಾನವು ತುಂಬಾ ಪರಿಣಾಮ ಕಾರಿಯಾಗಿ ಕಾರ್ಯನಿರ್ವಹಿಸುತ್ತದೆ. ಉದಾಹರಣೆಗೆ, ಯಾರೊಬ್ಬರ ಪಾದಗಳು ಆಯಾಸದಿಂದ ಊದಿಕೊಂಡಿದ್ದರೆ. ಅಂತಹ ಪರಿಸ್ಥಿತಿಯಲ್ಲಿ, ನೀವು ಪಾದಗಳ ಕೆಳಗೆ ದಿಂಬುನ್ನು ಇಟ್ಟು ನಿದ್ರಿಸಬಹುದು. ಹೀಗೆ ಮಾಡುವುದರಿಂದ, ಪಾದಗಳ ಊತದ ಸಮಸ್ಯೆಗೆ ನಿಯಂತ್ರಣಕ್ಕೆ ಬರುವುದು.

**ನಿದ್ದೆ ಸಮಸ್ಯೆ ಇರುವವರು :** ಒಂದು ವೇಳೆ ರಾತ್ರಿ ಸರಿಯಾಗಿ ನಿದ್ರೆ ಮಾಡಲು ಸಾಧ್ಯವಾಗದ ಕಾರಣ, ಸ್ನಾಯುಗಳ ಶಕ್ತಿ, ಅಂಗಾಂಶಗಳು ಮತ್ತು ಅನೇಕ ಅಂಗಗಳು ಸರಿಯಾಗಿ ಕಾರ್ ಯನಿರ್ವಹಿಸಲು ಸಾಧ್ಯವಾಗುವುದಿಲ್ಲ. ಇದರಿಂದಾಗಿ, ಮನಸ್ಥಿತಿ ಕೆಟ್ಟದಾಗುತ್ತದೆ, ಆಲೋಚನಾ ಸಾಮರ್ಥ್ಯವು ದುರ್ಬಲಗೊಳ್ಳಲು ಪ್ರಾರಂಭಿಸುತ್ತದೆ ಮತ್ತು ಹಸಿವಿನ ಕೊರತೆಯ ಸಮಸ್ಯೆಯೂ ಇರುತ್ತದೆ. ನಿರಂತರ ನಿದ್ರೆಯ ಕೊರತೆಯು ಬೊಜ್ಜು, ಮಧುಮೇಹ, ಅಧಿಕ ರಕ್ತದೊತ್ತಡ ಮತ್ತು ಹೃದ್ರೋಗದ ಅಪಾಯವನ್ನು ಹೆಚ್ಚಿಸುತ್ತದೆ. ಹೀಗಾಗಿ ನಿದ್ರೆ ಸಮಸ್ಯೆ ಇರುವವರು ಪಾದಗಳ ಕೆಳಗೆ ದಿಂಬುನ್ನು ಇಟ್ಟು ನಿದ್ರಿಸುವ ಅಭ್ಯಾಸ ಮಾಡಿಕೊಂಡರೆ ಒಳ್ಳೆಯದು.

**ಡಿಸ್ಕ್ ನೋವಿನಲ್ಲಿ ಸಮಸ್ಯೆ ಇರುವವರು:** ಬೆನ್ನುಮೂಳೆಯ ಅತಿಯಾದ ತಿರುಚುವಿಕೆಯು ನಿಮ್ಮ ಬೆನ್ನುಮೂಳೆಯ ಮೇಲಿನ ಒತ್ತಡದಿಂದಾಗಿ ನೋವನ್ನು ಉಂಟುಮಾಡಬಹುದು. ಅಂತಹ ಪರಿಸ್ಥಿತಿಯಲ್ಲಿ, ನೀವು ರಾತ್ರಿಯಲ್ಲಿ ನಿಮ್ಮ ಪಾದಗಳ ಕೆಳಗೆ ದಿಂಬನ್ನು ಇಟ್ಟುಕೊಂಡು ಮಲಗಿದರೆ, ನೀವು ಡಿಸ್ಕ್ ನೋವಿನಿಂದ ಪರಿಹಾರ ಪಡೆಯ ಬಹುದು.



**ನಿಮ್ಮ ದೇಹದ ರಕ್ತ ಪರಿಚಲನೆ ಸರಿಯಾಗಿಲ್ಲದಿದ್ದರೆ, ರಾತ್ರಿಯಲ್ಲಿ ನಿಮ್ಮ ಪಾದದ ಕೆಳಗೆ ದಿಂಬುನ್ನು ಇಟ್ಟುಕೊಂಡು ಮಲಗಬಹುದು, ಹೀಗೆ ಮಾಡುವುದರಿಂದ ರಕ್ತ ಪರಿಚಲನೆ ಸರಿಯಾಗಿರುತ್ತದೆ.**



**ಪ್ರಮುಖವಾಗಿ ಪಾದಗಳಲ್ಲಿ ರಕ್ತಪರಿಚಲನೆ ಸರಿಯಾಗಿ ನಡೆಯುವುದರ ಜೊತೆಗೆ ನೋವು ಮತ್ತು ಉರಿಯೂತದ ಸಮಸ್ಯೆ ಕಡಿಮೆ ಆಗುತ್ತದೆ. ಹೀಗಾಗಿ ಈ ಸಮಸ್ಯೆ ಇರುವವರು ದಿನವೂ ಕಾಲಿನ ಕೆಳಗೆ ದಿಂಬುನ್ನು ಇಟ್ಟುಕೊಂಡು ಮಲಗುವ ಅಭ್ಯಾಸ ಮಾಡಿಕೊಂಡರೆ ಬಹಳ ಒಳ್ಳೆಯದು ಎನ್ನುತ್ತಾರೆ ತಜ್ಞರು.**

# ಸಾಹಿತಿ ವಿಶ್ವಾಸ್ ಡಿ.ಗೌಡರ 5ನೇ ಕೃತಿ ಚಿಂತನ ಚೈತ್ರ ಲೋಕಾರ್ಪಣೆ

ವಿಶ್ವಾಸ್.ಡಿ.ಗೌಡ

• ಉದಯವಾಹಿನಿ, ವಿಶೇಷ



**ಸಕಲೇಶಪುರ :** ಕದಂಬ ಸೈನ್ಯ ಕನ್ನಡ ಸಂಘಟನೆಯ ವತಿಯಿಂದ ಕದಂಬ, ಚಾಲುಕ್ಯ ಹಾಗೂ ರಾಷ್ಟ್ರಕೂಟ ಚಕ್ರವರ್ತಿಗಳ ಸ್ಮರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಜುಲೈ 17ರಂದು ಬೆಳಿಗ್ಗೆ 11 ಗಂಟೆಗೆ ಮಂಡ್ಯ ನಗರದ ಗಾಂಧಿ ಭವನದಲ್ಲಿ ನಡೆಯಲಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಬೇಕ್ರಿ ರಮೇಶ್ ತಿಳಿಸಿದ್ದಾರೆ.




ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತಿಹಾಸ ಪ್ರಸಿದ್ಧ ಚಕ್ರವರ್ತಿಗಳ ಹೆಸರನ್ನು ರಸ್ತೆಗಳಿಗೆ ನಾಮಕರಣ ಮಾಡುವಲ್ಲಿ ಸರ್ಕಾರಗಳು ನಿರಾಸಕ್ತಿ ತೋರುತ್ತಿದ್ದು, ರಾಜಕಾರಣಿಗಳ ಹೆಸರಿನಲ್ಲಿ ಪ್ರತಿಮೆ ಹಾಗೂ ಮಾರ್ಗ ನಾಮಕರಣದಲ್ಲಿ ತೊಡಗಿವೆ ಎಂದು ಆಕ್ಷೇಪಿಸಿದರು. ಕಾರ್ಯಕ್ರಮವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಉದ್ಘಾಟಿಸಲಿದ್ದು, ಬೇಕ್ರಿ ರಮೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಮೈಸೂರು ವಿವಿಯ ಮಾಜಿ ಸೆನಟ್ ಸದಸ್ಯ ಈ.ಸಿ.ನಿಂಗರಾಜ್‌ಗೌಡ, ಸದ್ವಿದ್ಯಾ ಸಂಸ್ಥೆಗಳ ಅಧ್ಯಕ್ಷ ಹರೀಶ್ ಕುಮಾರ್ ಎಂ.ಕೆ., ಮೈಷುಗರ್ ಅಧ್ಯಕ್ಷ ಸಿ.ಡಿ. ಗಂಗಾಧರ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಈ ಪಟಭವ್ಯ ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿ, ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಖ್ಯಾತ ಲೇಖಕ ವಿಶ್ವಾಸ್. ಡಿ. ಗೌಡ ಅವರ ಐದನೇ ಕೃತಿ ಚಿಂತನ ಚೈತ್ರ ಲೋಕಾರ್ಪಣೆಗೊಳ್ಳಲಿದೆ.

**ಕದಂಬ, ಚಾಲುಕ್ಯ ರಾಷ್ಟ್ರಕೂಟರ ಸ್ಮರಣೆಯ ಜೊತೆಗೆ ಪ್ರಶಸ್ತಿ ಪ್ರದಾನ ಸಮಾರಂಭ**

ಕತ್ತರಿ ಘಟ್ಟ ಮತ್ತು ಹರಿಸೇವಾ, ನೆನಪುಗಳ ಖಾತೆ, ಬಾಳೊಂದು ಚೈತ್ರಾಮಯ, ಚೈತ್ರದ ಚೈತನ್ಯ ಮುಂತಾದ ಕೃತಿಗಳ ಮೂಲಕ ಸಾಹಿತ್ಯ ಲೋಕದಲ್ಲಿ ಪಾದಾರ್ಪಣೆ ಮಾಡಿದ ಶ್ರೀ ವಿಶ್ವಾಸ್. ಡಿ.ಗೌಡ, ಈ ಬಾರಿ ತಮ್ಮ ಅಂಕಣ ಬರಹಗಳ ಸಂಕಲನದ ರೂಪದಲ್ಲಿ ಚಿಂತನ ಚೈತ್ರ ಎಂಬ ವಿಶಿಷ್ಟ ಕೃತಿಯನ್ನು ತಂದಿದ್ದಾರೆ. ಪತ್ರಿಕೆಗಳಲ್ಲಿ ಪ್ರಕಟವಾದ ಇವರ ಅಂಕಣ ಬರಹಗಳು ವಾಚಕರಿಂದ ಪ್ರಶಂಸಿತವಾಗಿದ್ದು, ಅದೇ ಬರಹಗಳು ಈ ಸಂಕಲನದಲ್ಲಿ ಅರ್ಥಪೂರ್ಣವಾದ ರೂಪ ಪಡೆದಿವೆ. ಈ ವಿಮರ್ಶಾತ್ಮಕ ಬರಹಗಳು ಹಾಗೂ ಹೊಸದಾಗಿ ಬರೆಯಲಾಗಿರುವ ಕೃತಿಗಳು ಮುದ್ರಣ ಹಂತದಲ್ಲಿವೆ ಎಂಬುದು ಗಮನಾರ್ಹವಾಗಿದೆ. ಸಾಹಿತ್ಯ, ಇತಿಹಾಸ ಹಾಗೂ ಸಂಸ್ಕೃತಿಯ ಸಂಯೋಜನೆಯೊಂದಿಗೆ ನಡೆಯುವ ಈ ಕಾರ್ಯಕ್ರಮ, ಕನ್ನಡ ನಾಡು-ನುಡಿಯ ಗೌರವವನ್ನು ಹೆಚ್ಚಿಸಲಿದೆ.

# ಹೈಕೋರ್ಟ್‌ನಲ್ಲಿ ಸರ್ಕಾರದ ಆದೇಶ ಪ್ರಶ್ನಿಸಿದ್ದ ಅರ್ಜಿ ವಜಾ

• ಉದಯವಾಹಿನಿ, ಬೆಂಗಳೂರು

ಆಡಳಿತಾತ್ಮಕ ಅಕ್ರಮಗಳ ಆರೋಪದ ಹಿನ್ನೆಲೆಯಲ್ಲಿ ಬೆಂಗಳೂರಿನ ಪ್ರಸಿದ್ಧ ಗಾಳಿ ಆಂಜನೇಯ ದೇವಸ್ಥಾನವನ್ನು ಮುಜರಾಯಿ ಇಲಾಖೆ ಸುಪರ್ದಿಗೆ ವಹಿಸಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶಕ್ಕೆ ತಡೆ ನೀಡಲು ಹೈಕೋರ್ಟ್ ಬುಧವಾರ ನಿರಾಕರಿಸಿದೆ. ದೇವಾಲಯದ ಟ್ರಸ್ಟಿಗಳು ರಾಜ್ಯ ಸರ್ಕಾರದ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸುನಿಲ್ ದತ್ ಯಾದವ್ ವಿಚಾರಣೆ ನಡೆಸಿದರು. ದೇವಾಲಯದ ಟ್ರಸ್ಟ್ ಪರ ವಕೀಲ ಪಿ.ಪ್ರಸನ್ನ ಕುಮಾರ್ ಅವರು, ಸರ್ಕಾರವು ದೇವಾಲಯದ ಕಾರ್ಯವೈಖರಿಯ ಬಗ್ಗೆ ಸಮಗ್ರ ತನಿಖೆ ನಡೆಸದೆ ತರಾತುರಿಯಲ್ಲಿ ಕ್ರಮ ಕೈಗೊಂಡಿದೆ. ಟ್ರಸ್ಟ್ ಅಗತ್ಯವಿರುವ ಎಲ್ಲಾ ದಾಖಲೆಗಳನ್ನು ಸಲ್ಲಿಸಿದೆ. ದೇವಾಲಯವನ್ನು ಸ್ವಾಧೀನಪಡಿಸಿಕೊಳ್ಳುವ ನಿರ್ಧಾರವು ಅಪೂರ್ಣ ಮಾಹಿತಿಯನ್ನು ಆಧರಿಸಿದೆ ಎಂದು ವಾದಿಸಿದರು. ಸರ್ಕಾರದ ಪರ ವಕೀಲರು ಈ ಆರೋಪಗಳನ್ನು ನಿರಾಕರಿಸಿದ್ದು, ಟ್ರಸ್ಟ್ ತನ್ನ ಹಣಕಾಸು ಮತ್ತು ಒಟ್ಟಾರೆ ಆಡಳಿತದ ಬಗ್ಗೆ ವಿವರಗಳನ್ನು ಸಲ್ಲಿಸುವಲ್ಲಿ ವಿಫಲವಾಗಿದೆ. ಭ್ರಷ್ಟಾಚಾರ ಮತ್ತು ದುರುಪಯೋಗದ ಆರೋಪಗಳು ಟ್ರಸ್ಟ್‌ನ ಪದಾಧಿಕಾರಿಗಳ ವಿರುದ್ಧವೂ ಇದೆ. ಟ್ರಸ್ಟ್‌ನಿಂದ ಹಲವು ಬಾರಿ ಮಾಹಿತಿ ಕೇಳಲಾಗಿದೆ. ಆದರೆ ಯಾವುದೇ ಮಾಹಿತಿಯನ್ನು ಒದಗಿಸಲಾಗಿಲ್ಲ. ಕಳೆದ 19 ವರ್ಷಗಳಲ್ಲಿ ಬಂದ ಆದಾಯವನ್ನು ಖರ್ಚು ಎಂದು ತೋರಿಸಿದ್ದಾರೆ ಎಂದು ವಾದಿಸಿದರು. ಭಕ್ತರು ದೇವಸ್ಥಾನವನ್ನು ಮುಜರಾಯಿ ಇಲಾಖೆ ಸುಪರ್ದಿಗೆ ವಹಿಸುವ ನಿರ್ಧಾರವನ್ನು ಸ್ವಾಗತಿಸಿದ್ದಾರೆ ಎಂದು ಸರ್ಕಾರಿ ವಕೀಲರು ಹೇಳಿದರು. ವಾದ, ಪ್ರತಿವಾದ ಆಲಿಸಿದ ಹೈಕೋರ್ಟ್, ಟ್ರಸ್ಟ್ ಅರ್ಜಿಯನ್ನು ವಜಾಗೊಳಿಸಿ ಆದೇಶ ಹೊರಡಿಸಿದೆ.



# ರಾಮಾಯಣ



## ಭರತನು ಶ್ರೀ ರಾಮನ ಆಶ್ರಮವನ್ನು ಕಂಡದ್ದು


• ಹಿಂದಿನ ಸಂಚಿಕೆಯಿಂದ

### 97ನೆಯ ಅಧ್ಯಾಯ

ಆತನನ್ನು ತನ್ನ ಭುಜಗಳಿಂದ ತಬ್ಬಿ ಹಿಡಿದೆತ್ತಿ ಆತನ ಶಿರಸ್ಸನ್ನು ಆಘ್ರಾಣಿಸಿ ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡನು. ಅವನ ಕುಶಲವನ್ನು ವಿಚಾರಿಸುತ್ತ ಆತನನ್ನು ಕುರಿತು ಭರತ, ನಮ್ಮ ತಂದೆಯಾದ ದಶರಥರಾಯನು ಹೇಗಿದ್ದಾನೆ ನೀನೇನು ಕಾರಣ ಅರಣ್ಯಕ್ಕೆ ಬಂದೆ ದಶರಥರಾಯನು ಜೀವಿತನಾಗಿದ್ದರೆ ನೀನು ವನಕ್ಕೆ ಬರಲಾರೆಯಲ್ಲ ಭರತ, ನಿನ್ನನ್ನು ಕಂಡು ಬಹಳ ದಿವಸಗಳಾದವು. ನೀನು ಬರುವಾಗ ದಶರಥರಾಯನು ಜೀವಸಹಿತವಾಗಿದ್ದನೊ ಆ ರಾಜನು ನನ್ನನ್ನು ಕಾಣದೆ ದೈನ್ಯಪಟ್ಟು ಲೋಕಾಂತರವನ್ನೈದಿದನೊ ಅಲ್ಲದಿದ್ದರೆ ಬಾಲಕನಾದ ನೀನು ರಾಜ್ಯಾಧಿಪತ್ಯ ಮಾಡುವಾಗ ಏನಾದರೂ ಉಪದ್ರವ ಬಂದಿತೊ ಭರತ, ಸತ್ಯಸಂಧನಾದ ದಶರಥರಾಯನಿಗೆ ಸೇವೆ ಮಾಡುತ್ತಿದ್ದೆಯೊ ಅಸಹಾಯಶೂರನಾದ ಆ ರಾಜನು ಚೆನ್ನಾಗಿದ್ದಾನೆಯೋ ಕೌಸಲ್ಯಾದೇವಿ ಕೈಕೇಯಾದೇವಿ ಸುಮಿತ್ರಾದೇವಿ ಮೊದಲಾದವರು ಚೆನ್ನಾಗಿರುವರೆ ಅನೇಕ ವಿನಯಗುಣ ಸಂಪತ್ತಿಯುಳ್ಳ ವಸಿಷ್ಠಮುನೀಶ್ವರನು ಚೆನ್ನಾಗಿರುವನೊ ನೀನು ನಮ್ಮ ತಂದೆಯ ಮಾತನ್ನು ಕೇಳುತ್ತ ಆತನಿಗೆ ಸಮಾನರಾದ ವೃದ್ಧರನ್ನೂ ಒಡಹುಟ್ಟಿದವರನ್ನೂ ವೇದವಿದ್ಯಾವಿಶಾರದರಾದ ಬ್ರಾಹ್ಮಣರನ್ನೂ ಸನ್ಮಾನದಲ್ಲಿ ನಡೆಸಿಕೊಂಡಿದ್ದೀಯೊ ಶಸ್ತ್ರಾಸ್ತ್ರಗಳಲ್ಲಿ ಪ್ರವೀಣರಾಗಿ ಅರ್ಥ ಹೇಳುವುದರಲ್ಲಿ ಕುಶಲರಾಗಿ ಧರ್ಮವನ್ನೂ ಧನುರ್ವಿದ್ಯೆಯನ್ನೂ ಉಪದೇಶಮಾಡಿದ ಸುಧನ್ವನೇ ಮೊದಲಾದವರನ್ನು ಸನ್ಮಾನದಲ್ಲಿ ಕಂಡುಕೊಂಡಿದ್ದೀಯೊ ಮಹಾಪರಾಕ್ರಮಿಗಳಾಗಿಯೂ ಮಂತ್ರಾಲೋಚನೆಯಲ್ಲಿ ಸಮರ್ಥರಾಗಿಯೂ ಸತ್ಕುಲಪ್ರಸೂತರಾಗಿಯೂ ಜಿತೇಂದ್ರಿಯರಾಗಿಯೂ ಇರುವ ನೀತಿಶಾಸ್ತ್ರಜ್ಞರಾದ ಮಂತ್ರಿಗಳನ್ನು ಚೆನ್ನಾಗಿ ರಕ್ಷಿಸಿಕೊಂಡಿದ್ದೀಯೊ ಲೋಕದಲ್ಲಿ ಅರಸರಿಗೆ ಮಂತ್ರಾಲೋಚನೆಯೇ ಶತ್ರುಜಯಕ್ಕೆ ಕಾರಣವಾಗಿರುವುದು. ನೀನು ಯಾವಾಗಲೂ ಸನ್ಮಂತ್ರಿಗಳ ಗೋಷ್ಠಿಯಲ್ಲಿಯೇ ಇದ್ದೀಯೋ ರಾತ್ರಿಕಾಲದಲ್ಲಿ ಅತ್ಯಂತ ಮೈಮರೆತು ಮಲಗದಿದ್ದೀಯೊ ಪ್ರಾತಃಕಾಲದಲ್ಲಿದ್ದು ನಾರಾಯಣನ ಸ್ಮರಣೆಯನ್ನು ಮಾಡುತ್ತೀಯೊ ನೀನು ಮಾಡುವ ಮಂತ್ರಾಲೋಚನೆಯನ್ನು ಕುತರ್ಕಿಗಳಾದವರು ಭೇದತಂತ್ರ ಹುಟ್ಟಿಸಿ ಕೆಡಿಸದಿದ್ದಾರೆಯೊ ವಿವೇಕಿಯಾಗಿ ಬುದ್ಧಿವಂತನೂ ಶೂರನೂ ದಕ್ಷನೂ ವಿಚಕ್ಷಣನೂ ಎನಿಸಿದ ಒಬ್ಬ ಪ್ರಧಾನನನ್ನು ರಕ್ಷಣೆಮಾಡಿದ ದೊರೆಗೆ ಕೀರ್ತಿಯುಂಟಾಗುವುದು ಎಲೈ ಭರತನೆ, ಮುಖ್ಯರಾದವರನ್ನು ದೊಡ್ಡ ಕಾರಗಳಲ್ಲಿ ನಿಯೋಜಿಸಬೇಕು. ಮಧ್ಯಮರನ್ನು ಮಧ್ಯಮಕಾರಗಳಲ್ಲಿ ನಿಯೋಜಿಸಬೇಕು. ಅಧಮರಾದವರನ್ನು ಅಧಮಕಾರಕ್ಕೆ ನಿಯೋಜಿಸಬೇಕು. ನೀನು ಈ ಪ್ರಕಾರದಲ್ಲಿ ಅವರವರ ತಾರತಮ್ಯವನ್ನರಿತು ಕುಲಾಗತವಾಗಿ ಬಂದವರೂ ಶುಚಿಗಳೂ ಧೀರರೂ ಉತ್ತಮರೂ ಆದ ಪ್ರಧಾನಿಗಳನ್ನು ಉತ್ತಮಕಾರಗಳಲ್ಲಿ ನಿಯೋಜಿಸುತ್ತಿದ್ದೀಯೊ ಪ್ರಜೆಗಳನ್ನು ಉಗ್ರವಾದ ವಂಡದಿಂದ ಬಾಧಿಸಿ ಕೆಡಿಸದಿದ್ದೀಯೊ ರಾಜ್ಯಾಧಿಪತ್ಯ ಮಾಡುವುದಕ್ಕೆ ಮಂತ್ರಿಗಳೆಲ್ಲರೂ ಅನುಕೂಲರಾಗಿದ್ದಾರೆಯೊ ಅರಸನು ಕೊಟ್ಟ ಐಶ್ವರಕ್ಕಿಂತಲೂ ಹೆಚ್ಚಾಗಿ ಐಶ್ವರವನ್ನು ಬಯಸುವ ಸಾಮದಾನಾದಿಗಳಲ್ಲಿ ಉಪಾಯಕುಶಲನಾದ ಮಂತ್ರಿಯನ್ನಾದರೂ, ವೈದ್ಯನನ್ನಾದರೂ, ಅಂತರಂಗ ನೃತ್ಯನನ್ನಾದರೂ,

ಮುಂದುವರಿಯುವುದು...

# ಬೆಂಗಳೂರಿನಲ್ಲಿ ಹೊಸ ಏಸರ್ ಎಲೆಕ್ಟ್ರಿಕ್ ವಾಹನ ಮಳಿಗೆ ಆರಂಭ



• ಉದಯವಾಹಿನಿ, ಬೆಂಗಳೂರು

ಏಸರ್‌ನ ಅಧಿಕೃತ ಪರವಾನಗಿದಾರರಾದ, ಭಾರತದ ಪ್ರಮುಖ ಎಲೆಕ್ಟ್ರಿಕ್ ಮೊಬಿಲಿಟಿ ನಾವೀನ್ಯಕಾರರಲ್ಲಿ ಮುಂಚೂಣಿಯಲ್ಲಿರುವ ಇಬೈಕ್ ಗೋ ಪ್ರೈವೇಟ್ ಲಿಮಿಟೆಡ್, ಬೆಂಗಳೂರಿನಲ್ಲಿ ತನ್ನ ಏಸರ್ ಎಲೆಕ್ಟ್ರಿಕ್ ವೆಹಿಕಲ್ಸ್ ರಿಟೇಲ್ ಮಳಿಗೆಯನ್ನು ತೆರೆಯುವುದಾಗಿ ಘೋಷಿಸಿದ್ದು- ಇದು ಭಾರತದಾದ್ಯಂತ ಪ್ರಾರಂಭವಾಗುತ್ತಿರುವ 15 ಹೊಸ ಮಳಿಗೆಗಳಲ್ಲಿ ಒಂದಾಗಿದೆ.

ಈ 15 ನಗರಗಳ ವಿಸ್ತರಣೆಯ ಭಾಗವಾಗಿರುವ ಬೆಂಗಳೂರಿನ ಮಳಿಗೆಯು, ಇಬೈಕ್-ಗೋ ಮತ್ತು ಏಸರ್ ಜೊತೆಗಿನ ವಿಶೇಷ ಪರವಾನಗಿ ಪಾಲುದಾರಿಕೆಯಡಿಯಲ್ಲಿ ಅಭಿವೃದ್ಧಿಪಡಿಸಲಾದ ಏಸರ್-ಬ್ರಾಂಡೆಡ್ ಎಲೆಕ್ಟ್ರಿಕ್ ವಾಹನಗಳನ್ನು ಪ್ರದರ್ಶಿಸಲಿದೆ. ಇಬೈಕ್-ಗೋನ ಸಹ-ಸಂಸ್ಥಾಪಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಹರಿಕಿರಣ್ ಮಾತನಾಡುತ್ತಾ, ಭಾರತದಾದ್ಯಂತ 15 ನಗರಗಳಲ್ಲಿ ಇಬೈಕ್-ಗೋನ ಗಮನಾರ್ಹ ವಿಸ್ತರಣೆಯನ್ನು ಘೋಷಿಸಲು ನಾವು ಹರ್ಷಿಸುತ್ತೇವೆ, ವಿವಿಧ ರಾಜ್ಯಗಳಲ್ಲಿ ಏಸರ್ ಎಲೆಕ್ಟ್ರಿಕ್ ವಾಹನಗಳ ಚಿಲ್ಲರೆ ಮಾರಾಟ ಮಳಿಗೆಗಳನ್ನು ಸ್ಥಾಪಿಸುವ ನಮ್ಮ ಕಾರ್ಯತಾಂತ್ರಿಕ ವಿಧಾನದ ಮೂಲಕ ಇದು ಕೆಲವೇ ತಿಂಗಳುಗಳಲ್ಲಿ ಸಾಧ್ಯವಾಗಿದೆ. ಈ ತ್ವರಿತ ವಿಸ್ತರಣೆಯು ಪರಿಸರ ಸ್ನೇಹಿ ಸಾರಿಗೆಗೆ ನಮ್ಮ ಬದ್ಧತೆಯನ್ನು ಒತ್ತಿಹೇಳುತ್ತದೆ, ಮತ್ತು ಇಬೈಕ್-ಗೋಅನ್ನು ಭಾರತೀಯ ಇಗಿ ಮಾರುಕಟ್ಟೆಯಲ್ಲಿ ಪ್ರಮುಖ ಸ್ಪರ್ಧಿಯನ್ನಾಗಿ ಮಾಡುವುದರ ಜೊತೆಗೆ, ಎಲ್ಲಾ ಭಾರತೀಯರ ಹಸಿರು ಮತ್ತು ಸುಸ್ಥಿರ ಭವಿಷ್ಯವನ್ನು ಉತ್ತೇಜಿಸುತ್ತದೆ. ಹಾಗೇ ಇದು ನಮ್ಮ ಇ-ಸೈಕಲ್‌ಗಳು, ಇ-ಸ್ಕೂಟರ್‌ಗಳು ಮತ್ತು ಇ-ಬೈಕ್‌ಗಳು ಸೇರಿದಂತೆ ಇಬೈಕ್-ಗೋನ ಹೊಚ್ಚ ಹೊಸ e-2Ws ಉತ್ಪನ್ನಗಳ ಶ್ರೇಣಿಯ ಮೇಲೆ ಬೆಳಕು ಹರಿಸಲು ನಮಗೆ ಅನುವು ಮಾಡಿಕೊಡುತ್ತದೆ ಎಂದು ಹೇಳಿದರು.

ಏಸರ್‌ನ ಇ-ಮೊಬಿಲಿಟಿ ಕೊಡುಗೆಗಳ ಸಂಪೂರ್ಣ ಶ್ರೇಣಿಯನ್ನು, ಉಚಿತ ಟೆಸ್ಟ್ ರೈಡ್‌ಗಳನ್ನು ಭವಿಷ್ಯದ ನಗರ ಪ್ರಯಾಣದ ಅನುಭವವನ್ನು ನೇರವಾಗಿ ಅನುಭವಿಸಲು, ನೀವು ಈ ಮಳಿಗೆಗೆ ಭೇಟಿ ನೀಡಬಹುದು. ಆರಂಭಿಕ ರಿಯಾಯಿತಿಯ ಭಾಗವಾಗಿ ಇ-ಸೈಕಲ್‌ಗಳು ರೂ.35,999 ರಿಂದ ಪ್ರಾರಂಭವಾಗುತ್ತಿದ್ದು, ಮುಂಬರುವ ಇ-ಸ್ಕೂಟರ್‌ಗಳು ಮತ್ತು ಇ-ಬೈಕ್‌ಗಳ ಜೊತೆಗೆ ಇದು ದೈನಂದಿನ ಸವಾರರಿಗೆ ಉತ್ತಮ ಆಯ್ಕೆಯಾಗಿದೆ. ಹೊಸ ಏಸರ್ ಎಲೆಕ್ಟ್ರಿಕ್ ವಾಹನ ಮಳಿಗೆಯು, ವಿಳಾಸ: ನಂ 8, ಕೃಷ್ಣ ನಗರ, ಇಂಡಸ್ಟ್ರಿಯಲ್ ಲೇಔಟ್, ಹೊಸೂರು ರಸ್ತೆ, 9, ಚಿಕ್ಕು ಲಕ್ಷ್ಮಯ್ಯ ಲೇಔಟ್, ಆಡುಗೋಡಿ, ಬೆಂಗಳೂರು-560029 ನಲ್ಲಿ ಆರಂಭವಾಗಿದೆ.

# ಸಾಧನ ಸಂಗಮದ ವಿಶಿಷ್ಟ ನೃತ್ಯ ಸಮಾಗಮ 2025



ಕಲಾ ಸಾಹಿತ್ಯ

ವೈ.ಕೆ. ಸಂಧ್ಯಾ ಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

ಖ್ಯಾತ ನಾಟ್ಯಗುರು ರಾಜ್ಯೋತ್ಸವ ಪ್ರಶಸ್ತಿ ವಿಜೇತೆ ವಿದುಷಿ. ಜ್ಯೋತಿ ಪಟ್ಟಾಭಿರಾಮ್ ಅವರು ನೃತ್ಯಕ್ಷೇತ್ರದಲ್ಲಿ ಮಾಡಿರುವ ಹಲವು ದಶಕಗಳ ಸಾಧನೆ ಅನುಪಮ. ಸಂಸ್ಥೆ, ಕೇವಲ ಯಾಂತ್ರಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳದೆ, ಹೊಸತನ್ನು ಸಾಧಿಸುವ ತುಡಿತ-ಇಡುತ್ತಿರುವ ಪ್ರಗತಿಪರ ಹೆಜ್ಜೆಗಳು ವಿಶಿಷ್ಟವಾದುದು. ಒಂದು ನೃತ್ಯಸಂಸ್ಥೆ ನೀಡುವ ನೃತ್ಯ ಶಿಕ್ಷಣ, ಕಾರ್ಯಾಗಾರಗಳು, ಬದ್ಧ- ಸಮರ್ಥ ತರಬೇತಿ ನೀಡಿ, ಉತ್ತಮ ಕಲಾವಿದರನ್ನು ರೂಪಿಸಿ, ರಂಗದ ಮೇಲೆ ಯಶಸ್ವಿಯಾಗಿ ನೃತ್ಯಾರ್ಪಣೆ-ರಂಗಪ್ರವೇಶ ಮಾಡಿಸುವುದು, ಮುಂತಾದ ಕಾರ್ಯ ಚಟುವಟಿಕೆಗಳೊಂದಿಗೆ, ಸಾಧನ ಸಂಗಮ ಹೊಸ ಆಯಾಮದಲ್ಲಿ ಕ್ರಿಯಾತ್ಮಕವಾಗಿ ಮುನ್ನಡೆಯುವ ಗುರಿಹಾಕಿಕೊಂಡಿದೆ ಎಂದರೆ ಅತಿಶಯೋಕ್ತಿಯಲ್ಲ.

ಈ ನಿಟ್ಟಿನಲ್ಲಿ ಕಳೆದ 4 ದಶಕಗಳಿಂದ ವಿ. ಜ್ಯೋತಿ ಪಟ್ಟಾಭಿರಾಮ್ ಅವರ ನೇತೃತ್ವದಲ್ಲಿ ಸಾಧನ ಸಂಗಮ ಟ್ರಸ್ಟ್ ನೃತ್ಯಸಂಸ್ಥೆಯು ನೃತ್ಯಕ್ಷೇತ್ರದಲ್ಲಿ ಸಾಧಿಸುತ್ತಿರುವ ಹೊಸ ಮೈಲಿಗಲ್ಲುಗಳ ಈವರೆಗಿನ ಸೃಜನಾತ್ಮಕ ಚಟುವಟಿಕೆಗಳು ಗಮನಾರ್ಹ.

ಈ ನೃತ್ಯಶಾಲೆಯು ವರ್ಷ ಪೂರ್ತಿ ಒಂದಲ್ಲ ಒಂದು ಪ್ರಯೋಗಾತ್ಮಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿರುತ್ತದೆ, ಸದ್ದಿಲ್ಲದೆ ವಿಶಿಷ್ಟವಾಗಿ ಕಾರ್ಯೋನ್ಮುಖವಾಗಿರುತ್ತದೆ. ಅದರಲ್ಲೂ ಸಾಧನ ಸಂಗಮದ ಅನ್ವೇಷಕ ವಿನೂತನ ಯೋಜನೆಗಳು, ರಚನಾತ್ಮಕ ಕಾರ್ಯಕ್ರಮಗಳು ಉದಯೋನ್ಮುಖರಿಗೆ ಮಾತ್ರವಲ್ಲದೆ ಖ್ಯಾತ ಕಲಾವಿದರಿಗೂ ಮುಕ್ತ ಅವಕಾಶದ ಅನೇಕ ಹೊಸ ಬಗೆಯ ವೇದಿಕೆಗಳನ್ನು ಸೃಷ್ಟಿ ಮಾಡಿಕೊಡುತ್ತಲೇ ಬಂದಿದೆ. ಅವರದೇ ಆದ 'ರಂಗೋಪನಿಷತ್' ನೃತ್ಯದಂಗಳದಲ್ಲಿ ಪ್ರತಿ ತಿಂಗಳು, ವರ್ಷ ಪೂರ್ತಿ, ನಯನ ಮನೋಹರ ನೃತ್ಯ ಕಾರ್ಯಕ್ರಮಗಳು ನಡೆಯುತ್ತಲೇ ಇರುತ್ತವೆ.

ನೃತ್ಯ ವಿದ್ಯಾರ್ಥಿಗಳಿಗೆ ಈ ಮೂಲಕ ಉತ್ತಮ ಪ್ರಾತ್ಯಕ್ಷಿಕೆ, ಶಿಕ್ಷಣವಲ್ಲದೆ, ಕಲಾರಸಿಕರಿಗೆ ಕಣ್ಮನ ತುಂಬುವ ರಸಾನುಭವ. ನೃತ್ಯಶಾಲೆಯ ವಾರ್ಷಿಕೋತ್ಸವದ ಹಬ್ಬ ಸತತವಾಗಿ 39 ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಇದೇ ತಿಂಗಳ 20 ಭಾನುವಾರ ಸಂಜೆ 5 ಗಂಟೆಗೆ ವಿಜಯನಗರದ ಕಾಸಿಯಾ ಆಡಿಟೋರಿಯಂನಲ್ಲಿ ನೃತ್ಯ ಸಮಾಗಮ- 2025 ಶೀರ್ಷಿಕೆಯಲ್ಲಿ ಸಾಧನ ಸಂಗಮ ಡ್ಯಾನ್ಸ್ ಸೆಂಟರಿನ 39ನೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ವೈವಿಧ್ಯಪೂರ್ಣ ನೃತ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಅಂದಿನ ಕಾರ್ಯಕ್ರಮದ ಮುಖ್ಯ ಅತಿಥಿ ಶ್ರೀಮತಿ ಶುಭ ಧನಂಜಯ -ಭರತನಾಟ್ಯ-ಕಥಕ್ ನೃತ್ಯ ಕಲಾವಿದೆ, ಅಧ್ಯಕ್ಷರು- ಕರ್ನಾಟಕ ಸಂಗೀತ-ನೃತ್ಯ ಅಕಾಡೆಮಿ.

ಡಾ. ವಿನಯಚಂದ್ರ ಬನಾವತಿ ನಿರ್ದೇಶಕರು- ಸೆಂಟರ್ ಫರ್ ಇಂಡಿಯನ್ ನಾಲೆಡ್ಜ್ ಸಿಸ್ಟಮ್ಸ್, ಚಾಣಕ್ಯ ಯೂನಿವರ್ಸಿಟಿ. ಇದೇ ಸಂದರ್ಭದಲ್ಲಿ ಶ್ರೀಮತಿ ಶುಭಾ ಇವರಿಗೆ ಸಂಸ್ಥೆಯ ಮೌಲಿಕ ಕಲಾತ್ಮಿಕ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು.


**ನಯನ ಮನೋಹರ ನೃತ್ಯರೂಪಕ**

ಮನರಂಜನಾತ್ಮಕ ವಾರ್ಷಿಕೋತ್ಸವದ ಸಂದರ್ಭದಲ್ಲಿ ಕರ್ನಾಟಕ ಕಲಾಶ್ರೀ ಜ್ಯೋತಿ ಪಟ್ಟಾಭಿರಾಮ್ ಪರಿಕಲ್ಪನೆ-ನೃತ್ಯಸಂಯೋಜನೆಯ ಗುರುಕುಲದಲ್ಲಿ ಶ್ರೀಕೃಷ್ಣ ಎಂಬ ನೃತ್ಯರೂಪಕವು ಡಾ. ಸಾಧನ ಶ್ರೀ ಪಿ. ಅವರ ಕಲಾ ನಿರ್ದೇಶನದಲ್ಲಿ ನೃತ್ಯ ನಿಪುಣ ತಂಡದಿಂದ ಸಾದರಗೊಳ್ಳಲಿದೆ. ಜೊತೆಗೆ ಸಾಧನ ಸಂಗಮ ಡ್ಯಾನ್ಸ್ ಸೆಂಟರಿನ ವಿದ್ಯಾರ್ಥಿನಿಯರಿಂದ ಭರತನಾಟ್ಯದ ವೈವಿಧ್ಯಪೂರ್ಣ ನೃತ್ಯ ಕಾರ್ಯಕ್ರಮಗಳ ಪ್ರದರ್ಶನವಿದೆ. ಈ ನೃತ್ಯ ವೈಭವವನ್ನು ಕಣ್ತುಂಬಿಕೊಳ್ಳಲು ಎಲ್ಲರಿಗೂ ಆದರದ ಸ್ವಾಗತ.



# ರಷ್ಯಾದೊಂದಿಗೆ ವ್ಯವಹಾರ ಮಾಡಿದರೆ ಹುಷಾರ್

## ಬ್ರೆಜಿಲ್, ಚೀನಾ ಮತ್ತು ಭಾರತಕ್ಕೆ ನ್ಯಾಟೋ ಎಚ್ಚರಿಕೆ, ಟ್ರಂಪ್ ಉಕ್ರೇನ್‌ಗೆ ಹೊಸ ಮಿಲಿಟರಿ ಬೆಂಬಲ



**ಶೇಕಡಾ 500ರಷ್ಟು ಸುಂಕ**

**ನ್ಯೂಯಾರ್ಕ್:** ರಷ್ಯಾ ದೊಂದಿಗೆ ವ್ಯವಹಾರ ಮುಂದುವರಿಸಿದರೆ ತೀವ್ರ ಆರ್ಥಿಕ ದಂಡವನ್ನು ಎದುರಿಸಬೇಕಾಗುತ್ತದೆ ಎಂದು ಬ್ರೆಜಿಲ್, ಚೀನಾ, ಭಾರತಕ್ಕೆ ನ್ಯಾಟೋ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟ್ಟೆ ಅವರು ಸ್ಪಷ್ಟ ಎಚ್ಚರಿಕೆ ನೀಡಿದ್ದಾರೆ. ಅಮೆರಿಕ ಅಧ್ಯಕ್ಷ ಟ್ರಂಪ್ ಉಕ್ರೇನ್‌ಗೆ ಹೊಸ ಮಿಲಿಟರಿ ಬೆಂಬಲವನ್ನು ಘೋಷಿಸಿದ, ರಷ್ಯಾ, ಅದರ ವ್ಯಾಪಾರ ಪಾಲುದಾರರ ಮೇಲೆ ವ್ಯಾಪಕ ಸುಂಕಗಳನ್ನು ವಿಧಿಸುವುದಾಗಿ ಬೆದರಿಕೆ ಹಾಕಿದ ಒಂದು ದಿನದ ನಂತರ ರುಟ್ಟೆ ಅವರಿಂದ ಈ ಹೇಳಿಕೆ ಹೊರಬಿದ್ದಿದೆ. ಚೀನಾ, ಭಾರತ, ಬ್ರೆಜಿಲ್, ಇತರ ದೇಶಗಳು ರಷ್ಯಾದಿಂದ ಅಗ್ಗದ ತೈಲ, ಅನಿಲವನ್ನು ಖರೀದಿಸುತ್ತಿವೆ.

ಈ ದೇಶಗಳು ರಷ್ಯಾ- ಉಕ್ರೇನ್ ಯುದ್ಧದ ಪರಿಸ್ಥಿತಿಯ ಲಾಭವನ್ನು ಪಡೆದುಕೊಳ್ಳುತ್ತಿವೆ. ರಷ್ಯಾಕ್ಕೆ ಸಹಾಯ ಮಾಡುವ ದೇಶಗಳ ಮೇಲೆ ನಾವು ಶೇಕಡಾ 500ರಷ್ಟು ಸುಂಕಗಳನ್ನು ವಿಧಿಸಬೇಕು. ರಷ್ಯಾ-ಉಕ್ರೇನ್ ಯುದ್ಧವನ್ನು ಕೊನೆಗೊಳಿಸಲು ಕೊನೆಯ ಅವಕಾಶವೆಂದರೆ ಚೀನಾ, ಭಾರತ, ಬ್ರೆಜಿಲ್‌ನಂತಹ ದೇಶಗಳ ಮೇಲೆ ಸುಂಕ ವಿಧಿಸುವುದು ಎಂದು ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ಈ ಮೂರು ದೇಶಗಳಿಗೆ ನನ್ನ ಪ್ರೋತ್ಸಾಹ, ವಿಶೇಷವಾಗಿ ನೀವು ಈಗ ಬೀಜಿಂಗ್‌ನಲ್ಲಿ ಅಥವಾ ದೆಹಲಿಯಲ್ಲಿ ವಾಸಿಸುತ್ತಿದ್ದರೆ ಅಥವಾ ನೀವು ಬ್ರೆಜಿಲ್ ಅಧ್ಯಕ್ಷರಾಗಿದ್ದರೆ, ನೀವು ಇದನ್ನು ಪರಿಶೀಲಿಸಲು ಬಯಸಬಹುದು, ಏಕೆಂದರೆ ಇದು ನಿಮಗೆ ತುಂಬಾ ಪರಿಣಾಮ ಬೀರಬಹುದು. ಶಾಂತಿ ಮಾತುಕತೆಗೆ ಬದ್ಧರಾಗುವಂತೆ ಪುಟಿನ್ ಅವರನ್ನು ನೇರವಾಗಿ ಒತ್ತಾಯಿಸುವಂತೆ ರುಟ್ಟೆ ಮೂರು ರಾಷ್ಟ್ರಗಳ ನಾಯಕರಿಗೆ ಕರೆ ನೀಡಿದ್ದಾರೆ. ದಯವಿಟ್ಟು ವ್ಲಾಡಿಮಿರ್ ಪುಟಿನ್ ಅವರಿಗೆ ಫೋನ್ ಕರೆ ಮಾಡಿ ಶಾಂತಿ ಮಾತುಕತೆಗಳ ಬಗ್ಗೆ ಅವರು ಗಂಭೀರವಾಗಿ ಯೋಚಿಸಬೇಕು ಎಂದು ಹೇಳಿ, ಇಲ್ಲದಿದ್ದರೆ ಇದು ಬ್ರೆಜಿಲ್, ಭಾರತ, ಚೀನಾದ ಮೇಲೆ ಭಾರೀ ಪ್ರಮಾಣದಲ್ಲಿ ಪರಿಣಾಮ ಬೀರುತ್ತದೆ ಎಂದು ಅವರು ಹೇಳಿದ್ದಾರೆ.

ರಷ್ಯಾದ ವಾಯು ದಾಳಿಯನ್ನು ಎದುರಿಸಲು ಕೈವ್ ಪ್ರಮುಖವೆಂದು ಪರಿಗಣಿಸುವ ಪೇಟ್ರಿಯಾಟ್ ಕ್ಷಿಪಣಿ ವ್ಯವಸ್ಥೆಗಳಂತಹ ಸುಧಾರಿತ ಶಸ್ತ್ರಾಸ್ತ್ರಗಳನ್ನು ಕಳುಹಿಸುವುದು ಟ್ರಂಪ್ ಅವರ ಯೋಜನೆಯಲ್ಲಿ ಸೇರಿದೆ. ಡೊನಾಲ್ಡ್ ಟ್ರಂಪ್ ರಷ್ಯಾದ ರಫ್ತುಗಳ ಮೇಲೆ ಶೇ.100 ರಷ್ಟು ಸುಂಕ ವಿಧಿಸುವುದಾಗಿ ಎಚ್ಚರಿಸಿದ್ದಾರೆ, 50 ದಿನಗಳಲ್ಲಿ ಉಕ್ರೇನ್ ಜೊತೆ ಶಾಂತಿ ಒಪ್ಪಂದ ಮಾಡಿಕೊಳ್ಳದಿದ್ದರೆ ರಷ್ಯಾದ ತೈಲ ಖರೀದಿಸುವುದನ್ನು ಮುಂದುವರಿಸುವ ದೇಶಗಳ ಮೇಲೆ ದ್ವಿತೀಯ ನಿರ್ಬಂಧಗಳನ್ನು ವಿಧಿಸುವ ಯೋಜನೆಗಳನ್ನು ಸೂಚಿಸಿದ್ದಾರೆ.50 ದಿನಗಳ ಕೊನೆಯಲ್ಲಿ ನಾವು ಒಪ್ಪಂದ ಮಾಡಿಕೊಳ್ಳದಿದ್ದರೆ, ಅದು ತುಂಬಾ ಕೆಟ್ಟದಾಗಿರುತ್ತದೆ. ಸುಂಕಗಳು ಮುಂದುವರಿಯುತ್ತವೆ ಮತ್ತು ಇತರ ನಿರ್ಬಂಧಗಳು ಮುಂದುವರಿಯುತ್ತವೆ ಎಂದು ಟ್ರಂಪ್ ಹೇಳಿದ್ದರು. ಕಾಂಗ್ರೆಸ್‌ನಿಂದ ಹೊಸ ಅನುಮೋದನೆಯ ಅಗತ್ಯವಿಲ್ಲದೆಯೇ ದ್ವಿತೀಯ ಸುಂಕಗಳನ್ನು ಜಾರಿಗೊಳಿಸಬಹುದು. ನಾವು ದ್ವಿತೀಯಕ ಕೆಲಸಗಳನ್ನು ಮಾಡಬಹುದು. ಸೆನೆಟ್ ಇಲ್ಲದೆ, ಸದನವಿಲ್ಲದೆ ನಾವು ದ್ವಿತೀಯ ಸುಂಕಗಳನ್ನು ಮಾಡಬಹುದು, ಆದರೆ ಅವರು ರಚಿಸುತ್ತಿರುವುದು ಸಹ ತುಂಬಾ ಉತ್ತಮವಾಗಿರುತ್ತದೆ ಎಂದು ಟ್ರಂಪ್ ಈ ಹಿಂದೆ ಹೇಳಿದ್ದರು.

**ಜೈಶಂಕರ್ ಹೇಳಿದ್ದೇನು?**

**ಇತ್ತೀಚೆಗೆ ರಷ್ಯಾದ ಮೇಲೆ ನಿರ್ಬಂಧಗಳನ್ನು ವಿಧಿಸುವ ಅಮೆರಿಕದ ಮಸೂದೆಗೆ ಭಾರತದ ವಿದೇಶಾಂಗ ಸಚಿವ ಜೈಶಂಕರ್ ಪ್ರತಿಕ್ರಿಯಿಸಿದ್ದಾರೆ. ಭಾರತೀಯ ರಾಯಭಾರ ಕಚೇರಿ ಸೆನೆಟರ್ ಗ್ರಹಾಂ ಅವರೊಂದಿಗೆ ಚರ್ಚೆ ನಡೆಸಿದೆ. ಇಂಧನ ಮತ್ತು ಭದ್ರತೆಯ ಬಗ್ಗೆ ಭಾರತದ ಬದ್ಧತೆ ಮತ್ತು ಹಿತಾಸಕ್ತಿಗಳನ್ನು ವಿವರಿಸಲಾಗಿದೆ ಎಂದು ಅವರು ಹೇಳಿದ್ದಾರೆ.ಸೆನೆಟರ್ ಲಿಂಡ್ಸೆ ಗ್ರಹಾಂ ಅವರು ಮಂಡಿಸಿದ ಮಸೂದೆಯು ಭಾರತದ ಹಿತಾಸಕ್ತಿಗಳ ಮೇಲೆ ಯಾವುದೇ ರೀತಿಯಲ್ಲಿ ಪರಿಣಾಮ ಬೀರುತ್ತದೆಯೇ ಎಂದು ನಾವು ಪರಿಶೀಲಿಸುತ್ತೇವೆ. ಸೆನೆಟರ್ ಜೊತೆಗೆ ಚರ್ಚೆ ನಡೆಸುತ್ತಿದ್ದೇವೆ ಎಂದು ಜೈಶಂಕರ್ ತಿಳಿಸಿದ್ದಾರೆ.**

> **ಟ್ರಂಪ್ ಅವರ ಬೆದರಿಕೆಗಳಿಗೆ ಪ್ರತಿಕ್ರಿಯೆಯಾಗಿ, ರಷ್ಯಾದ ಉಪ ವಿದೇಶಾಂಗ ಸಚಿವ ಸೆರ್ಗೆಯ್ ರಿಯಾಬ್ಕೋವ್, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ಮಾತುಕತೆ ನಡೆಸಲು ರಷ್ಯಾ ಸಿದ್ಧವಾಗಿದೆ, ಆದರೆ ಅಂತಿಮ ಎಚ್ಚರಿಕೆಗಳು ಸ್ವೀಕಾರಾರ್ಹವಲ್ಲ, ಯಾವುದೇ ಫಲಿತಾಂಶಗಳನ್ನು ತರುವುದಿಲ್ಲ**
> 
> – ಮಾರ್ಕ್ ರುಟ್ಟೆ ನ್ಯಾಟೋ ಪ್ರಧಾನ ಕಾರ್ಯದರ್ಶಿ

---

# ಇಸ್ರೇಲ್‌ನಲ್ಲಿ ಯೋಗ ದಿನಾಚರಣೆ



**ಜೆರುಸಲೆಮ್:** ಇಸ್ರೇಲ್-ಇರಾನ್ ಸಂಘರ್ಷದಿಂದಾಗಿ ಮುಂದೂಡಲ್ಪಟ್ಟಿದ್ದ 11ನೇ ಅಂತರರಾಷ್ಟ್ರೀಯ ಯೋಗ ದಿನವನ್ನು ಜೆರುಸಲೆಮ್‌ನ ಐತಿಹಾಸಿಕ ಜಾಫಾ ಗೇಟ್ ಸಂಕೀರ್ಣದಲ್ಲಿ ಆಚರಿಸಲಾಯಿತು. ಸುಮಾರು 200 ಯೋಗ ಉತ್ಸಾಹಿಗಳು ಸೇರಿದ್ದರು. ಒಂದು ಭೂಮಿಗೆ ಯೋಗ, ಒಂದು ಆರೋಗ್ಯ ಎಂಬ ವಿಷಯದಡಿ ಜೆರುಸಲೆಮ್‌ನ ಹಳೆಯನಗರದ ಹೊರವಲಯದಲ್ಲಿ ಜೆರುಸಲೆಮ್ ಪುರಸಭೆ, ಇಸ್ರೇಲ್‌ನ ವಿದೇಶಾಂಗ ಸಚಿವಾಲಯ,ಭಾರತದ ರಾಯಭಾರ ಕಚೇರಿಯಿಂದ ಯೋಗ ಅಧಿವೇಶನವನ್ನು ಆಯೋಜಿಸಲಾಗಿತ್ತು.

ತಲಾವಾರು ಜನಸಂಖ್ಯೆಗೆ ಅತಿ ಹೆಚ್ಚು ಸಂಖ್ಯೆಯ ಯೋಗಾಭ್ಯಾಸ ಮಾಡುವವರು, ಶಿಕ್ಷಕರನ್ನು ಹೊಂದಿರುವ ದೇಶದಲ್ಲಿ, ವೈಯಕ್ತಿಕ ಯೋಗಕ್ಷೇಮದಿಂದ ಹಂಚಿಕೆಯ ಸಾಮರಸ್ಯಕ್ಕೆ ಪ್ರಯಾಣವನ್ನು ಪ್ರೇರೇಪಿಸುವಲ್ಲಿ ಪ್ರಾಚೀನ ಭಾರತೀಯ ಅಭ್ಯಾಸದ ಪಾತ್ರವನ್ನು ಈ ಕಾರ್ಯಕ್ರಮವು ಒತ್ತಿಹೇಳಿತು, ಇದು ಪ್ರಧಾನಿ ನರೇಂದ್ರ ಮೋದಿಯವರ ನನ್ನಿಂದ ನಮಗೆ ಎಂಬ ಸಂದೇಶವನ್ನು ಪ್ರತಿಬಿಂಬಿಸುತ್ತದೆ. ಇಸ್ರೇಲ್‌ನಲ್ಲಿ ಈ ಸಮಯದಲ್ಲಿ ಯೋಗವನ್ನು ಆಯೋಜಿಸುವುದು ಬಹಳ ಸಮಯೋಚಿತವಾಗಿದೆ ಏಕೆಂದರೆ ಜನರು ಒತ್ತಡಕ್ಕೊಳಗಾಗಿದ್ದಾರೆ, ಆತಂಕದ ಮಟ್ಟಗಳು ಹೆಚ್ಚಿವೆ. ಯೋಗವು ನಮ್ಮನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯವಾಗಿಡುತ್ತದೆ ಎಂದು ಇಸ್ರೇಲ್‌ಗೆ ಭಾರತದ ರಾಯಭಾರಿ ಜೆ ಪಿ ಸಿಂಗ್ ಹೇಳಿದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಇಸ್ರೇಲ್‌ನ ವಿದೇಶಾಂಗ ಸಚಿವಾಲಯದ ದಕ್ಷಿಣ ಏಷ್ಯಾದ ಬ್ಯೂರೋದ ಮುಖ್ಯಸ್ಥ ರಾಯಭಾರಿ ಸಾಗಿ ಕರ್ನಿ, ಅಂತರರಾಷ್ಟ್ರೀಯ ಯೋಗ ದಿನವು ಅವರ ಘನತೆವೆತ್ತ ಪ್ರಧಾನಿ ಮೋದಿ ಅವರಿಗೆ ಬಹಳ ಮುಖ್ಯ ಎಂದು ನಮಗೆ ತಿಳಿದಿದೆ. ಅದು ಅವರಿಗೆ ಮುಖ್ಯವಾಗಿದ್ದರೆ, ಅದು ನಮಗೂ ಮುಖ್ಯವಾಗಿದೆ. ಆದ್ದರಿಂದ ನಾವು ಇಲ್ಲಿ ಜೆರುಸಲೆಮ್‌ನಲ್ಲಿ ಅಭ್ಯಾಸ ಮಾಡಲು ತುಂಬಾ ಸಂತೋಷಪಡುತ್ತೇವೆ.ಇಸ್ರೇಲ್‌ನ ಮೊದಲ ಪ್ರಧಾನಿ ಡೇವಿಡ್ ಬೆನ್-ಗುರಿಯನ್ ತತ್ವಶಾಸ್ತ್ರ ಮತ್ತು ಬೌದ್ಧಧರ್ಮದಂತಹ ಪೂರ್ವ ತತ್ವಶಾಸ್ತ್ರಗಳಲ್ಲಿ ತುಂಬಾ ಆಸಕ್ತಿ ಹೊಂದಿದ್ದರು ಮತ್ತು ಯೋಗವನ್ನು ಅಭ್ಯಾಸ ಮಾಡುತ್ತಿದ್ದರು ಎಂದು ನಿಮ್ಮಲ್ಲಿ ಹಲವರಿಗೆ ತಿಳಿದಿದೆ ಎಂದು ಕರ್ನಿ ತಮ್ಮ ಮಗಳಿಗೆ ಬರೆದ ಪತ್ರದಲ್ಲಿ ಮಾಜಿ ಪ್ರಧಾನಿ ಬರೆದ ಯೋಗದ ಪ್ರಯೋಜನಗಳನ್ನು ಉಲ್ಲೇಖಿಸುತ್ತಾ ಹೇಳಿದರು.


> **ಇತ್ತೀಚಿನ ಸಂಘರ್ಷದಿಂದಾಗಿ ಜೂನ್ 21 ರಂದು ನಾವು ಅಂತರರಾಷ್ಟ್ರೀಯ ಯೋಗ ದಿನವನ್ನು ಆಯೋಜಿಸಲು ಸಾಧ್ಯವಾಗಲಿಲ್ಲ, ಆದರೆ ನಾವು ಇಂದು ಐತಿಹಾಸಿಕ ನಗರವಾದ ಜೆರುಸಲೆಮ್‌ನಲ್ಲಿ ಇಸ್ರೇಲ್ ವಿದೇಶಾಂಗ ಸಚಿವಾಲಯ ಮತ್ತು ಜೆರುಸಲೆಮ್ ಪುರಸಭೆಯ ಸಹಕಾರದೊಂದಿಗೆ ಅದನ್ನು ಆಯೋಜಿಸುತ್ತಿದ್ದೇವೆ**
> 
> –ಜೆ.ಪಿ. ಸಿಂಗ್
> ಇಸ್ರೇಲ್‌ಗೆ ಭಾರತದ ರಾಯಭಾರಿ

---

# ಅಮೆರಿಕದ 10 ರಾಜ್ಯಗಳ 17 ವಲಸೆ ನ್ಯಾಯಾಲಯಗಳ ನ್ಯಾಯಾಧೀಶರ ವಜಾ

• ಉದಯವಾಹಿನಿ, ವಾಷಿಂಗ್ಟನ್

ಅಮೆರಿಕದ ಟ್ರಂಪ್ ಆಡಳಿತವು ಹದಿನೇಳು ವಲಸೆ ನ್ಯಾಯಾಲಯದ ನ್ಯಾಯಾಧೀಶರನ್ನು ವಜಾಗೊಳಿಸಿದೆ. ದೇಶದಲ್ಲಿ ಅಕ್ರಮ ವಲಸಿಗರ ಸಾಮೂಹಿಕ ಗಡೀಪಾರು ಪ್ರಕ್ರಿಯೆ ಚುರುಕುಗೊಂಡ ಬೆನ್ನಲ್ಲೇ ಟ್ರಂಪ್ ಆಡಳಿತ ಈ ಕ್ರಮಕ್ಕೆ ಮುಂದಾಗಿದೆ. ಶುಕ್ರವಾರ 15 ನ್ಯಾಯಾಧೀಶರನ್ನು ಕಾರಣವಿಲ್ಲದೆ, ಸೋಮವಾರ ಇನ್ನಿಬ್ಬರನ್ನು ಕಾರಣವಿಲ್ಲದೆ ವಜಾಗೊಳಿಸಲಾಗಿದೆ ಎಂದು ನ್ಯಾಯಾಧೀಶರು, ಇತರ ವೃತ್ತಿಪರರನ್ನು ಪ್ರತಿನಿಧಿಸುವ ಅಂತರರಾಷ್ಟ್ರೀಯ ವೃತ್ತಿಪರ, ತಾಂತ್ರಿಕ ಎಂಜಿನಿಯರ್‌ಗಳ ಒಕ್ಕೂಟವು ಪ್ರಕಟಣೆಯಲ್ಲಿ ತಿಳಿಸಿದೆ. ಕ್ಯಾಲಿಫೋರ್ನಿಯಾ, ಇಲಿನಾಯ್ಸ್, ಲೂಸಿಯಾನ, ಮೇರಿಲ್ಯಾಂಡ್, ಮೆಸಾಚೂಸೆಟ್ಸ್, ನ್ಯೂಯಾರ್ಕ್, ಓಹಿಯೊ, ಟೆಕ್ಸಾಸ್, ಉತಾಹ್ ವರ್ಜೀನಿಯಾ ರಾಜ್ಯಗಳ ನ್ಯಾಯಾಲಯಗಳಲ್ಲಿ ಕೆಲಸ ಮಾಡುತ್ತಿದ್ದ ನ್ಯಾಯಾಧೀಶರನ್ನು ವಜಾಗೊಳಿಸಲಾಗಿದೆ ಎಂದು ಒಕ್ಕೂಟ ಹೇಳಿದೆ.



ಅಮೆರಿಕವು ಅಕ್ರಮ ವಲಸಿಗರ ಗಡೀಪಾರನ್ನು ಚುರುಕುಗೊಳಿಸಿದ್ದು, ಮೇನಿಂದ ಭಾರಿ ಸಂಖ್ಯೆಯ ಅಕ್ರಮ ವಲಸಿಗರನ್ನು ಬಂಧಿಸುವ ಪ್ರಕ್ರಿಯೆ ಆರಂಭಿಸಿದೆ. ಇದೀಗ, ವಲಸೆ ನ್ಯಾಯಾಲಯಗಳ ನ್ಯಾಯಾಧೀಶರನ್ನು ವಜಾಗೊಳಿಸಿರುವುದು ನ್ಯಾಯಾಲಯದ ಮೊರೆ ಹೋಗುತ್ತಿದ್ದ ಅಕ್ರಮ ವಲಸಿಗರಿಗೆ ಆತಂಕವನ್ನು ಉಂಟು ಮಾಡಿದೆ ಎಂದು ವರದಿ ತಿಳಿಸಿದೆ.

> **800 ವಲಸೆ ನ್ಯಾಯಾಧೀಶರಿಗೆ ಸಂಸತ್ತು ಅಧಿಕಾರ ನೀಡಿದ್ದರೂ, ವಲಸೆ ನ್ಯಾಯಾಧೀಶರನ್ನು ಕಾರಣವಿಲ್ಲದೆ ವಜಾಗೊಳಿಸಲಾಗುತ್ತಿದೆ. ಇದು ಅತಿರೇಕದ, ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿದೆ**
> 
> –ಮ್ಯಾಟ್ ಬಿಗ್ಸ್ ಒಕ್ಕೂಟದ ಅಧ್ಯಕ್ಷ

---

# ಪೆಹಲ್ಗಾಮ್ ದಾಳಿ ನಂತರ ಜಮ್ಮು ಕಾಶ್ಮೀರದಲ್ಲಿ ಪ್ರವಾಸೋದ್ಯಮ ಕುಸಿತ



**ಶ್ರೀನಗರ:** ಭಾರತ, ಪಾಕಿಸ್ತಾನ ನಡುವೆ ಮತ್ತೊಂದು ಯುದ್ಧಕ್ಕೆ ಮುನ್ನುಡಿ ಬರೆದಿದ್ದ ಕಾಶೀರದ ಪೆಹಲ್ಗಾಮ್‌ನಲ್ಲಿ ನಡೆದ ಭೀಕರ ಭಯೋತ್ಪಾದಕ ದಾಳಿಯಿಂದಾಗಿ ಪ್ರವಾಸಿಗರ ಸ್ವರ್ಗ ಎನಿಸಿದ ಕಣಿವೆ ರಾಜ್ಯದಲ್ಲಿ ಪ್ರವಾಸೋದ್ಯಮ ವಲಯ ತತ್ತರಿಸುವಂತೆ ಮಾಡಿದೆ. 2025ರ ಮೊದಲಾರ್ಧದಲ್ಲಿ ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಜಮ್ಮು ಕಾಶ್ಮೀರದಲ್ಲಿ ಪ್ರವಾಸಿಗರ ಸಂಖ್ಯೆ ಅರ್ಧದಷ್ಟು ಕಡಿಮೆಯಾಗಿದೆ.

ಜಮ್ಮು ಮತ್ತು ಕಾಶ್ಮೀರ ಪ್ರವಾಸೋದ್ಯಮ ಇಲಾಖೆಯ ಅಧಿಕೃತ ದತ್ತಾಂಶದ ಪ್ರಕಾರ, 2025ರ ಮೊದಲಾರ್ಧದಲ್ಲಿ ಕಾಶ್ಮೀರ ಕಣಿವೆ ಸುಮಾರು 7.53 ಲಕ್ಷ ಪ್ರವಾಸಿಗರನ್ನು ಸ್ವಾಗತಿಸಿದೆ. ಮೊದಲ ಮೂರು ತಿಂಗಳಲ್ಲಿ 5.25 ಲಕ್ಷ ಪ್ರವಾಸಿಗರ ಆಗಮನದೊಂದಿಗೆ ಜಮು ಕಾಶೀರ ಭರವಸೆಯ ಆರಂಭವನ್ನು ಕಂಡರೆ, ಏಪ್ರಿಲ್ 22 ರಂದು ಪೆಹಲ್ಗಾಮ್‌ನ ಬೈಸರನ್ ಹುಲ್ಲುಗಾವಲುಗಳಲ್ಲಿ ನಡೆದ ಮಾರಕ ಭಯೋತ್ಪಾದಕ ದಾಳಿಯು ತೀವ್ರ ಕುಸಿತಕ್ಕೆ ಕಾರಣವಾಗಿದೆ. ಇದರ ಪರಿಣಾಮವಾಗಿ ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಪ್ರವಾಸಿಗರ ಸಂಖ್ಯೆಯಲ್ಲಿ ಒಟ್ಟಾರೆ ಶೇ. 52 ರಷ್ಟು ಕುಸಿತ ಕಂಡುಬಂದಿದೆ ಎಂದು ಅಂಕಿ- ಅಂಶಗಳು ಬಹಿರಂಗಪಡಿಸಿವೆ. ದತ್ತಾಂಶದ ಪ್ರಕಾರ, 2024 ರ ಮೊದಲ ಆರು ತಿಂಗಳಲ್ಲಿ 15.65 ಲಕ್ಷಕ್ಕೂ ಹೆಚ್ಚು ಪ್ರವಾಸಿಗರು ಕಾಶ್ಮೀರಕ್ಕೆ ಭೇಟಿ ನೀಡಿದ್ದಾರೆ. 2023 ರಲ್ಲಿ ಇದೇ ಅವಧಿಯಲ್ಲಿ, ಕಣಿವೆಯಲ್ಲಿ 13.63 ಲಕ್ಷಕ್ಕೂ ಹೆಚ್ಚು ಪ್ರವಾಸಿಗರ ಆಗಮನ ದಾಖಲಾಗಿತ್ತು. ದೇಶೀಯ ಪ್ರವಾಸಿಗರ ಸಂಖ್ಯೆಯೂ ಶೇ. 52 ರಷ್ಟು ಕಡಿಮೆಯಾಗಿದ್ದು, 2024ರಲ್ಲಿ 15.39 ಲಕ್ಷದಿಂದ 2025 ರಲ್ಲಿ 7.38 ಲಕ್ಷಕ್ಕೆ ಇಳಿದಿದೆ, ಆದರೆ ವಿದೇಶಿ ಆಗಮನ ಶೇ. 41 ರಷ್ಟು ಕಡಿಮೆಯಾಗಿದ್ದು, 25,995 ರಿಂದ 15,319 ಕ್ಕೆ ಇಳಿದಿದೆ. ಕುತೂಹಲಕಾರಿಯಾಗಿ, 2023ಕ್ಕೆ ಹೋಲಿಸಿದರೆ 2024ರಲ್ಲಿ ಕಾಶ್ಮೀರಕ್ಕೆ ಒಟ್ಟಾರೆ ಪ್ರವಾಸಿಗರ ಆಗಮನದಲ್ಲಿ ಶೇ. 14.8 ರಷ್ಟು ಹೆಚ್ಚಳ ಕಂಡುಬಂದಿದೆ. ದೇಶೀಯ ಪ್ರವಾಸಿಗರ ಸಂಖ್ಯೆ ಶೇ. 14.2 ರಷ್ಟು ಏರಿಕೆಯಾಗಿದ್ದು, 2023ರಲ್ಲಿ 13.48 ಲಕ್ಷದಿಂದ 2024 ರಲ್ಲಿ 15.39 ಲಕ್ಷಕ್ಕೆ ಏರಿಕೆಯಾಗಿದೆ.

ವಿದೇಶಿ ಸಂದರ್ಶಕರ ಸಂಖ್ಯೆ ಶೇ. 64 ರಷ್ಟು ಏರಿಕೆಯಾಗಿದ್ದು, 15,852 ರಿಂದ 25,995 ಕ್ಕೆ ಏರಿಕೆಯಾಗಿದೆ. 26 ನಾಗರಿಕರ ಸಾವಿಗೆ ಕಾರಣವಾದ ಪೆಹಲ್ಗಾಮ್ ಭಯೋತ್ಪಾದಕ ದಾಳಿಯು ಕಾಶ್ಮೀರಕ್ಕೆ ಪ್ರವಾಸಿಗರ ಆಗಮನಕ್ಕೆ ದೊಡ್ಡ ಹೊಡೆತ ನೀಡಿದೆ ಎಂದು ಒಪ್ಪಿಕೊಂಡ ಪ್ರವಾಸೋದ್ಯಮ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು, ದೇಶೀಯ ಪ್ರವಾಸಿಗರು ಮಾತ್ರವಲ್ಲದೆ ವಿದೇಶಿ ಪ್ರವಾಸಿಗರೂ ಕಾಶ್ಮೀರವನ್ನು ತಮ್ಮ ರಜಾ ತಾಣವಾಗಿ ಆಯ್ಕೆ ಮಾಡಿಕೊಳ್ಳುತ್ತಿದ್ದರು, ಪೆಹಲ್ಗಾಮ್ ದಾಳಿಯು ಇಡೀ ಉದ್ಯಮವನ್ನೇ ಬೆಚ್ಚಿಬೀಳಿಸಿದೆ. 2024ರ ಮೊದಲಾರ್ಧದಲ್ಲಿ 25,995 ವಿದೇಶಿಯರು ಸೇರಿದಂತೆ 15,65,851 ಪ್ರವಾಸಿಗರಿಂದ ಈ ವರ್ಷ 15,319 ವಿದೇಶಿಯರು ಸೇರಿದಂತೆ ಕೇವಲ 7,53,856 ಪ್ರವಾಸಿಗರು ಆಗಮಿಸಿದ್ದರು. ಕಣಿವೆ ಇನ್ನೂ ಅತ್ಯುತ್ತಮ ರಜಾ ತಾಣವಾಗಿ ತನ್ನ ಖ್ಯಾತಿಯನ್ನು ಉಳಿಸಿಕೊಂಡಿದೆ. ದಾಳಿಯ ಹೊರತಾಗಿಯೂ ನಮ ಮೇಲೆ ನಂಬಿಕೆ ಇಟ್ಟ ಸುಮಾರು ಎರಡು ಲಕ್ಷ ಪ್ರವಾಸಿಗರಿಗೆ ನಾನು ಕೃತಜ್ಞನಾಗಿದ್ದೇನೆ. ಅಮರನಾಥ ಯಾತ್ರೆ ನಡೆಯುತ್ತಿರುವುದರಿಂದ, ಈ ಯಾತ್ರಿಕರು ದೇಶಾದ್ಯಂತ ಸಕಾರಾತಕ ಸಂದೇಶವನ್ನು ಹರಡುತ್ತಾರೆ ಮತ್ತು ನಮ ಶರತ್ಕಾಲ ಮತ್ತು ಚಳಿಗಾಲದ ಋತುಗಳು ಈ ಪ್ರದೇಶಕ್ಕೆ ಉತ್ತಮ ದಿನಗಳನ್ನು ತರುತ್ತವೆ ಎಂದು ನಾವು ಆಶಿಸುತ್ತೇವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

---

# ಆನಂದರಾಜ್ ಅಂಬೇಡ್ಕರರ ರಿಪಬ್ಲಿಕನ್ ಸೇನೆ ಶಿವಸೇನೆಯೊಂದಿಗೆ ಮೈತ್ರಿ: ಏಕನಾಥ ಶಿಂಧೆ




**ಮುಂಬೈ:** ಮಹಾರಾಷ್ಟ್ರದಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆಗಳು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ, ಉಪಮುಖ್ಯಮಂತ್ರಿ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆಯು ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಮತ್ತೊಬ್ಬ ಮೊಮ್ಮಗ ಆನಂದರಾಜ್ ಅಂಬೇಡ್ಕರ್ ನೇತೃತ್ವದ ರಿಪಬ್ಲಿಕನ್ ಸೇನೆಯೊಂದಿಗೆ ಮೈತ್ರಿ ಮಾಡಿಕೊಂಡಿದೆ. ಆನಂದರಾಜ್ ಅಂಬೇಡ್ಕರ್, ಏಕನಾಥ್ ಶಿಂಧೆ ಅವರು ಜಂಟಿ ಪತ್ರಿಕಾಗೋಷ್ಠಿ ನಡೆಸುವ ಮೂಲಕ ಮೈತ್ರಿ ಘೋಷಣೆ ಮಾಡಿದರು. ಏಕನಾಥ್ ಶಿಂಧೆ ಅವರು ಮುಂಬೈ ಸೇರಿದಂತೆ ನಗರ ಪ್ರದೇಶಗಳಲ್ಲಿ ದಲಿತ ಮತಗಳನ್ನು ಕ್ರೋಢೀಕರಿಸುವ ನಿಟ್ಟಿನಲ್ಲಿ ಈ ಮೈತ್ರಿ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.

ಮುಂಬೈ, ಇತರ ನಗರಗಳಲ್ಲಿನ ಮಹಾನಗರ ಪಾಲಿಕೆ, ಜಿಲ್ಲಾ ಪರಿಷತ್ ಚುನಾವಣೆಗಳಲ್ಲಿ ಈ ಮೈತ್ರಿಯು ನಿರ್ಣಾಯಕ ಪಾತ್ರವಹಿಸುವ ನಿರೀಕ್ಷೆಯಿದೆ. ಉದ್ಧವ್ ಠಾಕ್ರೆ, ರಾಜ್ ಠಾಕ್ರೆ ನಡುವಿನ ಮೈತ್ರಿ ಬಗೆಗಿನ ವದಂತಿಗಳ ಬೆನ್ನಲೇ ಈ ಮೈತ್ರಿ ಘೋಷಣೆಯಾಗಿದೆ. ಬಹುಜನ ಅಘಾಡಿ ಮುಖ್ಯಸ್ಥ ಪ್ರಕಾಶ್ ಅಂಬೇಡ್ಕರ್ ಅವರ ಕಿರಿಯ ಸಹೋದರರಾಗಿರುವ ಆನಂದರಾಜ್ ದಶಕಗಳ ಹಿಂದೆ ಚುನಾವಣಾ ಕಣಕ್ಕೆ ಇಳಿದಿದ್ದರು. ಅಮರಾವತಿ ಲೋಕಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದ್ದರು, ಆದರೆ ಗೆಲುವು ಸಾಧಿಸುವಲ್ಲಿ ವಿಫಲರಾಗಿದ್ದರು.

> **ಮುಂಬರುವ ಚುನಾವಣೆಗಳಲ್ಲಿ ಆನಂದರಾಜ್ ಅಂಬೇಡ್ಕರ್ ನೇತೃತ್ವದ ರಿಪಬ್ಲಿಕನ್ ಸೇನೆಯೊಂದಿಗೆ ಕೈಜೋಡಿಸಲು ನಾವು ಹೆಮ್ಮೆ ಪಡುತ್ತೇವೆ. ಈ ಮೈತ್ರಿ ಸಾಮಾಜಿಕ ನ್ಯಾಯದ ಬದ್ಧತೆಗಾಗಿ ಶ್ರಮಿಸಲಿದೆ. ಅಭಿವೃದ್ಧಿ ಮತ್ತು ತಳ ಸಮುದಾಯದವರಿಗೆ ಧ್ವನಿಯಾಗಿ ನಾವು ಕೆಲಸ ಮಾಡುತ್ತೇವೆ ಎಂದು ಶಿಂಧೆ ಹೇಳಿದರು. ಇದು ಐತಿಹಾಸಿಕ ಕ್ಷಣ, ಈ ಮೈತ್ರಿ ದಲಿತರು, ಸಾಮಾನ್ಯ ಜನರನ್ನು ಪ್ರತಿನಿಧಿಸುವ ಪರ್ಯಾಯ ರಾಜಕಾರಣ**
> 
> –ಆನಂದರಾಜ್ ಅಂಬೇಡ್ಕರ್

---

# ಸತ್ಯಜಿತ್ ರೇ ಪೂರ್ವಿಕರ ಮನೆ ಪುನರ್‌ನಿರ್ಮಾಣಕ್ಕೆ ಭಾರತ ಮನವಿ



**ನವದೆಹಲಿ:** ನೆರೆಯ ಬಾಂಗ್ಲಾದೇಶದಲ್ಲಿರುವ ಖ್ಯಾತ ನಿರ್ದೇಶಕ ಸತ್ಯಜಿತ್ ರೇ ಅವರ ಪೂರ್ವಜರ ಮನೆ ಪುನರ್‌ನಿರ್ಮಾಣ ಮಾಡಬೇಕು ಎಂದು ಭಾರತ ಒತ್ತಾಯಿಸಿದೆ. ಬಾಂಗ್ಲಾದೇಶದ ಮೈಮೆನ್ಸಿಂಗ್‌ನಲ್ಲಿರುವ ಸತ್ಯಜಿತ್ ರೇ ಅವರ ಪೂರ್ವಜರ ಆಸ್ತಿಯನ್ನು ಧ್ವಂಸಗೊಳಿಸಿರುವ ಅಲ್ಲಿನ ಸರ್ಕಾರದ ಕ್ರಮಕ್ಕೆ ಭಾರತ ವಿಷಾದ ವ್ಯಕ್ತಪಡಿಸಿದೆ, ದುರಸ್ತಿ ಮತ್ತು ಪುನರ್ನಿರ್ಮಾಣಕ್ಕೆ ಸಹಾಯ ಮಾಡಲು ಮುಂದಾಗಿದೆ. ಸತ್ಯಜಿತ್ ರೇ ಅವರ ಅಜ್ಜ, ಖ್ಯಾತ ಸಾಹಿತಿ ಉಪೇಂದ್ರ ಕಿಶೋರ್ ರೇ ಚೌಧರಿಗೆ ಸೇರಿದ ಮೈಮೆನ್ಸಿಂಗ್‌ನಲ್ಲಿರುವ ಆಸ್ತಿಯನ್ನು ಕೆಡವಲಾಗುತ್ತಿರುವುದು ವಿಷಾದಕರ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ಬಾಂಗ್ಲಾ ಸಾಂಸ್ಕೃತಿಕ ಪುನರುಜ್ಜೀವನವನ್ನು ಸಂಕೇತಿಸುವ ಕಟ್ಟಡದ ಹೆಗ್ಗುರುತು ಸ್ಥಾನಮಾನವನ್ನು ನೀಡಿದರೆ, ಉರುಳಿಸುವಿಕೆಯನ್ನು ಮರುಪರಿಶೀಲಿಸುವುದು, ಸಾಹಿತ್ಯ ವಸ್ತುಸಂಗ್ರಹಾಲಯ, ಭಾರತ, ಬಾಂಗ್ಲಾದೇಶದ ಹಂಚಿಕೆಯ ಸಂಸ್ಕೃತಿಯ ಸಂಕೇತವಾಗಿ ಅದರ ದುರಸ್ತಿ, ಪುನರ್ನಿರ್ಮಾಣಕ್ಕಾಗಿ ಆಯ್ಕೆಗಳನ್ನು ಪರಿಶೀಲಿಸುವುದು ಯೋಗ್ಯವಾಗಿದೆ ಎಂದು ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಭಾರತ ಸರ್ಕಾರವು ಈ ಉದ್ದೇಶಕ್ಕಾಗಿ ಸಹಕಾರವನ್ನು ವಿಸ್ತರಿಸಲು ಸಿದ್ಧವಾಗಿದೆ ಎಂದು ಅದು ಹೇಳಿದೆ. 1947ರಲ್ಲಿ ಭಾರತೀಯ ಉಪಖಂಡದ ವಿಭಜನೆಯ ನಂತರ, ಸರ್ಕಾರವು ಆಸ್ತಿಯ ಮಾಲೀಕತ್ವವನ್ನು ವಹಿಸಿಕೊಂಡಿತು, ನಂತರ ಅದನ್ನು 1989ರಲ್ಲಿ ಮೈಮೆನ್ಸಿಂಗ್ ಶಿಶು ಅಕಾಡೆಮಿಯಾಗಿ ಪರಿವರ್ತಿಸಲಾಯಿತು. ಸತ್ಯಜಿತ್ ರೇ ಅವರ ಪೂರ್ವಜರ ಮನೆಯನ್ನು ಏಕೆ ಕೆಡವಲಾಗುತ್ತಿದೆ ಹೊಸ ಆರ್‌-ಕಾಂಕ್ರೀಟ್ ರಚನೆಗೆ ದಾರಿ ಮಾಡಿಕೊಡಲು ಮನೆಯನ್ನು ಕೆಡವಲಾಗುತ್ತಿದೆ ಎಂದು ಬಾಂಗ್ಲಾದೇಶ ಮಾಧ್ಯಮಗಳಲ್ಲಿನ ವರದಿಗಳು ತಿಳಿಸಿವೆ. ಅಕಾಡೆಮಿಯ ಚಟುವಟಿಕೆಗಳನ್ನು ಪುನರಾರಂಭಿಸಲು ಹಳೆಯ ಮನೆಯ ಸ್ಥಳದಲ್ಲಿ ಕೊಠಡಿಗಳನ್ನು ಹೊಂದಿರುವ ಅರೆ-ಕಾಂಕ್ರೀಟ್ ಕಟ್ಟಡವನ್ನು ನಿರ್ಮಿಸಲಾಗುವುದು ಎಂದು ಅಧಿಕಾರಿ ಹೇಳಿದರು.


ಹಳೆಯ ಕಟ್ಟಡವು ಆವರಣದಲ್ಲಿ ಸೇರುವ ಮಕ್ಕಳಿಗೆ ಸುರಕ್ಷತಾ ಅಪಾಯವನ್ನುಂಟುಮಾಡಿದೆ ಎಂದು ಮೆಹದಿ ದಿ ಡೈಲಿ ಸ್ಟಾರ್‌ಗೆ ತಿಳಿಸಿದರು.

> **ಮನೆಯು ವರ್ಷಗಳಿಂದ ಶೋಚನೀಯ ಸ್ಥಿತಿಯಲ್ಲಿದೆ ಎಂದು ಸ್ಥಳೀಯರು ಹೇಳಿದರು ಮತ್ತು ಅದರ ನಿರ್ಲಕ್ಷ್ಯಕ್ಕೆ ಆಡಳಿತವನ್ನು ದೂಷಿಸಿದರು. ಇದರ ಉರುಳಿಸುವಿಕೆಯು ಮೈಮೆನ್ಸಿಂಗ್ ನಗರದಲ್ಲಿ ರೇ ರಾಜವಂಶದ ಪರಂಪರೆಯನ್ನು ಅಳಿಸಿಹಾಕುತ್ತದೆ ಎಂದು ಅವರು ಹೇಳಿದರು.**

---

## ಉತ್ತರಾಖಂಡ್ ಸರ್ಕಾರಿ ಶಾಲೆಗಳಲ್ಲಿ ಭಗವದ್ಗೀತೆ ಶ್ಲೋಕ ಪಠಣ ಕಡ್ಡಾಯ: ಕಾಂಗ್ರೆಸ್ ವಿರೋಧ

# ಮೌಲ್ಯಾಧರಿತ ಶಿಕ್ಷಣ ಮಾದರಿಯನ್ನು ಉತ್ತೇಜಿಸುವ ಉದ್ದೇಶ



**ವಿವಾದಕ್ಕೆ ನಾಂದಿ ಹಾಡಿದೆ**

**ಡೆಹ್ರಾಡೂನ್:** ಉತ್ತರಾಖಂಡದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಇನ್ನು ಮುಂದೆ ವಿದ್ಯಾರ್ಥಿಗಳು ಬೆಳಗಿನ ಪ್ರಾರ್ಥನಾ ಸಮಯದಲ್ಲಿ ಭಗವದ್ಗೀತೆಯ ಒಂದು ಶ್ಲೋಕ ಪಠಿಸುವುದು ಕಡ್ಡಾಯವೆಂದು ಹೊರಡಿಸಿರುವ ಸುತ್ತೋಲೆ, ವಿವಾದಕ್ಕೆ ನಾಂದಿ ಹಾಡಿದೆ. ರಾಜ್ಯದ ಪ್ರೌಢ ಶಿಕ್ಷಣ ನಿರ್ದೇಶಕ ಡಾ. ಮುಕುಲ್‌ಕುಮಾರ್ ಸತಿ ಅವರು ಎಲ್ಲಾ ಮುಖ್ಯ ಶಿಕ್ಷಣ ಅಧಿಕಾರಿಗಳಿಗೆ ಹೊರಡಿಸಿರುವ ನಿರ್ದೇಶನದಲ್ಲಿ, ವಿದ್ಯಾರ್ಥಿಗಳು ಪ್ರತಿದಿನ ಪಠಿಸುವ ಶ್ಲೋಕದ ಅರ್ಥ, ವೈಜ್ಞಾನಿಕ ಪ್ರಸ್ತುತತೆಯ ಬಗ್ಗೆಯೂ ತಿಳಿಸಬೇಕು ಎಂದು ಹೇಳಲಾಗಿದೆ. ಈ ಕ್ರಮವು ಆಧುನಿಕ ಶಿಕ್ಷಣವನ್ನು ಸಾಂಪ್ರದಾಯಿಕ ಭಾರತೀಯ ಜ್ಞಾನ ವ್ಯವಸ್ಥೆಗಳೊಂದಿಗೆ ಬೆರೆಸುವ ಮತ್ತು ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯಗಳು ಮತ್ತು ವ್ಯಕ್ತಿತ್ವ ನಿರ್ಮಾಣದ ಲಕ್ಷಣಗಳನ್ನು ಬೆಳೆಸುವ ಗುರಿ ಹೊಂದಿದೆ. ಸರ್ಕಾರ ಹೊರಡಿಸಿರುವ ಸುತ್ತೋಲೆ ಪ್ರಕಾರ, ಶಿಕ್ಷಕರು ಪ್ರತಿ ವಾರ ಒಂದು ಶ್ಲೋಕವನ್ನು ವಾರದ ಶ್ಲೋಕ ಎಂದು ಆಯ್ಕೆ ಮಾಡಿ, ಶಾಲಾ ಸೂಚನಾ ಫಲಕದಲ್ಲಿ ಅದರ ಅರ್ಥದೊಂದಿಗೆ ಬರೆಯಬೇಕು. ಜೊತೆಗೆ ವಿದ್ಯಾರ್ಥಿಗಳು ಅದನ್ನು ಅಭ್ಯಾಸ ಮಾಡುವಂತೆ ನೋಡಿಕೊಳ್ಳಬೇಕು. ವಾರದ ಕೊನೆಯಲ್ಲಿ, ಶ್ಲೋಕವನ್ನು ತರಗತಿಯಲ್ಲಿ ಚರ್ಚಿಸಲಾಗುತ್ತದೆ. ವಿದ್ಯಾರ್ಥಿಗಳ ಪ್ರತಿಕ್ರಿಯೆಯನ್ನು ತೆಗೆದುಕೊಳ್ಳಲಾಗುತ್ತದೆ ಎಂದು ಸೂಚಿಸಲಾಗಿದೆ. ವಿದ್ಯಾರ್ಥಿಗಳ ಬೌದ್ಧಿಕ, ಭಾವನಾತ್ಮಕ, ನೈತಿಕ ಬೆಳವಣಿಗೆಯನ್ನು ಪೋಷಿಸುವ ಜೊತೆಗೆ ಮೌಲ್ಯಾಧರಿತ ಶಿಕ್ಷಣ ಮಾದರಿಯನ್ನು ಉತ್ತೇಜಿಸುವುದು ಇದರ ಉದ್ದೇಶವಾಗಿದೆ. ಶಾಲಾ ಪಠ್ಯಕ್ರಮದಲ್ಲಿ ಸಾಂಪ್ರದಾಯಿಕ ಭಾರತೀಯ ಮಹಾಕಾವ್ಯಗಳನ್ನು ಸೇರಿಸುವ ವಿಶಾಲ ಯೋಜನೆಯ ಭಾಗ ಇದು ಎಂದು ಉತ್ತರಾಖಂಡ್ ಶಿಕ್ಷಣ ಸಚಿವ ಧನ್‌ಸಿಂಗ್ ರಾವತ್ ಸರ್ಕಾರದ ಕ್ರಮವನ್ನು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ. ಮುಖ್ಯಮಂತ್ರಿಯವರೊಂದಿಗಿನ ಸಭೆಯಲ್ಲಿ 17,000 ಸರ್ಕಾರಿ ಶಾಲೆಗಳ ಪಠ್ಯ ಕ್ರಮದಲ್ಲಿ ಸೇರಿಸಲು ಭಗವದ್ಗೀತೆ ಮತ್ತು ರಾಮಾಯಣದಿಂದ ವಿಷಯವನ್ನು ಸಿದ್ಧಪಡಿಸಲು ನಾವು ಎನ್ ಸಿಇಆರ್‌ಟಿಗೆ ಕೆಲಸ ನೀಡಿದ್ದೇವೆ. ಅದು ಜಾರಿಯಾಗುವವರೆಗೆ, ದೈನಂದಿನ ಶಾಲಾ ಪ್ರಾರ್ಥನೆಗಳಲ್ಲಿ ಎರಡೂ ಪಠ್ಯಗಳ ಪದ್ಯಗಳನ್ನು ಪಠಿಸಲಾಗುತ್ತದೆ ಎಂದು ಅವರು ಹೇಳಿದ್ದಾರೆ. ಸಿಎಂ ಪುಷ್ಕರ್ ಸಿಂಗ್ ಧಾಮಿ ಈ ಹಿಂದೆಯೇ ರಾಜ್ಯದ ಪಠ್ಯಕ್ರಮದಲ್ಲಿ ಭಗವದ್ಗೀತೆ, ರಾಮಾಯಣದ ಬೋಧನೆಗಳನ್ನು ಸೇರಿಸಬೇಕೆಂದು ಕರೆ ನೀಡಿದ್ದರು.

ಮದರಸಾಗಳಲ್ಲಿ ಸಂಸ್ಕೃತವನ್ನು ಪರಿಚಯಿಸಲು, ಸಾಂಸ್ಕೃತಿಕ ಏಕತೆ ಮತ್ತು ಶೈಕ್ಷಣಿಕ ಒಳಗೊಳ್ಳುವಿಕೆಯನ್ನು ಉತ್ತೇಜಿಸಲು ಮದರಸಾ ಮಂಡಳಿ, ಸಂಸ್ಕೃತ ಇಲಾಖೆಯ ಸಹಯೋಗದ ಯೋಜನೆಗಳನ್ನು ಅವರು ಘೋಷಿಸಿದರು.ಆದರೆ ಪ್ರತಿಪಕ್ಷ ಕಾಂಗ್ರೆಸ್ ಸರಕಾರದ ಈ ನಿರ್ಧಾರವನನ್ನು ವಿರೋಧಿಸಿದೆ. ಇದು ಕೇವಲ ಒಂದು ಧರ್ಮವನ್ನು ಗುರಿಯಾಗಿಟ್ಟುಕೊಂಡು ಮಾಡಿರುವ ನಿರ್ಧಾರವೆಂದು ಟೀಕಿಸಿದೆ.

> **ಈ ಬದಲಾವಣೆಗಳನ್ನು ಪ್ರತಿಬಿಂಬಿಸುವ ಹೊಸ ಪಠ್ಯಪುಸ್ತಕಗಳನ್ನು ಮುಂಬರುವ ಶೈಕ್ಷಣಿಕ ವರ್ಷದಲ್ಲಿ ಪರಿಚಯಿಸುವ ನಿರೀಕ್ಷೆಯಿದೆ. ಈ ಕ್ರಮಕ್ಕೆ ಶೈಕ್ಷಣಿಕ ವಲಯದಾದ್ಯಂತ ಬೆಂಬಲ ವ್ಯಕ್ತವಾಗಿದೆ. ಉತ್ತರಾಖಂಡ್ ಮದರಸಾ ಶಿಕ್ಷಣ ಮಂಡಳಿಯ ಅಧ್ಯಕ್ಷ ಮುಫ್ತಿ ಶಮೂನ್ ಖಾಸಿ ಈ ನಿರ್ಧಾರವನ್ನು ಸ್ವಾಗತಿಸಿ, ರಾಮ ಮತ್ತು ಕೃಷ್ಣ ಇಬ್ಬರೂ ನಮ ಪೂರ್ವಜರು, ಮತ್ತು ಪ್ರತಿಯೊಬ್ಬ ಭಾರತೀಯನು ಅವರ ಬಗ್ಗೆ ತಿಳಿದುಕೊಳ್ಳುವುದು ಮುಖ್ಯ**
> 
> – ಡಾ. ಮುಕುಲ್‌ಕುಮಾರ್ ಸತಿ

**ವ್ಯಕ್ತಿತ್ವ ನಿರ್ಮಾಣ, ವೈಜ್ಞಾನಿಕ ಚಿಂತನೆ**

**ಗೀತೆಯ ತಾತ್ವಿಕ ಮತ್ತು ಮಾನಸಿಕ ಬೋಧನೆಗಳನ್ನು ವಿವರಿಸಲು ಶಿಕ್ಷಕರಿಗೆ ಸೂಚನೆ ನೀಡಲಾಗುತ್ತದೆ, ಅವು ಪಾತ್ರ, ಅಭಿವೃದ್ಧಿ, ಭಾವನಾತ್ಮಕ ಸಮತೋಲನ, ನಾಯಕತ್ವ ಕೌಶಲ್ಯ, ತರ್ಕಬದ್ಧ ನಿರ್ಧಾರ ತೆಗೆದುಕೊಳ್ಳುವಿಕೆಯಲ್ಲಿ ಹೇಗೆ ಸಹಾಯ ಮಾಡುತ್ತವೆ ಎಂಬುದರ ಮೇಲೆ ಕೇಂದ್ರೀಕರಿಸುತ್ತವೆ. ಗೀತಾ ಶ್ಲೋಕಗಳು ಓದುವುದಕ್ಕೆ ಸೀಮಿತವಾಗಿರದೆ ವಿದ್ಯಾರ್ಥಿಗಳ ದೈನಂದಿನ ನಡವಳಿಕೆ ಮತ್ತು ವರ್ತನೆಗಳ ಮೇಲೆ ಪ್ರಭಾವ ಬೀರಬೇಕು ಎಂದು ಈ ನಿರ್ದೇಶನವು ಒತ್ತಿಹೇಳುತ್ತದೆ. ಈ ಉಪಕ್ರಮವು ರಾಷ್ಟ್ರೀಯ ಶಿಕ್ಷಣ ನೀತಿ 2020ಕ್ಕೆ ಅನುಗುಣವಾಗಿದೆ, ಇದು ಭಾರತದ ಸಾಂಪ್ರದಾಯಿಕ ಜ್ಞಾನ ವ್ಯವಸ್ಥೆಗಳನ್ನು ಸಮಕಾಲೀನ ಶಿಕ್ಷಣದಲ್ಲಿ ಸೇರಿಸುವುದನ್ನು ಪ್ರತಿಪಾದಿಸುತ್ತದೆ. ಗೀತೆಯ ಬೋಧನೆಗಳು, ಕ್ರಮ ಟಿಪ್ಪಣಿಗಳು, ಮನೋವಿಜ್ಞಾನ, ತರ್ಕ, ನಡವಳಿಕೆ ವಿಜ್ಞಾನ, ನೈತಿಕ ತತ್ತ್ವಶಾಸ್ತ್ರವನ್ನು ಆಧರಿಸಿವೆ ಮತ್ತು ಅವುಗಳನ್ನು ಜಾತ್ಯತೀತ ದೃಷ್ಟಿಕೋನದಿಂದ ಕಲಿಸಬೇಕು.**

---

**ಮಿನಿ ನ್ಯೂಸ್**

## ಫೌಜಾಸಿಂಗ್‌ಗೆ ಡಿಕ್ಕಿ ಹೊಡೆದಿದ್ದ ಕಾರು ಚಾಲಕನ ಬಂಧನ

**ಚಂಡೀಗಢ:** ವಿಶ್ವದ ಅತ್ಯಂತ ಹಿರಿಯ ಮ್ಯಾರಥಾನ್ ಓಟಗಾರ ಫೌಜಾ ಸಿಂಗ್ ಅವರಿಗೆ ಡಿಕ್ಕಿ ಹೊಡೆದಿದ್ದ ಎಸ್‌ಯುವಿ ಚಾಲಕನನ್ನು ಬಂಧಿಸಲಾಗಿದೆ. ಆರೋಪಿಯನ್ನು ಕರ್ತಾರ್‌ಪುರದ ದಾಸುಪುರ ನಿವಾಸಿ ಅಮೃತ್‌ಪಾಲ್ ಸಿಂಗ್ ಧಿಲ್ಲೋನ್ (26) ಎಂದು ಗುರುತಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಅವರ ವಾಹನವನ್ನು ಸಹ ವಶಪಡಿಸಿಕೊಳ್ಳಲಾಗಿದೆ.

ಧಿಲ್ಲೋನ್ ಭೋಗ್‌ಪುರದಿಂದ ಕಿಶನ್‌ಗಢ್‌ಗೆ ಹೋಗುತ್ತಿದ್ದಾಗ ಪಂಜಾಬ್‌ನ ಜಲಂಧರ್ ಜಿಲ್ಲೆಯ ತನ್ನ ಸ್ಥಳೀಯ ಬಿಯಾಸ್ ಗ್ರಾಮದಲ್ಲಿ ಸಿಂಗ್ (114) ಗೆ ಡಿಕ್ಕಿ ಹೊಡೆದು ಪರಾರಿಯಾಗಿದ್ದರು. ಈ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಫೌಜಾ ಸಿಂಗ್ ಸಾವನ್ನಪ್ಪಿದರು. ಗ್ರಾಮಸ್ಥರ ಪ್ರಕಾರ, ವಾಹನ ಡಿಕ್ಕಿ ಹೊಡೆದ ರಭಸಕ್ಕೆ ಸಿಂಗ್ ಅವರ ದೇಹ ಆರರಿಂದ ಏಳು ಅಡಿ ದೂರಕ್ಕೆ ಎಸೆಯಲ್ಪಟ್ಟಿತ್ತು ಎನ್ನಲಾಗಿದೆ. ಘಟನೆಯ ನಂತರ, ಚಾಲಕನ ವಿರುದ್ಧ ಭಾರತೀಯ ನ್ಯಾಯ ಸಂಹಿತಾ ಸೆಕ್ಷನ್ 281, 105 ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ದೆಹಲಿ ಶಾಲೆಗಳಿಗೆ ಮುಂದುವರೆದ ಬಾಂಬ್ ಬೆದರಿಕೆ ಕರೆಗಳು

**ನವದೆಹಲಿ:** ರಾಷ್ಟ್ರ ರಾಜಧಾನಿ ದೆಹಲಿ ಶಾಲೆಗಳಿಗೆ ಬರುತ್ತಿರುವ ಬಾಂಬ್ ಬೆದರಿಕೆ ಕರೆಗಳು ದಿನೇ ದಿನೇ ಹೆಚ್ಚಾಗುತ್ತಲೆ ಇದೆ. ದೆಹಲಿಯ ಎರಡು ಖಾಸಗಿ ಶಾಲೆಗಳಲ್ಲಿ ಬಾಂಬ್ ಬೆದರಿಕೆ ಬಂದಿದ್ದು, ಅಧಿಕಾರಿಗಳು ತಕ್ಷಣವೇ ಸಂಪೂರ್ಣ ಪರಿಶೀಲನೆಗಾಗಿ ಆವರಣವನ್ನು ಸ್ಥಳಾಂತರಿಸುವಂತೆ ತಿಳಿಸಿದ್ದಾರೆ. ರಾಷ್ಟ್ರ ರಾಜಧಾನಿಯ ಶಿಕ್ಷಣ ಸಂಸ್ಥೆಗಳಿಗೆ ಬಾಂಬ್ ಬೆದರಿಕೆ ಬಂದಿರುವುದು ಸತತ ಮೂರನೇ ದಿನವಾಗಿದ್ದು, ಕಳೆದ ಎರಡು ದಿನಗಳಲ್ಲಿ ಇದು ಮೂರನೇ ಹುಸಿ ಕರೆಯಾಗಿದೆ.ದ್ವಾರಕಾದ ಸೇಂಟ್ ಥಾಮಸ್ ಶಾಲೆಯನ್ನು ಸ್ಫೋಟಿಸುವುದಾಗಿ ಬೆದರಿಕೆ ಹಾಕುವ ಇಮೇಲ್ ಬೆಳಿಗ್ಗೆ 5.26 ಕ್ಕೆ ಬಂದಿದ್ದರೆ, ವಸಂತ್ ವ್ಯಾಲಿ ಶಾಲೆಗೆ ಬೆಳಿಗ್ಗೆ 6.30 ಕ್ಕೆ ಇದೇ ರೀತಿಯ ಬೆದರಿಕೆ ಬಂದಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಮುನ್ನೆಚ್ಚರಿಕೆ ಕ್ರಮವಾಗಿ ಈ ಶಾಲೆಗಳಲ್ಲಿ ರಾತ್ರಿಯಿಡೀ ತಂಗಿದ್ದ ಸಿಬ್ಬಂದಿಯನ್ನು ತಕ್ಷಣವೇ ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಲಾಯಿತು. ಸೇಂಟ್ ಥಾಮಸ್ ಶಾಲೆಗೆ, ಇದು 24 ಗಂಟೆಗಳಿಗಿಂತ ಕಡಿಮೆ ಅವಧಿಯಲ್ಲಿ ಎರಡನೇ ಬಾಂಬ್ ಬೆದರಿಕೆಯಾಗಿದೆ.ದೆಹಲಿ ಪೊಲೀಸ್ ತಂಡಗಳು, ಬಾಂಬ್ ನಿಷ್ಕ್ರಿಯ ದಳ, ಶ್ವಾನ ದಳ ಮತ್ತು ಸೈಬರ್ ತಜ್ಞರನ್ನು ಶಾಲೆಗಳಿಗೆ ಧಾವಿಸಿ, ಸಂಪೂರ್ಣ ಶೋಧ ನಡೆಸಲಾಯಿತು. ಇಲ್ಲಿಯವರೆಗೆ ಯಾವುದೇ ಅನುಮಾನಾಸ್ಪದ ವಸ್ತುಗಳು ಕಂಡುಬಂದಿಲ್ಲ ಎಂದು ಅವರು ಹೇಳಿದರು.

## ಗುಂಡಿನ ಚಕಮಕಿಯಲ್ಲಿ ಇಬ್ಬರು ಮಾವೋವಾದಿಗಳ ಹತ್ಯೆ

**ಬೊಕಾರೊ:** ಜಾರ್ಖಂಡ್‌ನ ಬೊಕಾರೊ ಜಿಲ್ಲೆಯಲ್ಲಿ ಬುಧವಾರ ಬೆಳಿಗ್ಗೆ ನಡೆದ ಗುಂಡಿನ ಚಕಮಕಿಯಲ್ಲಿ ಇಬ್ಬರು ಮಾವೋವಾದಿಗಳು, ಒಬ್ಬ ಸಿಆರ್‌ಪಿಎಫ್ ಜವಾನ್ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಗೋಮಿಯಾ ಪೊಲೀಸ್ ಠಾಣೆ ಪ್ರದೇಶದ ಬಿರ್ಹೋರ್ಡೆರಾ ಅರಣ್ಯದಲ್ಲಿ ಬೆಳಿಗ್ಗೆ 5.30 ರ ಸುಮಾರಿಗೆ ಭದ್ರತಾ ಪಡೆಗಳು ಮತ್ತು ಮಾವೋವಾದಿಗಳ ನಡುವೆ ಗುಂಡಿನ ಚಕಮಕಿ ನಡೆದಿದೆ ಎಂದು ಅವರು ಹೇಳಿದರು.

ಎನ್‌ಕೌಂಟರ್‌ನಲ್ಲಿ ಭದ್ರತಾ ಪಡೆಗಳು ಇಬ್ಬರು ಮಾವೋವಾದಿಗಳನ್ನು ಹೊಡೆದುರುಳಿಸಿದವು. ಸಿಪಿಆರ್‌ಎಫ್‌ನ ಕೋಬ್ರಾ, ಬೆಟಾಲಿಯನ್‌ನ ಒಬ್ಬ ಜವಾನ್ ಕೂಡ ಗುಂಡಿನ ಚಕಮಕಿಯಲ್ಲಿ ಸಾವನ್ನಪ್ಪಿದ್ದಾರೆ ಎಂದು ಐಜಿ, ಕ್ರಾಂತಿ ಕುಮಾರ್ ಗಡಿದೇಸಿ ಪಿಟಿಐಗೆ ತಿಳಿಸಿದ್ದಾರೆ. ಎನ್‌ಕೌಂಟರ್ ನಂತರ ಆ ಪ್ರದೇಶದಲ್ಲಿ ಶೋಧ ಕಾರ್ಯ ನಡೆಯುತ್ತಿದೆ ಎಂದು ಬೊಕಾರೊದ ಎಸ್‌ಪಿ ಹರ್ವಿಂದರ್ ಸಿಂಗ್ ಪಿಟಿಐಗೆ ತಿಳಿಸಿದ್ದಾರೆ.

## ಹೈ-ಟೆನ್ಷನ್ ವಿದ್ಯುತ್ ತಂತಿ ಸ್ಪರ್ಶಿಸಿ 6 ನವಿಲುಗಳ ಸಾವು

**ಮೊರೆನಾ:** ಮಧ್ಯಪ್ರದೇಶದ ಮೊರೆನಾ ಜಿಲ್ಲೆಯಲ್ಲಿ ಹೈ-ಟೆನ್ಷನ್ ವಿದ್ಯುತ್ ತಂತಿ ತಗುಲಿ 6 ನವಿಲುಗಳು ಮೃತಪಟ್ಟಿವೆ ಎಂದು ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ. ದಿಮಿನಿ ಪ್ರದೇಶದ ಸ್ಮೃತಿ ಗ್ರಾಮದ ದೇಗುಲವ ಮುಂಭಾಗದಲ್ಲಿ ಮಂಗಳವಾರ ಮಧ್ಯಾಹ್ನ ಈ ಘಟನೆ ನಡೆದಿದೆ. ದೇಗುಲದ ಸಮೀಪ ಇರುವ ಗದ್ದೆಯಲ್ಲಿ ವಿಹರಿಸುತ್ತಿದ್ದ ನವಿಲುಗಳಿಗೆ ಹೈ-ಟೆನ್ಷನ್ ವಿದ್ಯುತ್ ತಂತಿ ಸ್ಪರ್ಶಿಸಿದ್ದು, ತಕ್ಷಣವೇ ಅಸುನೀಗಿವೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಘಟನೆ ಬಳಿಕ ವಿದ್ಯುತ್ ಸರಬರಾಜು ಕಂಪನಿ ಹಾಗೂ ಅರಣ್ಯಾಧಿಕಾರಿಗಳನ್ನು ಸಂಪರ್ಕಿಸಿದರೂ ಅವರಿಂದ ಯಾವುದೇ ಪ್ರತಿಕ್ರಿಯೆ ಸಿಗಲಿಲ್ಲ ಎನ್ನುವುದು ಗ್ರಾಮಸ್ಥರ ಆರೋಪ. ಬಳಿಕ ಮೃತ ನವಿಲುಗಳ ವಿಡಿಯೋವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ. ಗ್ರಾಮಸ್ಥರ ಫೋನ್‌ಗೆ ಸ್ಪಂದಿಸದೇ ಇದ್ದಿದ್ದು ಅಧಿಕಾರಿಗಳ ನಿರ್ಲಕ್ಷ್ಯ ಎಂದಿರುವ ಉತ್ತರ ವಲಯ ವಿದ್ಯುತ್ ಸರಬರಾಜು ಕಂಪನಿಯ ಪ್ರಧಾನ ವ್ಯವಸ್ಥಾಪಕ ವಿ.ಎಸ್ ಡಂಗಿ, ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ.

ಕಳೆದ ವಾರ ಮಧ್ಯಪ್ರದೇಶದ ಬುಡಕಟ್ಟು ಜನ ಹೆಚ್ಚಿರುವ ಜಬುಬಾ ಜಿಲ್ಲೆಯಲ್ಲಿ 11 ನವಿಲುಗಳು ಮೃತಪಟ್ಟಿದ್ದವು ಎಂದು ಅಧಿಕಾರಿಗಳು ತಿಳಿಸಿದ್ದರು. ಭಾರತದ ರಾಷ್ಟ್ರೀಯ ಪಕ್ಷಿಯಾಗಿರುವ ನವಿಲನ್ನು ವನ್ಯಜೀವಿ ಕಾಯ್ದೆಯ 1ನೇ ಪರಿಚ್ಛೇದದಲ್ಲಿ ಸೇರಿಸಲಾಗಿದ್ದು, ಅತಿ ಹೆಚ್ಚು ರಕ್ಷಣೆ ನೀಡಬೇಕು ಎಂದು ಕಾನೂನು ಹೇಳುತ್ತದೆ.

## ಅಮರನಾಥ ಯಾತ್ರೆಗೆ ತೆರಳಿದ 6,064 ಯಾತ್ರಿಕರ ತಂಡ

**ಜಮ್ಮು:** ಹಿಮಾಲಯದ ತಪ್ಪಲಿನಲ್ಲಿರುವ ಅಮರನಾಥನ ದರ್ಶನ ಪಡೆಯಲು 6,064 ಯಾತ್ರಿಕರ ತಂಡವೊಂದು ಬುಧವಾರ ತೆರಳಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜುಲೈ 3ರಿಂದ ಈ ಬಾರಿಯ ಅಮರನಾಥ ಯಾತ್ರೆ ಆರಂಭವಾಗಿದೆ. ಅನಂತನಾಗ್ ನುನ್ವಾನ್-ಪೆಹಲ್ಗಾಮ್ ಹಾಗೂ ಗಂದರ್ಬಲ್ ಬಳಿಯ ಬಾಲ್ಟಾಲ್ ಬೇಸ್ ಕ್ಯಾಂಪ್ ಮೂಲಕ ಎರಡು ಬೇರೆ ಬೇರೆ ಯಾತ್ರಿಕರ ತಂಡ ತೆರಳಿದ್ದು, ಅದರಲ್ಲಿ 1,511 ಮಹಿಳೆಯರಿದ್ದಾರೆ. ಭಯೋತ್ಪಾದಕರ ಬೆದರಿಕೆಯಿರುವ ಕಾರಣ ಸೂಕ್ತ ಭದ್ರತಾ ವ್ಯವಸ್ಥೆಯನ್ನು ಮಾಡಲಾಗಿದೆ. ಪೆಹಲ್ಗಾಮ್‌ನಿಂದ 139 ವಾಹನಗಳಲ್ಲಿ 3,593 ಯಾತ್ರಿಕರು ತೆರಳಿದ್ದಾರೆ. ಬಾಲ್ಟಾಲ್ ಬೇಸ್ ಕ್ಯಾಂಪ್‌ನಿಂದ 95 ವಾಹನಗಳಲ್ಲಿ 2,471 ಭಕ್ತಾದಿಗಳು ಯಾತ್ರೆಗೆ ತೆರಳಿದ್ದಾರೆ. 38 ದಿನಗಳ ವಾರ್ಷಿಕ ಅಮರನಾಥ ಯಾತ್ರೆಗೆ ಎರಡು ಮಾರ್ಗದಲ್ಲಿ ಯಾತ್ರಿಕರು ತೆರಳಲಿದ್ದಾರೆ. ಈ ಬಾರಿಯ ಯಾತ್ರೆಯು ಆಗಸ್ಟ್ 9ಕ್ಕೆ ಸಂಪೂರ್ಣಗೊಳ್ಳಲಿದೆ. ಇದುವರೆಗೂ 2.35 ಲಕ್ಷ ಭಕ್ತಾದಿಗಳು ಅಮರನಾಥನ ದರ್ಶನ ಪಡೆದುಕೊಂಡಿದ್ದಾರೆ.





## ಭಟ್ ಗೀತ ಗುಚ್ಚಕ್ಕೆ ಕಾಯ್ಕಿಣಿ ಸಾಥ್

ಮತ್ತೆ ಮೊದಲಿಂದ 'ಗೀತ ಗುಚ್ಚದ' 4ನೇ ಹಾಗೂ ಕೊನೆಯ ಹಾಡು 'ನೀ ಹೋದ ಮೇಲೆ' (ನೆನಪಿನ ಬಣ್ಣ ಹಸಿರು) ಇತ್ತೀಚೆಗೆ ಬಿಡುಗಡೆಯಾಯಿತು. ಖ್ಯಾತ ಸಾಹಿತಿ ಜಯಂತ ಕಾಯ್ಕಿಣಿ ಈ ಹಾಡನ್ನು ಅನಾವರಣ ಮಾಡಿದರು.

ಯೋಗರಾಜ್ ಭಟ್ ಗೀತರಚನೆ ಮಾಡಿರುವ ವಿ.ಹರಿಕೃಷ್ಣ ಸಂಗೀತ ನೀಡಿರುವ ಹಾಗೂ ವಾಸುಕಿ ವೈಭವ್ ಹಾಡಿರುವ ಈ ಹಾಡಿನಲ್ಲಿ ಸಂಜನ್ ಕಜೆ ಹಾಗೂ ಅಂಜಲಿ ಗೌಡ ಅಭಿನಯಿಸಿದ್ದಾರೆ. 'ಮತ್ತೆ ಮೊದಲಿಂದ' ಗೀತಗುಚ್ಚದ 4ನೇ ಹಾಗೂ ಕೊನೆಯ ಹಾಡು ''ನೀ ಹೋದ ಮೇಲೆ'' (ನೆನಪಿನ ಬಣ್ಣ ಹಸಿರು) ಎಂಬ ಹಾಡನ್ನು ಬಿಡುಗಡೆ ಮಾಡಿಕೊಟ್ಟ ಜಯಂತ ಕಾಯ್ಕಿಣಿ ಅವರಿಗೆ ಧನ್ಯವಾದ.

''ಮತ್ತೆ ಮೊದಲಿಂದ'' ಗೀತಗುಚ್ಚದಲ್ಲಿ ನಾಲ್ಕು ಪ್ರೇಮಗೀತೆಗಳಿದ್ದು, ನಾಲ್ಕು ಹಾಡುಗಳನ್ನು ಬಿಳುಪು, ನೀಲಿ, ಕೆಂಪು ಹಾಗೂ ಹಸಿರು ನಾಲ್ಕು ಬಣ್ಣಗಳು ಪ್ರತಿನಿಧಿಸುತ್ತದೆ. ಎಲ್ಲಾ ಹಾಡುಗಳಿಗೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ನಾನೇ ನಾಲ್ಕು ಹಾಡುಗಳನ್ನು ಬರೆದಿದ್ದೇನೆ. ನಾಲ್ಕು ಹಾಡುಗಳಿಗೂ ನಾಲ್ಕು ಹೆಸರಾಂತ ಸಂಗೀತ ನಿರ್ದೇಶಕರು ಸಂಗೀತ ಸಂಯೋಜಿಸಿದ್ದಾರೆ. ಜನಪ್ರಿಯ ಗಾಯಕ ಗಾಯಕಿಯರು ಹಾಡಿದ್ದಾರೆ. ಇಂದು ಬಿಡುಗಡೆಯಾಗಿರುವ ''ನೀ ಹೋದ ಮೇಲೆ'' ಹಾಡನ್ನು ವಾಸುಕಿ ವೈಭವ್ ಸುಮಧುರವಾಗಿ ಹಾಡಿದ್ದು, ವಿ.ಹರಿಕೃಷ್ಣ ಸಂಗೀತ ನೀಡಿದ್ದಾರೆ. ಹೆಸರಾಂತ ಆಯುರ್ವೇದ ವೈದ್ಯ, ಗಿರಿಧರ ಕಜೆ ಅವರ ಕುಟುಂಬದ ಸದಸ್ಯ, ಸಂಜನ್ ಕಜೆ ಹಾಗೂ ಅಂಜಲಿ ಗೌಡ ಅಭಿನಯಿಸಿದ್ದಾರೆ.



## ಜಾಲಿಡೇಸ್ ಹುಡುಗನ ಚಿತ್ರಕ್ಕೆ ಮನೋಹರ್ ಸಂಗೀತ

'ಜಾಲಿಡೇಸ್' ಚಿತ್ರದ ಖ್ಯಾತಿಯ ನಿರಂಜನ್ ಶೆಟ್ಟಿ ನಾಯಕನಾಗಿ ನಟಿಸಿರುವ '31 days' ಚಿತ್ರದ ಹಾಡುಗಳ ಬಿಡುಗಡೆ ಸಮಾರಂಭ ಶನಿವಾರ ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ಅದ್ದೂರಿಯಾಗಿ ನೆರವೇರಿತು. ಆರೋಗ್ಯ ಸಚಿವರಾದ ದಿನೇಶ್ ಗುಂಡೂರಾವ್, ಮಾಜಿ ಸಂಸದರಾದ ಜಯಪ್ರಕಾಶ್ ಹೆಗ್ಡೆ, ಸಂಗೀತ ನಿರ್ದೇಶಕ ಗುರುಕಿರಣ್, ನಟಿ ನಿರ್ಮಾಪಕಿ ಗೀತಪ್ರಿಯ ಮುಂತಾದ ಗಣ್ಯರು ವಿ.ಮನೋಹರ್ ಬರೆದು, ಹಾಡಿ, ಸಂಗೀತ ಸಂಯೋಜಿಸಿರುವ ಈ ಚಿತ್ರದ ಹಾಡುಗಳನ್ನು ಅನಾವರಣ ಮಾಡಿ ಚಿತ್ರ ಯಶಸ್ವಿಯಾಗಲೆಂದು ಹಾರೈಸಿದರು. 31 ಡೇಸ್ ವಿ.ಮನೋಹರ್ ಅವರ ಸಂಗೀತ ಸಂಯೋಜನೆಯ 150ನೇ ಚಿತ್ರವಾಗಿದ್ದು, ಇದೇ ಸಂದರ್ಭದಲ್ಲಿ ಅವರನ್ನು ಚಿತ್ರತಂಡ ಆತ್ಮೀಯವಾಗಿ ಸನ್ಮಾನಿಸಿತ್ತು. ನಂತರ ಚಿತ್ರತಂಡದ ಸದಸ್ಯರು ಮಾತನಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಗೀತ ನಿರ್ದೇಶಕ ವಿ.ಮನೋಹರ್, ನಾನು ಸಂಗೀತ ನಿರ್ದೇಶಕನಾಗಿದ್ದೆ ಅನಿರೀಕ್ಷಿತ. ನಿರ್ದೇಶಕನಾಗಲು ಬಂದ ನಾನು, ಸಂಗೀತ ನಿರ್ದೇಶಕನಾದೆ. ಇದಕ್ಕೆ ಉಪೇಂದ್ರ ಅವರು ಕಾರಣ. 'ತರ್ಲೆ ನನ್ಮಗ' ನನ್ನ ಸಂಗೀತ ಸಂಯೋಜನೆಯ ಮೊದಲ ಚಿತ್ರ. '31 ಡೇಸ್' 150ನೇ ಚಿತ್ರ. ಇಷ್ಟು ವರ್ಷದ ಸಂಗೀತದ ಜರ್ನಿಗೆ ಸಾಥ್ ನೀಡಿದ ಪ್ರತಿಯೊಬ್ಬರಿಗೂ ಈ ಸಂದರ್ಭದಲ್ಲಿ ಧನ್ಯವಾದ ತಿಳಿಸುತ್ತೇನೆ. ಇನ್ನೂ ಈ ಚಿತ್ರದಲ್ಲಿ 11 ಹಾಡುಗಳಿದೆ. ನಾಡಿನ ಜನಪ್ರಿಯ ಗಾಯಕ ಗಾಯಕಿಯರು ಹಾಡಿದ್ದಾರೆ. ನಾಯಕ ನಿರಂಜನ್ ಶೆಟ್ಟಿ ಬಹಳ ವರ್ಷಗಳ ಪರಿಚಯ. ಅವರ ಶ್ರೀಮತಿ ನಾಗವೇಣಿ ಈ ಚಿತ್ರ ನಿರ್ಮಾಣ ಮಾಡಿದ್ದಾರೆ. ಚಿತ್ರ ಯಶಸ್ವಿಯಾಗಲಿ ಎಂದು ಹಾರೈಸಿದರು.

ಇದು 150ನೇ ಸಿನಿಮಾ



## ಸದ್ಯದಲ್ಲೇ ಕೆ.ಮಂಜು, ಸ್ಮೈಲ್ ಶ್ರೀನು ಕಾಂಬಿನೇಶನ್ ಚಿತ್ರ


ದೊಡ್ಡ ಮಟ್ಟದ ಚಿತ್ರ

ಯುವ ನಿರ್ದೇಶಕ ಸ್ಮೈಲ್ ಶ್ರೀನು ಕನ್ನಡದಲ್ಲಿ ಸಾಕಷ್ಟು ಸದಭಿರುಚಿಯ ಚಿತ್ರಗಳನ್ನು ನಿರ್ದೇಶಿಸಿ ಗುರುತಿಸಿಕೊಂಡವರು. ತೂಫಾನ್, ಬಳ್ಳಾರಿ ದರ್ಬಾರ್, 18 X 25, ಓ ಮೈ ಲವ್ ನಂಥ ಮಾಸ್ ಅಂಡ್ ಕ್ಲಾಸ್ ಚಿತ್ರಗಳನ್ನು ನಿರ್ದೇಶಿಸುವ ಮೂಲಕ ಕನ್ನಡ ಸಿನಿ ಪ್ರೇಕ್ಷಕರ ಮನದಲ್ಲಿ ತನ್ನದೇ ಆದ ಸ್ಥಾನ ಗಳಿಸಿರುವ ಇವರು ಇದೀಗ ನಿರ್ಮಾಪಕ ಕೆ.ಮಂಜು ಅವರ ಜತೆ ಕೈಜೋಡಿಸಿದ್ದಾರೆ. ಸದಾ ಪ್ರತಿಭಾವಂತರನ್ನು ಪೋಷಿಸುತ್ತ ಬಂದಿರುವ ಕೆ.ಮಂಜು ಸ್ಮೈಲ್ ಶ್ರೀನು ಅವರಲ್ಲಿರುವ ಪ್ರತಿಭೆಯನ್ನು ಗುರ್ತಿಸಿ ದೊಡ್ಡ ಜವಾಬ್ದಾರಿ ವಹಿಸಿದ್ದಾರೆ. ರಾಜಾಹುಲಿ, ರಾಮ ಶಾಮ ಭಾಮ, ಜಮೀನ್ದಾರು, ಮಾತಾಡ್ ಮಾತಾಡ್ ಮಲ್ಲಿಗೆ ಸೇರಿದಂತೆ ಸಾಕಷ್ಟು ಸದಭಿರುಚಿಯ ಚಿತ್ರಗಳನ್ನೇ ನಿರ್ಮಿಸಿರುವ ನಿರ್ಮಾಪಕ ಕೆ.ಮಂಜು ಈ ಸಲ ದೊಡ್ಡ ಕ್ಯಾನ್ವಾಸ್‌ನೊಂದಿಗೆ ದೊಡ್ಡ ಮಟ್ಟದ ಚಿತ್ರ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಈಗಾಗಲೇ ಕಥೆ, ಚಿತ್ರಕಥೆ ಸಿದ್ದವಾಗಿದ್ದು, ಡೈಲಾಗ್ ವರ್ಷನ್ ನಡೆಯುತ್ತಿದೆ. ಇದೀಗ ಈ ಇಬ್ಬರು ಅನುಭವಿಗಳು ಜೊತೆ ಸೇರಿರುವುದು ಚಿತ್ರಪ್ರೇಮಿಗಳಲ್ಲಿ ಹಾಗೂ ಕನ್ನಡ ಚಿತ್ರರಂಗದಲ್ಲಿ ದೊಡ್ಡಮಟ್ಟದ ನಿರೀಕ್ಷೆಯನ್ನು ಹುಟ್ಟುಹಾಕಿದೆ. ಕೆ.ಮಂಜು ಸಿನಿಮಾಸ್ ಅಡಿಯಲ್ಲಿ ಚಿತ್ರ ನಿರ್ದೇಶಿಸುತ್ತಿರುವ ಕುರಿತಂತೆ ಮಾತನಾಡಿದ ನಿರ್ದೇಶಕ ಸ್ಮೈಲ್ ಶ್ರೀನು, ನನ್ನ ಸ್ಕ್ರಿಪ್ಟ್ ವರ್ಕ್, ನರೇಶನ್ ಮೇಲೆ ನಂಬಿಕೆಯಿಟ್ಟು ಈ ಜವಾಬ್ದಾರಿ ವಹಿಸಿದ್ದಾರೆ. ಪ್ರೇಕ್ಷಕರಿಗೆ ಹೊಸತನದ ಚಿತ್ರವನ್ನು ನೀಡುವ ಸಿದ್ದತೆಯಂತೂ ನಡೆಯುತ್ತಿದೆ. ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಳ್ಳುವಂಥ ಸಿನಿಮಾ ಇದಾಗಲಿದೆ. ಕೆಲವೇ ದಿನಗಳಲ್ಲಿ ಚಿತ್ರದ ಟೈಟಲ್, ಕಲಾವಿದರು, ತಾಂತ್ರಿಕ ವರ್ಗದ ಬಗ್ಗೆ ಮಾಹಿತಿ ನೀಡುತ್ತೇವೆ. ಸದ್ಯದಲ್ಲೇ ದೊಡ್ಡ ಮಟ್ಟದಲ್ಲಿ ಚಿತ್ರವನ್ನು ಲಾಂಚ್ ಮಾಡುತ್ತಿದ್ದೇವೆ ಎಂದು ಹೇಳಿದರು. ನನ್ನ ದೊಡ್ಡ ಕನಸಿಗೆ ಅನುಭವಿ ನಿರ್ಮಾಪಕರು ಹಾಗೂ ಖ್ಯಾತ ವಿತರಕರೂ ಆದ ಕೆ.ಮಂಜು ಅವರು ಜೊತೆಯಾಗಿರುವುದು ನನಗೆ ಸಿಕ್ಕಂಥ ದೊಡ್ಡ ಸಪೋರ್ಟ್ ಹಾಗೂ ನನ್ನ ಅದೃಷ್ಟವೆಂದೇ ಹೇಳಬಹುದು ಎಂದಿದ್ದಾರೆ.

## ಕಿಯಾರಾ ಅಡ್ವಾಣಿ ದಂಪತಿಗೆ ಹೆಣ್ಣು ಮಗು ಜನನ

ಬಾಲಿವುಡ್ ನಟರಾದ ಸಿದ್ಧಾರ್ಥ್ ಮಲ್ಹೋತ್ರಾ ಮತ್ತು ಕಿಯಾರಾ ಅಡ್ವಾಣಿ ಹೆಣ್ಣು ಮಗುವಿಗೆ ತಂದೆ-ತಾಯಿಯಾಗಿದ್ದಾರೆ. ತಾಯಿ ಮತ್ತು ಮಗು ಇಬ್ಬರೂ ಆರೋಗ್ಯವಾಗಿದ್ದಾರೆ.

ನಟಿಗೆ ಆಗಸ್ಟ್‌ನಲ್ಲಿ ಮಗು ಜನಿಸಬೇಕಿತ್ತು. ಆದರೆ ಮಗು ಬೇಗನೆ ಜನಿಸಿದೆ. ಕಿಯಾರಾಳನ್ನು ಹೆರಿಗೆಗಾಗಿ ಮುಂಬೈನ ಗಿರ್ಗಾಂವ್ ಪ್ರದೇಶದ ಹೆಚ್‌ಎನ್ ರಿಲಯನ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಕಳೆದ ವಾರ, ಸಿದ್ಧಾರ್ಥ್ ಮತ್ತು ಕಿಯಾರಾ ಮುಂಬೈನ ಕ್ಲಿನಿಕ್ ಒಂದರಲ್ಲಿ ಕಾಣಿಸಿಕೊಂಡಿದ್ದರು. ಸಿದ್ಧಾರ್ಥ್ ಅವರ ತಾಯಿ ರಿಮ್ಮಾ ಮಲ್ಹೋತ್ರಾ, ಮತ್ತು ಕಿಯಾರಾ ಅವರ ಪೋಷಕರು ಜೆನೆವೀವ್ ಮತ್ತು ಜಗದೀಪ್ ಅಡ್ವಾಣಿ ಅವರೊಂದಿಗೆ ಆಸ್ಪತ್ರೆಯಲ್ಲಿದ್ದಾರೆ. ಕಿಯಾರಾ ಪ್ರೆಗ್ನೆನ್ಸಿ ಘೋಷಿಸಿದಾಗಿನಿಂದ,



ಕಿಯಾರಾ ಮತ್ತು ಸಿದ್ಧಾರ್ಥ್ ಸೋಷಿಯಲ್ ಮೀಡಿಯಾದಲ್ಲಿ ಅಷ್ಟೇನು ಆಕ್ಟೀವ್ ಆಗಿರಲಿಲ್ಲ. ಫೆಬ್ರವರಿ 28 ರಂದು, ಸಿದ್ಧಾರ್ಥ್ ಮತ್ತು ಕಿಯಾರಾ ಇನ್ಸ್ಟಾಗ್ರಾಮ್‌ನಲ್ಲಿ 'ನಮ್ಮ ಜೀವನದ ಶ್ರೇಷ್ಠ ಉಡುಗೊರೆ ಶೀಘ್ರದಲ್ಲೇ ಬರಲಿದೆ' ಎಂದು ಪೋಸ್ಟ್ ಮಾಡಿದ್ದರು.



## ಏರ್‌ಪೋರ್ಟ್‌ನಲ್ಲಿ ದರ್ಶನ್ ಫೋಟೋ ರಿವೀಲ್

ನಿಧಿ ಸುಬ್ಬಯ್ಯ ಮಂದಣ್ಣಗೆ ಕೌಂಟರ್

ನಟ ದರ್ಶನ್ ಥೈಲ್ಯಾಂಡ್‌ಗೆ ತೆರಳಿದ್ದಾರೆ. ಪುತ್ರ ವಿನೀಶ್ ಕೂಡ ದರ್ಶನ್‌ಗೆ ಜೊತೆಯಾಗಿ ಪ್ರಯಾಣಿಸಿದ್ದಾರೆ. ಡೆವಿಲ್ ಚಿತ್ರದ ನಿರ್ದೇಶಕ ಪ್ರಕಾಶ್ ಜಯರಾಂ ಸೇರಿ ಚಿತ್ರತಂಡ ದರ್ಶನ್ ಜೊತೆಯೇ ಪ್ರಯಾಣ ಬೆಳೆಸಿದ್ದಾರೆ. ಮಂಗಳವಾರ ರಾತ್ರಿ ದರ್ಶನ್ ಥೈಲ್ಯಾಂಡ್‌ಗೆ ತೆರಳಿದ್ದು, ಬ್ಯಾಂಕಾಕ್ ತಲುಪಿದ್ದಾರೆ. ಗುರುವಾರದಿಂದ ಹಾಡಿನ ಚಿತ್ರೀಕರಣ ಪ್ರಾರಂಭವಾಗಿ ಐದು ದಿನ ನಡೆಯುತ್ತೆ. ಕೊಲೆ ಆರೋಪಿಯಾದ್ಮೇಲೆ ಪ್ರಥಮ ಬಾರಿಗೆ ದರ್ಶನ್ ವಿದೇಶ ಪ್ರಯಾಣ ಮಾಡುತ್ತಿದ್ದು, ಹತ್ತು ದಿನ ಥೈಲ್ಯಾಂಡ್‌ನಲ್ಲಿರುವ ಸಾಧ್ಯತೆ ಇದೆ. ಮಂಗಳವಾರ ರಾತ್ರಿ ಬೆಂಗಳೂರು ಇಂಟರ್‌ನ್ಯಾಶನಲ್ ವಿಮಾನ ನಿಲ್ದಾಣದಲ್ಲಿ ದರ್ಶನ್ ಪುತ್ರ ವಿನೀಶ್ ಹಾಗೂ ಡೈರೆಕ್ಟರ್ ಪ್ರಕಾಶ್ ಜೊತೆ ಕುಳಿತಿರುವ ಫೋಟೋ ಲಭ್ಯವಾಗಿದೆ. ಕೊಲೆ ಆರೋಪದಲ್ಲಿ ಬಂಧಿತರಾಗಿದ್ದ ದರ್ಶನ್ ಪಾಸ್‌ಪೋರ್ಟ್‌ನ್ನು ಕೋರ್ಟ್ ವಶ ಪಡಿಸಿಕೊಂಡಿತ್ತು. ಇದೀಗ ಜಾಮೀನು ಪಡೆದುಕೊಂಡಿರುವ ದರ್ಶನ್ ಕೋರ್ಟ್‌ನಿಂದ ಅನುಮತಿ ಪಡೆದೇ ವಿದೇಶಕ್ಕೆ ತೆರಳುತ್ತಿದ್ದಾರೆ.

ಡೆವಿಲ್ ಚಿತ್ರದ ಹಾಡೊಂದರ ಚಿತ್ರೀಕರಣಕ್ಕಾಗಿ ದರ್ಶನ್ ಥೈಲ್ಯಾಂಡ್‌ಗೆ ಹೋಗಿದ್ದು, ಈ ಮೂಲಕ ಡೆವಿಲ್ ಚಿತ್ರದ ಚಿತ್ರೀಕರಣ ಸಂಪೂರ್ಣವಾಗಿ ಮುಕ್ತಾಯವಾಗುತ್ತಿದೆ. ಈ ಹಿಂದೆ ಯುರೋಪ್ ಹಾಗೂ ದುಬೈಗೆ ತೆರಳಲು ದರ್ಶನ್ ಕೋರ್ಟ್‌ನಿಂದ ಅನುಮತಿ ಕೇಳಿದ್ದವರು.

ಆದರೆ ಅಲ್ಲಿ ವೀಸಾ ಹಾಗೂ ಇನ್ನಿತರ ತೊಂದರೆ ಉಂಟಾದ ಕಾರಣಕ್ಕೆ ದರ್ಶನ್ ಇದೀಗ ಭಾರತಕ್ಕೆ ವೀಸಾಫ್ರೀ ಇರುವ ಥೈಲ್ಯಾಂಡ್‌ನಲ್ಲಿ ಹಾಡಿನ ಚಿತ್ರೀಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾಗುತ್ತಿದೆ. ಡೆವಿಲ್ ಅತಿಶೀಘ್ರದಲ್ಲಿ ತೆರೆ ಮೇಲೆ ಬರಲು ಹವಣಿಸುತ್ತಿದೆ.





## ದೇವದತ್ ಪಡಿಕ್ಕಲ್‌ಗೆ ಜಾಕ್‌ಪಾಟ್

ಅತಿ ಹೆಚ್ಚು ಮೊತ್ತಕ್ಕೆ ಮಾರಾಟ

ದೇವದತ್ ಪಡಿಕ್ಕಲ್ ಅವರು ಮಹಾರಾಜ ಟ್ರೋಫಿ ಟಿ20 ಹರಾಜಿನಲ್ಲಿ ದುರಿ ಬೆಲೆಗೆ ಮಾರಾಟವಾಗಿ ಇತಿಹಾಸ ನಿರ್ಮಿಸಿದ್ದಾರೆ. ಇದು ಮಹಾರಾಜ ಟ್ರೋಫಿ ಇತಿಹಾಸದಲ್ಲೇ ಅತಿ ಹೆಚ್ಚು ಬೆಲೆ. ಆರ್‌ಸಿಬಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ನಂತರ ಈ ಯಶಸ್ಸು ಪಡಿಕ್ಕಲ್‌ಗೆ ಸಿಕ್ಕಿದೆ.


ಕನ್ನಡಿಗ ದೇವದತ್ ಪಡಿಕ್ಕಲ್ ಅವರು ಈ ಬಾರಿಯ ಐಪಿಎಲ್‌ನಲ್ಲಿ ಆರ್‌ಸಿಬಿ ಪರ ಆಡಿ ಒಳ್ಳೆಯ ಪ್ರದರ್ಶನ ನೀಡಿದರು. ಗಾಯ ಆದ ಕಾರಣ ಅವರು ಸೀಸನ್‌ನಿಂದ ದೂರವೇ ಇರಬೇಕಾಗಿ ಬಂತು. ಈಗ ಅವರು 'ಮಹಾರಾಜ ಟ್ರೋಫಿ ಟಿ20' ಆಡಲು ರೆಡಿ ಆಗಿದ್ದಾರೆ. ಯುವ ಆಟಗಾರರ ಮೇಲೆ ತಂಡಗಳು ದೊಡ್ಡ ಮೊತ್ತವನ್ನು ಸುರಿಯತ್ತಿವೆ. ದೇವದತ್‌ಗೆ ಈ ಬಾರಿ ಜಾಕ್‌ಪಾಟ್ ಹೊಡೆದಿದೆ.

ಕಳೆದ ವರ್ಷ ರಾಜಸ್ಥಾನ್ ರಾಯಲ್ಸ್ ಪರ ದೇವದತ್ ಆಡಿದ್ದರು. ತಂಡದಿಂದ ಅವರನ್ನು ಬಿಟ್ಟ ಬಳಿಕ ಆರ್‌ಸಿಬಿ ತಂಡ ಪಿಕ್ ಮಾಡಿತು. ಅಲ್ಲಿ ಅವರು ತಮ್ಮ ಸಾಮರ್ಥ್ಯ ತೋರಿಸಿದ್ದಾರೆ. ಇದು ಮಹರಾಜ ಟ್ರೋಫಿ ಆಕ್ಷನ್‌ಗೆ ಸಹಕಾರಿ ಆಗಿದೆ. ಕರ್ನಾಟಕ ರಾಜ್ಯ ಕ್ರಿಕೆಟ್ ಮಂಡಳಿಯಲ್ಲಿ ಮಹರಾಜ ಟ್ರೋಫಿಗೆ ಜುಲೈ 15ರಂದು ಹರಾಜು ಪ್ರಕ್ರಿಯೆ ನಡೆದಿದೆ. ದೇವದತ್ ಪಡಿಕಲ್ ಅವರು ಇದೀಗ ಅತಿ ಹೆಚ್ಚು ಬೆಲೆಗೆ ಮಾರಾಟ ಆದ ಆಟಗಾರ ಎನಿಸಿಕೊಂಡಿದ್ದಾರೆ. ಆರ್‌ಸಿಬಿ ದೇವದತ್ ಅವರನ್ನು 3.20 ಕೋಟಿ ರೂಪಾಯಿಗೆ ಖರೀದಿ ಮಾಡಿತ್ತು. ಈಗ 'ಹುಬ್ಬಳ್ಳಿ ಟೈಗರ್ಸ್' 13.20 ಲಕ್ಷ ರೂಪಾಯಿಗೆ ಪಡಿಕ್ಕಲ್‌ನ ಖರೀದಿಸಿದೆ. ಇಡೀ ಮಹರಾಜ ಟ್ರೋಫಿ ಇತಿಹಾಸದಲ್ಲೇ ಅತಿ ಹೆಚ್ಚು ಬೆಲೆಗೆ ಮಾರಾಟ ಆದ ಆಟಗಾರ ಎನಿಸಿಕೊಂಡಿದ್ದಾರೆ. ಕನ್ನಡಿಗ ಮನೀಶ್ ಪಾಂಡೆಯನ್ನು 'ಮೈಸೂರು ವಾರಿಯರ್ಸ್' ತಂಡ 12.20 ಲಕ್ಷ ರೂಪಾಯಿಗೆ ಖರೀದಿಸಿದೆ. ಸನ್ ರೈಸರ್ಸ್ ಹೈದರಾಬಾದ್‌ನ ಅಭಿನವ್ ಮನೋಹರ್‌ನ ಹುಬ್ಬಳ್ಳಿ ಟೈಗರ್ಸ್ 12.20 ಲಕ್ಷ ರೂಪಾಯಿ ಕೊಟ್ಟು ಪಡೆದುಕೊಂಡಿದೆ. ಲೆಗ್ ಸ್ಪಿನ್ನರ್ ಶ್ರೇಯಸ್ ಗೋಪಾಲ್‌ನ 'ಮಂಗಳೂರು ಡ್ರ್ಯಾಗನ್ಸ್' 8.60 ಲಕ್ಷ ರೂಪಾಯಿಗೆ ಪಡೆದುಕೊಂಡಿದೆ. ಮಹಾರಾಜ ಟ್ರೋಫಿಯಲ್ಲಿ ಪ್ರತಿ ಫ್ರಾಂಚೈಸಿಯವರು ಎರಡು ಸ್ಥಳೀಯ ಆಟಗಾರರನ್ನು ಇಟ್ಟುಕೊಳ್ಳಲೇಬೇಕು ಎಂಬ ನಿಯಮ ಇದೆ. ಅಂದರೆ ಹುಬ್ಬಳಿ ತಂಡದಲ್ಲಿ ಹುಬ್ಬಳಿ ಮೂಲದ ಇಬ್ಬರು ಆಟಗಾರರು ಇರಲೇಬೇಕು. ಸ್ಥಳೀಯ ಆಟಗಾರರಿಗೆ ಅವಕಾಶ ನೀಡಬೇಕು ಎಂಬ ಕಾರಣದಿಂದ ಈ ನಿಯಮ ತರಲಾಗಿದೆ.

ಮುಚ್ಚಿದ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯಲಿವೆ. ಅಂದರೆ ಯಾವುದೇ ಅಭಿಮಾನಿಗಳಿಗೆ ಮೈದಾನದಲ್ಲಿ ವೀಕ್ಷಣೆಗೆ ಅವಕಾಶ ಇರೋದಿಲ್ಲ.

## ಪೃಥ್ವಿ ಶಾ ರೀತಿ ಆಗಬೇಡ

ಇಂಗ್ಲೆಂಡ್ ಅಂಡರ್-19 ವಿರುದ್ಧ ವೈಭವ್ ಸೂರ್ಯವಂಶಿ ಅದ್ಭುತ ಪ್ರದರ್ಶನ ನೀಡಿದ್ದಾರೆ. ಏಕದಿನ ಮತ್ತು ಟೆಸ್ಟ್ ಪಂದ್ಯಗಳಲ್ಲಿ ಅಬ್ಬರಿಸಿರುವ ವೈಭವ್ ಅವರ ಜನಪ್ರಿಯತೆ ಹೆಚ್ಚುತ್ತಿರುವುದರಿಂದ, ಅಭಿಮಾನಿಗಳು ಅವರಿಗೆ ವೃತ್ತಿಪರ ಜೀವನದಲ್ಲಿ ಗಮನಹರಿಸುವಂತೆ ಸಲಹೆ ನೀಡುತ್ತಿದ್ದಾರೆ. ಪೃಥ್ವಿಶಾ ಅವರ ಉದಾಹರಣೆಯನ್ನು ನೀಡುವ ಮೂಲಕ ಅಭಿಮಾನಿಗಳು ಎಚ್ಚರಿಕೆ ನೀಡಿದ್ದಾರೆ.



ಇಂಗ್ಲೆಂಡ್ ನೆಲದಲ್ಲಿ ಅಂಡರ್ 19 ತಂಡದ ವಿರುದ್ಧ ಅದ್ಭುತ ಪ್ರದರ್ಶನ ನೀಡುತ್ತಿರುವ ವೈಭವ್ ಸೂರ್ಯವಂಶಿ ಪ್ರಸ್ತುತ ಸುದ್ದಿಯಲ್ಲಿದ್ದಾರೆ. ಏಕದಿನ ಸರಣಿಯಲ್ಲಿ ಮಿಂಚಿನ ಪ್ರದರ್ಶನ ನೀಡಿದ್ದ ವೈಭವ್, ತಮ್ಮ ಮೊದಲ ಯುವ ಟೆಸ್ಟ್ ಪಂದ್ಯದಲ್ಲೂ ಅದ್ಭುತ ಪ್ರದರ್ಶನ ನೀಡಿದ್ದರು. ವೈಭವ್ ಸೂರ್ಯವಂಶಿ ಅವರ ಮೋಡಿ ಎಷ್ಟಿದೆಯೆಂದರೆ ಇಂಗ್ಲೆಂಡ್‌ನಲ್ಲಿಯೂ ಜನರು ಅವರು ಆಟೋಗ್ರಾಫ್ ಪಡೆಯಲು ಮುಗಿಬೀಳುತ್ತಿದ್ದಾರೆ. ವೈಭವ್ ಸೂರ್ಯವಂಶಿ ಪಡೆಯುತ್ತಿರುವ ಈ ಜನಪ್ರಿಯತೆಯ ನಡುವೆ, ತಮ್ಮ ವೃತ್ತಿಜೀವನದ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು ಎಂಬ ಎಚ್ಚರಿಕೆಯನ್ನು ಸಹ ಪಡೆಯುತ್ತಿದ್ದಾರೆ.

ಅಭಿಮಾನಿಗಳು ಪೃಥ್ವಿಶಾರನ್ನು ಉದಾಹರಣೆ ನೀಡುವ ಮೂಲಕ ವೈಭವ್‌ಗೆ ಬುದ್ಧಿವಾದ ಹೇಳಲಾರಂಭಿಸಿದ್ದಾರೆ.

**ವೈಭವ್‌ಗೆ ಫ್ಯಾನ್ಸ್‌ಗಳಿಂದ ಸಲಹೆ:** ವಾಸ್ತವವಾಗಿ ವೈಭವ್ ಸೂರ್ಯವಂಶಿ ಇಂಗ್ಲೆಂಡ್‌ನಲ್ಲಿ ಮಕ್ಕಳಿಗೆ ಆಟೋಗ್ರಾಫ್ ನೀಡುತ್ತಿರುವ ವಿಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಲಾಗಿದೆ.

ಅವರ ಜನಪ್ರಿಯತೆಯಿಂದ ಅನೇಕ ಅಭಿಮಾನಿಗಳು ಸಂತೋಷಪಟ್ಟಿದ್ದರೆ, ಇನ್ನು ಕೆಲವರು ವೈಭವ್‌ಗೆ ಎಚ್ಚರಿಕೆ ನೀಡಿದ್ದಾರೆ. ಅಭಿಮಾನಿಯೊಬ್ಬರು, 'ನಿಮ್ಮ ಗಮನವನ್ನು ಆಟದ ಮೇಲೆ ಇರಿಸಿ, ಇಲ್ಲದಿದ್ದರೆ ಭಾರತವು ಪೃಥ್ವಿಶಾ ಅವರನ್ನು ಸಹ ನೋಡಿದೆ' ಎಂದು ಕಾಮೆಂಟ್ ಮಾಡಿದ್ದಾರೆ.

**ಇಂಗ್ಲೆಂಡ್‌ನಲ್ಲಿ ವೈಭವ್ ಅಬ್ಬರ**

ವೈಭವ್, ಯೂತ್ ಏಕದಿನ ಸರಣಿಯಲ್ಲಿ ಮತ್ತು ಈಗ ಇಂಗ್ಲೆಂಡ್ ಅಂಡರ್ 19 ತಂಡದ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ. ಏಕದಿನ ಸರಣಿಯಲ್ಲಿ 355 ರನ್ ಬಾರಿಸಿದ್ದ ವೈಭವ್, ಈ ಸರಣಿಯಲ್ಲಿ ಅತಿ ಹೆಚ್ಚು ರನ್ ಬಾರಿಸಿದ ಆಟಗಾರ ಎನಿಸಿಕೊಂಡಿದ್ದರು.



ಪೂಜಾರ ನೀಡಿದ ವಿವರಣೆ



## ಅಗ್ರಸ್ಥಾನಕ್ಕೇರಿದ ರೂಟ್ ಜಾರಿದ ಜೈಸ್ವಾಲ್, ಗಿಲ್, ಪಂತ್

ಲಾರ್ಡ್ಸ್‌ನಲ್ಲಿ ಭರ್ಜರಿ ಶತಕ ಬಾರಿಸಿದ ಜೋ ರೂಟ್ ಐಸಿಸಿ ಟೆಸ್ಟ್ ಬ್ಯಾಟ್ಸ್‌ಮನ್ ಶ್ರೇಯಾಂಕದಲ್ಲಿ ಮತ್ತೆ ನಂಬರ್ ಒನ್ ಸ್ಥಾನ ಪಡೆದಿದ್ದಾರೆ. ಹ್ಯಾರಿ ಬ್ರೂಕ್ ಮೂರನೇ ಸ್ಥಾನಕ್ಕೆ ಕುಸಿದಿದ್ದಾರೆ. ರೂಟ್ ಲಾರ್ಡ್ಸ್ ಪಂದ್ಯದಲ್ಲಿ 144 ರನ್ ಗಳಿಸಿದರೆ, ಬ್ರೂಕ್ ಕೇವಲ 34 ರನ್ ಮಾತ್ರ ಗಳಿಸಿದರು. ಭಾರತದ ಶುಭ್ಮನ್ ಗಿಲ್ ಮತ್ತು ಯಶಸ್ವಿ ಜೈಸ್ವಾಲ್ ಅವರ ಶ್ರೇಯಾಂಕ ಕೂಡ ಕುಸಿದಿದೆ.

ಲಾರ್ಡ್ಸ್ ಟೆಸ್ಟ್ ಪಂದ್ಯದಲ್ಲಿ ಭರ್ಜರಿ ಶತಕ ಬಾರಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ್ದ ಇಂಗ್ಲೆಂಡ್‌ನ ಮಾಜಿ ನಾಯಕ ಜೋ ರೂಟ್ ಇತ್ತೀಚಿನ ಐಸಿಸಿ ಟೆಸ್ಟ್ ಶ್ರೇಯಾಂಕದಲ್ಲಿ ಮತ್ತೆ ನಂಬರ್ ಒನ್ ಸ್ಥಾನವನ್ನು ಆಕ್ರಮಿಸಿಕೊಂಡಿದ್ದಾರೆ. ರೂಟ್ ಅಗ್ರಸ್ಥಾನಕ್ಕೇರಿದರಿಂದಾಗಿ ಇದುವರೆಗೆ ಮೊದಲ ಸ್ಥಾನದಲ್ಲಿದ್ದ ಹ್ಯಾರಿ ಬ್ರೂಕ್ 3ನೇ ಸ್ಥಾನಕ್ಕೆ ಕುಸಿದಿದ್ದಾರೆ. ಹ್ಯಾರಿ ಬ್ರೂಕ್ ಕಳೆದ ವಾರವಷ್ಟೇ ನಂಬರ್ ಒನ್ ಸ್ಥಾನವನ್ನು ಅಲಂಕರಿಸಿಕೊಂಡಿದ್ದರು. ಆದರೆ ಜುಲೈ 16 ರಂದು ಬಿಡುಗಡೆಯಾದ ಹೊಸ ಟೆಸ್ಟ್ ಬ್ಯಾಟ್ಸ್‌ಮನ್‌ಗಳ ಶ್ರೇಯಾಂಕದಲ್ಲಿ ಅವರೀಗ ನಂಬರ್ 1 ಸ್ಥಾನದಿಂದ 3 ನೇ ಸ್ಥಾನಕ್ಕೆ ಕುಸಿದಿದ್ದಾರೆ. ಭಾರತ ವಿರುದ್ಧದ ಲಾರ್ಡ್ಸ್ ಟೆಸ್ಟ್‌ನಲ್ಲಿ ಜೋ ರೂಟ್ ಉತ್ತಮ ಪ್ರದರ್ಶನ ನೀಡಿದ್ದರಿಂದ ಅವರಿಗೆ ಈ ಉಡುಗೊರೆ ಸಿಕ್ಕಿದೆ. ಲಾರ್ಡ್ಸ್ ಟೆಸ್ಟ್‌ನ ಎರಡೂ ಇನ್ನಿಂಗ್ಸ್‌ಗಳಲ್ಲಿ ಜೋ ರೂಟ್ 144 ರನ್ ಗಳಿಸಿದದರು. ಮೊದಲ ಇನ್ನಿಂಗ್ಸ್‌ನಲ್ಲಿ 104 ರನ್ ಬಾರಿಸಿದ್ದ ರೂಟ್, ಎರಡನೇ ಇನ್ನಿಂಗ್ಸ್‌ನಲ್ಲಿ 40 ರನ್‌ಗಳ ಕಾಣಿಕೆ ನೀಡಿದರು. ಆದರೆ ನಂಬರ್ 1 ಸ್ಥಾನದಿಂದ ಕುಸಿದಿರುವ ಹ್ಯಾರಿ ಬ್ರೂಕ್ ಅವರ ಬ್ಯಾಟ್ ಲಾರ್ಡ್ಸ್ ಟೆಸ್ಟ್‌ನಲ್ಲಿ ವಿಶೇಷವಾದದ್ದೇನೂ ಮಾಡಲಿಲ್ಲ. ಎರಡೂ ಇನ್ನಿಂಗ್ಸ್‌ಗಳಲ್ಲಿ ಕೇವಲ 34 ರನ್ ಕಲೆಹಾಕಿದ್ದ ಬ್ರೂಕ್ ಮೊದಲ ಇನ್ನಿಂಗ್ಸ್‌ನಲ್ಲಿ 11 ರನ್ ಬಾರಿಸಿದರೆ, ಎರಡನೇ ಇನ್ನಿಂಗ್ಸ್‌ನಲ್ಲಿ 23 ರನ್‌ಗಳಿಗೆ ಸುಸ್ತಾಗಿದ್ದರು. ಉಳಿದಂತೆ 867 ರೇಟಿಂಗ್ ಅಂಕಗಳನ್ನು ಹೊಂದಿರುವ ನ್ಯೂಜಿಲೆಂಡ್ ಬ್ಯಾಟ್ಸ್‌ಮನ್ ಕೇನ್ ವಿಲಿಯಮ್ಸನ್ ಎರಡನೇ ಸ್ಥಾನಕ್ಕೆ ಬಂದಿದ್ದರೆ, ಜೋ ರೂಟ್ 888 ರೇಟಿಂಗ್ ಅಂಕಗಳೊಂದಿಗೆ ಮೊದಲ ಸ್ಥಾನದಲ್ಲಿದ್ದಾರೆ. ಮೊದಲ ಸ್ಥಾನದಿಂದ ಮೂರನೇ ಸ್ಥಾನಕ್ಕೆ ಕುಸಿದ ಹ್ಯಾರಿ ಬ್ರೂಕ್ 862 ರೇಟಿಂಗ್ ಅಂಕಗಳನ್ನು ಹೊಂದಿದ್ದಾರೆ.

## ಟೀಂ ಇಂಡಿಯಾ ಸೋಲಿಗೆ ಜಡೇಜಾ ಕಾರಣ

ಲಾರ್ಡ್ಸ್ ಟೆಸ್ಟ್ ಪಂದ್ಯದಲ್ಲಿ ಟೀಂ ಇಂಡಿಯಾದ ಸೋಲಿನ ಬಳಿಕ, ರವೀಂದ್ರ ಜಡೇಜಾ ಅವರ ಆಟದ ಬಗ್ಗೆ ವಿವಿಧ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಈ ಬಗ್ಗೆ ಮಾತನಾಡಿರುವ ಚೇತೇಶ್ವರ್ ಪೂಜಾರ, ಮೃದುವಾದ ಚೆಂಡು ಮತ್ತು ನಿಧಾನವಾದ ಪಿಚ್‌ನಲ್ಲಿ ಜಡೇಜಾಗೆ ಹೆಚ್ಚು ಆಕ್ರಮಣಕಾರಿಯಾಗಿ ಆಡಲು ಸಾಧ್ಯವಾಗದಿರಬಹುದು ಎಂದು ಹೇಳಿದ್ದಾರೆ. ಅಲ್ಲದೆ, ಪೂಜಾರ ಅವರು ಜಡೇಜಾ ಅವರ ಬ್ಯಾಟಿಂಗ್ ಸುಧಾರಣೆಯನ್ನು ಶ್ಲಾಘಿಸಿದ್ದಾರೆ ಲಾರ್ಡ್ಸ್ ಟೆಸ್ಟ್ ಪಂದ್ಯವನ್ನು ಸೋತಿರುವ ಟೀಂ ಇಂಡಿಯಾ ಇದೀಗ ನಾಲ್ಕನೇ ಟೆಸ್ಟ್‌ನತ್ತ ಗಮನ ಹರಿಸಿದೆ. ಆದಾಗ್ಯೂ, ಮಳೆ ನಿಂತರೂ ಮರದ ಹನಿ ನಿಂತಿಲ್ಲ ಅನ್ನೋ ರೀತಿ ತಂಡದ ಸೋಲಿನ ಬಗ್ಗೆ ನಾನಾ ರೀತಿಯ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಅದರಲ್ಲೂ ಕೊನೆಯವರೆಗೆ ಅಜೇಯರಾಗಿ ಉಳಿದು ಪಂದ್ಯವನ್ನು ಗೆಲ್ಲಿಸುವಲ್ಲಿ ವಿಫಲರಾದ ರವೀಂದ್ರ ಜಡೇಜಾರನ್ನು ಈ ಸೋಲಿಗೆ ಪ್ರಮುಖ ಕಾರಣ ಎನ್ನಲಾಗುತ್ತಿದೆ. ಅನುಭವಿಗಳಿಂದ ಹಿಡಿದು ಅಭಿಮಾನಿಗಳವರೆಗೆ ಎಲ್ಲರೂ ಜಡೇಜಾ, ಬಾಲಂಗೋಚಿಗಳ ಜೊತೆಗೆ ಜೊತೆಯಾಟ ನಿರ್ಮಿಸುವುದರೊಂದಿಗೆ ಆಗಾಗ್ಗೆ ದೊಡ್ಡ ಹೊಡೆತಗಳಿಗೆ ಕೈಹಾಕಬೇಕಿತ್ತು ಮತ್ತು ಪಂದ್ಯವನ್ನು ಗೆಲ್ಲಿಸಬೇಕಿತ್ತು ಎನ್ನುತ್ತಿದ್ದಾರೆ. ಅವರ ಈ ಹೇಳಿಕೆಯಲ್ಲೂ ಸತ್ಯಾಂಶವಿದೆಯಾದರೂ, ಇದೀಗ ತಂಡದ ಅನುಭವಿ ಆಟಗಾರ ಚೇತೇಶ್ವರ್ ಪೂಜಾರ್, ಲಾರ್ಡ್ಸ್‌ನಲ್ಲಿ ಜಡೇಜಾ ಏಕೆ ಮುಕ್ತವಾಗಿ ಆಡಲಿಲ್ಲ ಎಂಬುದನ್ನು ಬಹಿರಂಗಪಡಿಸಿದ್ದಾರೆ. ವೇಗವಾಗಿ ಆಡಲು ಸಾಧ್ಯವಾಗಲಿಲ್ಲ ಇಂಡಿಯನ್ ಎಕ್ಸ್‌ಪ್ರೆಸ್ ಜೊತೆಗೆ ಈ ಬಗ್ಗೆ ಮಾತನಾಡಿರುವ ಪೂಜಾರ, 'ಚೆಂಡು ಮೃದುವಾಗಿದ್ದರಿಂದ ಮತ್ತು ಪಿಚ್ ಕೂಡ ತುಂಬಾ ನಿಧಾನವಾಗಿದ್ದರಿಂದ ರವೀಂದ್ರ ಜಡೇಜಾಗೆ ಆ ಪಿಚ್‌ನಲ್ಲಿ ವೇಗವಾಗಿ ಆಡಲು ಸಾಧ್ಯವಾಗಲಿಲ್ಲ ಎಂದು ನನಗೆ ಅನಿಸಿದೆ. ಅಲ್ಲದೆ ಟೇಲರೆಂಡರ್‌ಗಳು ಚೆನ್ನಾಗಿ ಬ್ಯಾಟಿಂಗ್ ಮಾಡುತ್ತಿದ್ದರಿಂದ ಗುರಿಗೆ ಹತ್ತಿರ ಬಂದಾಗ ವೇಗವಾಗಿ ಆಡಲು ಜಡೇಜಾ ಯೋಚಿಸಿರಬೇಕು. ನನ್ನ ಪ್ರಕಾರ, ಜಡೇಜಾ ಚೆನ್ನಾಗಿ ಬ್ಯಾಟಿಂಗ್ ಮಾಡಿದರು. ಆ ಪಿಚ್‌ನಲ್ಲಿ ರನ್ ಗಳಿಸುವುದು ತುಂಬ ಕಷ್ಟಕರವಾಗಿತ್ತು. ಆದಾಗ್ಯೂ, ಜಡೇಜಾ ಒಂದು ಕೆಲಸ ಏನು ಮಾಡಬಹುದಾಗಿತ್ತೆಂದರೆ, ಆ ಪಿಚ್‌ನಲ್ಲಿ ಅವರು ಚೆಂಡನ್ನು ಮುಂದೆ ಮುಂದೆ ಆಡಬಹುದಿತ್ತು. ಏಕೆಂದರೆ ಮಿಡ್-ಆಫ್ ಮತ್ತು ಕವರ್ಸ್ ನಡುವೆ ಸಾಕಷ್ಟು ಅಂತರವಿತ್ತು. ಆದಾಗ್ಯೂ, ಇಂಗ್ಲೆಂಡ್ ಬೌಲರ್ಸ್ ಲೆಂಥ್‌ನಲ್ಲಿ ಬೌಲಿಂಗ್ ಮಾಡಲಿಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966